بِسۡمِ اللّٰہِ الرَّحۡمٰنِ الرَّحِیۡمِ نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ وَعَلٰی عَبۡدِہِ الۡمَسِیۡحِ الۡمَوۡعُوۡد

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 03

ಸಂಚಿಕೆ: 15

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

14 ಏಪ್ರೆಲ್ 2022, 14 ಶಹಾದತ್ 1401 ತಬ್‌ಲೀಗ್ ಹಿಜರಿ ಶಮ್‌ಸಿ,
12 ರಮಝಾನ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

شَهۡرُ رَمَضَانَ الَّذِیۡۤ اُنۡزِلَ فِیۡهِ الۡقُرۡاٰنُ
هُدًی لِّلنَّاسِ وَبَیِّنٰتٍ مِّنَ الۡهُدٰی وَالۡفُرۡقَانِ ۚ
فَمَنۡ شَهِدَ مِنۡكُمُ الشَّهۡرَ فَلۡیَصُمۡهُ (بقرہ:186)

(ಅಲ್‌ಬಖರ : 186)

**ಅಂದರೆ: ಸಕಲ ಮಾನವರಿಗೆ ಸನ್ಮಾರ್ಗ ದರ್ಶಕವಾದ, ಮಾರ್ಗದರ್ಶನ ಮತ್ತು ಸತ್ಯಾಸತ್ಯ ವಿವೇಚನೆಯ ಸ್ಪಷ್ಟವಾದ ಸಾಕ್ಷ್ಯಗಳಿಂದ ಕೂಡಿದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್. ಆದ್ದರಿಂದ ನಿಮ್ಮ ಪೈಕಿ ಯಾರಾದರೂ ಈ ಮಾಸವನ್ನು ಪಡೆದರೆ ಆತನು ಅದರಲ್ಲಿ ಉಪವಾಸ ಮಾಡಲಿ.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಹಝ್‌ರತ್ ಅಬೂಬಕರ್(ರ) ರವರ ಮಹಾನತೆ

(1897) ಹಝ್‌ರತ್ ಅಬೂ ಹುರೈರ(ರ) ರಿಂದ ವರದಿಯಾಗಿದೆ. ರಸೂಲುಲಾಹ್(ಸ) ನುಡಿದರು. ಯಾರು ಅಲ್ಲಾಹನ ಮಾರ್ಗದಲ್ಲಿ ಜೋಡಿ ಸಮೇತ ಖರ್ಚು ಮಾಡುವನು, ಅವನಿಗೆ ಸ್ವರ್ಗದ ಬಾಗಿಲುಗಳಿಂದ ಧ್ವನಿ ನೀಡಲಾಗುವುದು. ಓ ಅಲ್ಲಾಹನ ದಾಸರೇ! ಈ (ಬಾಗಿಲು) ಉತ್ತಮವಾಗಿದೆ. ಅಂದಹಾಗೆ ನಮಾಝ್ ನಿರ್ವಹಿಸುವವರಿಗೆ ನಮಾಝಿನ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಯಾರು ಜಿಹಾದ್ ಮಾಡುವವರಲ್ಲಿ ಸೇರುವರೋ ಅವರಿಗೆ ಜಿಹಾದಿನ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಯಾರು ಉಪವಾಸ ಮಾಡುವವರಲ್ಲಿ ಸೇರುವರೋ ಅವರನ್ನು ರಂಜಾನ್ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಯಾರು ದಾನ ಮಾಡುವವರಲ್ಲಿ ಸೇರುವರೋ ಅವರಿಗೆ ದಾನದ ಬಾಗಿಲಿನಿಂದ ಕರೆಯಿಸಿಕೊಳ್ಳಲಾಗುವುದು. ಅಗ ಹಝ್‌ರತ್ ಅಬೂಬಕರ್(ರ) ಅದನ್ನು ಕೇಳಿ ಹೇಳಿದರು. ಹೇ ನಬಿವರ್ಯರೇ! ನನ್ನ ತಂದೆ ತಾಯಿಯರು ನಿಮ್ಮ ಮೇಲೆ ಬಲಿದಾನಗೊಳ್ಳಲಿ, ಯಾರು ಆ ಬಾಗಿಲುಗಳಿಂದ ಕರೆಯಿಸಿಕೊಳ್ಳಲಾಗಯುತ್ತದೆಯೋ ಅವರಿಗೆ ಯಾವುದರ ಅವಶ್ಯಕತೆಯೂ ಇರಲಿಕ್ಕಿಲ್ಲ. (ಹುಝೂರ್(ಸ) ಹೇಳಿದರು). ಇವೆಲ್ಲ ಬಾಗಿಲುಗಳಿಂದಲೂ ಕರೆಯಿಸಿಕೊಳ್ಳುವಂತಹ ಒಬ್ಬರು ಯಾರಾದರೂ ಇದ್ದಾರೆಯೇ? ಅವರು ಹೇಳಿದರು. ಹೌದು ನೀವು ಸಹ ಅವರಲ್ಲಿ ಒಬ್ಬರಾಗಬಹುದೆಂದು ಆಶಿಸುತ್ತೇನೆ.

**ಟಿಪ್ಪಣಿ :** ಹಝ್‌ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲಾಹ್ ಶಾಹ್ ಸಾಹಿಬ್(ರ) ಹೇಳುತ್ತಾರೆ. ಝೌಜೈನ್ ತಾತ್ಪರ್ಯ ಯಾವುದೇ ಜೀವಿಯ ಜೋಡಿ ಎಂಬುದಾಗಿದೆ. ಈ ಸಂಬಂಧ ಕಿತಾಬುಲ್ ಜಿಹಾದ್ 1, ಫಝುಲುಲ್ ಫಿಖಾ ಫೀ ಸಬೀಲಿಲ್ಲಾಹ್, ರಿವಾಯತ್ ನಂಬ್ರ 2841 ನೋಡಿರಿ.

**(ಸಹೀಹ್ ಬುಖಾರಿ, ಸಂಪುಟ-3, ಕಿತಾಬುಸ್ಸೌಮ್, ಮುದ್ರಣ ಖಾದಿಯಾನ್)**

**ನನ್ನ ಸ್ವಭಾವ ಗುಣವೇನೆಂದರೆ ಯಾವ ಕಾರ್ಯವೇ ಆಗಿರಲಿ ಅದು ಅಲ್ಲಾಹನಿಗೋಸ್ಕರವಾಗಿರಬೇಕು ಮತ್ತು ತನ್ನ ಯಾವ ಮಾತೇ ಇರಲಿ ಅದು ಅಲ್ಲಾಹನಿಗೋಸ್ಕರವಾಗಿರಬೇಕು.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಎಲ್ಲರೂ ಗಮನವಹಿಸಿರಿ. ನಾನು ನನಗೆ ಹಾಗೂ ನನ್ನ ಜಮಾಅತ್‌ಗೋಸ್ಕರ ಬಯಸುವುದೇನೆಂದರೆ ಕೇವಲ ಉಪನ್ಯಾಸದ ರೀತಿಯ ಮಾತುಗಾರಿಕೆ ಸೀಮಿತವಾಗಿರಬೇಕು ಮತ್ತು ಅದನ್ನೇ ಗುರಿಯನ್ನಾಗಿ ಮಾಡಿಕೊಳ್ಳಬಾರದು. ಮಾತನಾಡುವವನು ಎಷ್ಟೇ ವಾಕ್ಚಾತುರ್ಯ ತೋರಿಸಲಿ, ಎಂತಹ ಅಲಂಕರಿಕ ಶಬ್ಧಗಳನ್ನು ಉಪಯೋಗಿಸಲಿ, ನಾನು ಅದರಿಂದ ಸಂತೋಷಪಡುವುದಿಲ್ಲ. ನಾನು ಇಷ್ಟಪಡುವುದೇನೆಂದರೆ ಮತ್ತು ಬಯಸುವುದೇನೆಂದರೆ ನಮ್ಮಲ್ಲಿ ಯಾವ ರೀತಿಯಲ್ಲೂ ಕಪಟತನವಿರಬಾರದು. ನನ್ನ ಸ್ವಭಾವ ಗುಣವೇನೆಂದರೆ ನನ್ನ ಯಾವ ಕಾರ್ಯವೇ ಆಗಿರಲಿ ಅದು ಅಲ್ಲಾಹನಿಗೋಸ್ಕರವಾಗಿರಬೇಕು ಮತ್ತು ನನ್ನ ಯಾವ ಮಾತೇ ಆಗಿರಲಿ ಅಲ್ಲಾಹನಿಗೋಸ್ಕರವಾಗಿರಬೇಕು. ಅಲ್ಲಾಹನ ಸಂತೃಪ್ತಿ ಮತ್ತು ಅವನ ನಿರ್ದೇಶನಗಳನ್ನು ಪಾಲಿಸುವುದು ನನ್ನ ಉದ್ದೇಶವಾಗದಿದ್ದರೆ ನನಗೆ ಭಾಷಣ ಮಾಡುವುದಾಗಲೀ ಮತ್ತು ಉಪದೇಶಗಳನ್ನು ನೀಡುವುದು ಒಂದೆಡೆ ಇರಲಿ, ನಾನು ಎಂದೆಂದಿಗೂ, ಒಬ್ಬಂಟಿಯಾಗಿ ಏಕಾಂತದಲ್ಲಿರುವುದನ್ನೆ ಇಷ್ಟಪಡುತ್ತಿದ್ದೆ. ಆದರೆ ಏನು ಮಾಡಲಿ, ಮಾನವ ಕುಲದ ಅನುಕಂಪ ನನ್ನನ್ನು ಹೊರಗೆಳೆಯುತ್ತಿದೆ ಮತ್ತು ಅದು ಅಲ್ಲಾಹನ ಆದೇಶವಾಗಿದೆ, ಅವನು ನನಗೆ ಪ್ರಚಾರಕ್ಕಾಗಿ ನಿಯುಕ್ತಗೊಳಿಸಿದ್ದಾನೆ. ನಾನು ಕೇವಲ ಮಾತುಗಾರಿಕೆಯನ್ನು ಇಷ್ಟಪಡಬಾರದು ಎಂದು ಏಕೆ ಹೇಳಿದ್ದೇನೆಂದರೆ ಪ್ರತಿ ಒಳ್ಳೆಯ ಕಾರ್ಯದಲ್ಲೂ ಶೈತಾನನು ಅಡ್ಡಿಪಡಿಸುವನು. ಆದುದರಿಂದ ಮನುಷ್ಯನು ಉಪದೇಶ ಮಾಡಲು ನಿಂತುಕೊಂಡರೆ, ಉತ್ತಮ ಕಾರ್ಯಗಳಿಗೆ ಪ್ರೇರಣೆ ನೀಡುವುದು ಮತ್ತು ಅಧಮ ಕಾರ್ಯಗಳಿಂದ ತಡೆಗಟ್ಟುವುದು. ನಿಸ್ಸಂಶಯವಾಗಿಯೂ ಅವು ಒಳ್ಳೆಯ ಕಾರ್ಯಗಳಾಗಿವೆ. ಆದರೆ ಭಯಪಡಬೇಕಾದ ವಿಷಯವೇನೆಂದರೆ ಅದರಲ್ಲಿ ಶೈತಾನನ ಪಾಲು ಗೌಪ್ಯವಾಗಿರುತ್ತದೆ. ಒಂದಿಷ್ಟು ಉಪದೇಶ ನೀಡುವವನ ಪಾಲಿಗೆ ಬಂದರೆ ಒಂದಿಷ್ಟು ಆಲಿಸುವವರಿಗೆ ದಕ್ಕುತ್ತದೆ. ಅದರ ವಾಸ್ತವವೇನೆಂದರೆ ಉಪದೇಶಗಾರರು ಉಪದೇಶಕ್ಕಾಗಿ ನಿಂತುಕೊಂಡರೆ ಅವರ ಹಾರ್ದಿಕ ಬಯಕೆ ಏನಾಗುತ್ತದೆಂದರೆ, ನಾನು ಮಾಡುವ ಭಾಷಣ ಎಲ್ಲರನ್ನು ರಂಜಿಸುವಂತಿರಬೇಕು. ನಾನು ಮಾಡುವ ಭಾಷಣ ಆಲಿಸಿ ಎಲ್ಲರೂ ತಲೆದೂಗುವಂತಿರಬೇಕು. ಎಲ್ಲರೂ ಭೇಷ್ ಎನ್ನಬೇಕು. ನಾನು ಈ ರೀತಿ ಭಾಷಣ ಮಾಡುವವರನ್ನು ಓರ್ವ ಭಟ್ಟಂಗಿ, ಕವಾಲುಗಾರ ಮತ್ತು ಹಾಡುಗಾರನಿಗಿಂತ ಹೆಚ್ಚೆಂದು ಭಾವಿಸುವುದಿಲ್ಲ. ಏಕೆಂದರೆ ಅವಲ್ಲರ ಉದ್ದೇಶ ಜನರನ್ನು ರಂಜಿಸುವುದು ಮತ್ತು ಅವರನ್ನು ಸಂತೃಪ್ತಿ ಗೊಳಿಸುವುದೇ ಆಗಿರುತ್ತದೆ.

ಹೌದು ಯಾವುದೇ ಒಂದು ಸಮಾವೇಶದಲ್ಲಿ ಎಲ್ಲ ರೀತಿ ಜನರು ಒಟ್ಟು ಸೇರಿದರೆ ಅಲ್ಲಾಹನತ್ತ ಕಣ್ಣು ತೆರೆಯುವುದಿಲ್ಲ. ಇಲ್ಲಾ ಮಾಶಾ ಅಲ್ಲಾಹ್ ಅವರ ಉದ್ದೇಶವೇ ಆಲಿಸುವವರು ವಾಹ್, ವಾಹ್, ಎನ್ನಬೇಕು ಎಂದಷ್ಟೇ ಇರುತ್ತದೆ. ಇದು ಉಪದೇಶಗಾರನಿಗಿರುವ ಶೈತಾನನ ಪಾಲಾಗಿರುತ್ತದೆ. ಅಲಂಕಾರಿಕ ಶಬ್ದಗಳ ಮೇಲೆ ಮೋಹಿತರಾಗಿ ನಾವು ಸಾಹಿತ್ಯ ಪ್ರಿಯರಾಗಿದ್ದೇವೆ ಎನ್ನುವುದು ಸಭಿಕರಿಗಿರುವ ಶೈತಾನನ ಪಾಲಾಗಿರುತ್ತದೆ. ಅಂದರೆ ಉಭಯತ್ರರ ಉದ್ದೇಶ ಸ್ವಯಂ ಅಲ್ಲಾಹನಿಂದ ಬೇರ್ಪಡುವುದಾಗಿರುತ್ತದೆ. ಉಪದೇಶಗಾರನು ಹೇಳುತ್ತಾನೆ ಅಲ್ಲಾಹನಿಗಾಗಿ ಅಲ್ಲ, ಸಭಿಕರು ಆಲಿಸುತ್ತಾರೆ ಎಂದು ಆದರೆ ಅವರು ಅದನ್ನು ಪಾಲಿಸುವುದಿಲ್ಲ. ಏಕೆಂದರೆ ಅವರು ಆಲಿಸುವ ಉದ್ದೇಶ ಅಲ್ಲಾಹನಿಗಾಗಿರುವುದಿಲ್ಲ ಕೇವಲ ಒಂದು ರೀತಿಯ ಮನೋರಂಜನೆಯಾಗಿರುತ್ತದೆ.

**(ಮಲ್ಫೂಝಾತ್, ಸಂಪುಟ-1, ಪುಟ-360-361, ಮುದ್ರಣ 2018 ಖಾದಿಯಾನ್)**

**ಇಡೀ ಪ್ರಪಂಚವು ಒಂದು ಸರಪಳಿಯಲ್ಲಿ ಸೇರಿಕೊಂಡಿದೆ ಎಂದಾದರೆ ಅದರ ಸೃಷ್ಟಿಕರ್ತನು ಒಬ್ಬನೇ ಆಗಿದ್ದಾನೆ ಎಂದು ನಂಬಬೇಕಾಗುತ್ತದೆ.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹ್ಲ್ ವಚನ 23 **ಇಲಾಹುಕುಮ್ ಇಲಾಹುವ್ವಾಹಿದ್; ಫಲ್ಲಝೀನ ಲಾ ಯುಮಿನೂನ ಬಿಲ್ ಆಖಿರತಿ ಖುಲೂಬುಹುಮ್ಮುನ್‌ಕಿರತುವ್ವಹುಮ್ ಮುಸ್ತಕ್ಬಿರೂನ್** ರ ವ್ಯಾಖ್ಯಾನ್ನ ಮಾಡುತ್ತಾ ಹೇಳುತ್ತಾರೆ: (ನೆನಪಿಟ್ಟುಕೊಳ್ಳಿರಿ) ನಿಮ್ಮ ದೇವನು ಏಕಮಾತ್ರ ದೇವನಾಗಿದ್ದಾನೆ. ಇದು ಬರೀ ಘೋಷಣೆ ಅಲ್ಲ, ಪವಿತ್ರ ಖುರ್‌ಆನ್ ತನ್ನನ್ನು ನಿರಾಕರಿಸುವವರಿಗೆ ಸಂಬೋಧನೆ ಮಾಡಿದರೆ ಕೇವಲ

*(ಪುಟ ಸಂಖ್ಯೆ-11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

إِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಪೀರ್ ಮಹರ್ ಅಲಿ ಶಾಹ್ ಗೊಲಡ್ವಿ ಅವರಿಗಾಗಿ ಮತ್ತೊಂದು ವೈಭವಯುತ ಬಹುಮಾನದ ಪಂಥಾಹ್ವಾನ ಪ್ರತಿರೂಪವಾಗಿ ವ್ಯಾಖ್ಯಾನ ಬರೆದ ಮೇಲೆ, ಆ ವ್ಯಾಖ್ಯಾನ ಅರ್ಥವತ್ತಾಗಿ ಹಾಗೂ ವಿಷಯಾಧಾರಿತವಾಗಿ ಇದ್ದರೆ, ಹಾಗೂ ನೀವು ನನ್ನ ವ್ಯಾಖ್ಯಾನದಿಂದ ತಪ್ಪುಗಳನ್ನು ಹುಡುಕಿ ತೋರಿಸಿದರೆ ಪ್ರತಿಯೊಂದು ತಪ್ಪಿಗೆ ಐದು ರೂಪಾಯಿ ಬಹುಮಾನ ನೀಡುವೆನು.**

ಸಯ್ಯದ್‌ನಾ ಹಜ್‌ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ನುಝೂಲುಲ್ ಮಸೀಹ್" ರೂಹಾನಿ ಖಝಾಯಿನ್, ಸಂಪುಟ 8 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ನಾವು ಈ ಮೊದಲು ಹೇಳಿದಂತೆ ಎಪ್ಪತ್ತು ದಿನಗಳ ಒಳಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅರಬಿಯಲ್ಲಿ ಸೂರಃ ಫಾತಿಹದ ವ್ಯಾಖ್ಯಾನ "ಇಜಾಝುಲ್ ಮಸೀಹ್" ಹೆಸರಿನಲ್ಲಿ ಅರ್ಥಗರ್ಭಿತ ಹಾಗೂ ತತ್ವಪೂರ್ಣವಾಗಿ ಬರೆದು ಪ್ರಕಟಿಸಿರುವರು. ಆದರೆ ಪೀರ್ ಮಹರ್ ಶಾಹ್ ಗೊಳಳವಿ ಅವರು ಯಾವ ವ್ಯಾಖ್ಯಾನವನ್ನು ಬರೆದು ಕಳುಹಿಸಲಿಲ್ಲ. ಆದರೆ ಒಂದೂವರೆ ವರ್ಷ ನಂತರ ಅವರು ಒಂದು ಗ್ರಂಥ "ಸೈಫ್ ಚಿಶ್ತಿಯಾಮಿ" ಹೆಸರಿನಿಂದ ಉರ್ದುವಿನಲ್ಲಿ ಬರೆದು ಕಳುಹಿಸಿದ್ದರು. ಅದರಲ್ಲಿ ವ್ಯಾಖ್ಯಾನದ ವಿಷಯವೇ ಇರಲಿಲ್ಲ. ಕೇವಲ ನಿರರ್ಥಕ ಆರೋಪಗಳು ಮಾತ್ರ ಇದ್ದವು. ಈ ಸಂಬಂಧ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಉತ್ತರ ಹಿಂದಿನ ಸಂಚಿಕೆಯಲ್ಲಿ ನಾವು ಪ್ರಸ್ತುತಪಡಿಸಿದ್ದೆವು. ಅವರ ಇನ್ನಷ್ಟು ಉತ್ತರಗಳು ಮತ್ತು ವೈಭವಯುತ ಅಧ್ಯಾಪನೆಗಳು ಹಾಗೂ ಅವರ ಬಹುಮಾನದ ಪಂಥಾಹ್ವಾನ ನಾವು ಪ್ರಸ್ತುತಪಡಿಸುವೆವು.

**ತಫ್ಸೀರ್‌ನ (ವ್ಯಾಖ್ಯಾನದಲ್ಲಿ) ದಲ್ಲಿ ತಪ್ಪು ಹುಡುಕಿ ಕೊಟ್ಟಲ್ಲಿ ಒಂದು ತಪ್ಪಿಗೆ ಐದು ರೂಪಾಯಿ ಬಹುಮಾನದ ಪಂಥಾಹ್ವಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನಾವು ಎಷ್ಟೋ ಸಲ ಈ ಜಾಹೀರಾತು ಸಹ ನೀಡಿದ್ದೆವು. ನಮ್ಮ ಎದುರಾಗಿ ಯಾವುದೆ ಅರಬಿ ಪತ್ರಿಕೆ(ನಿಯತಕಾಲಿಕ) ಬರೆಯಿರಿ, ಮತ್ತು ಅರಬಿ ಭಾಷೆಯ ತಜ್ಞರು ಅದರ ತೀರ್ಪುಗಾರರಾಗಲಿ, ನಿಮ್ಮ ಪತ್ರಿಕೆ(ನಿಯತಕಾಲಿಕ) ಅರ್ಥಗರ್ಭಿತವಾಗಿಯೂ ಮತ್ತು ತತ್ವಾಧಾರಿತವಾಗಿದ್ದರೆ ನನ್ನ ಸಂಪೂರ್ಣ ದಾವೆಯು ಸುಳ್ಳಾಗುವುದು. ಮತ್ತು ನಾನು ಈಗಲೂ ಸಹ ಒಪ್ಪಿಕೊಳ್ಳುವುದೇನೆಂದರೆ ನೀವು ಬರೆದಿರುವ ತಫ್ಸೀರ್ ನಲ್ಲಿ ಯಾವುದೇ ರೀತಿಯ ತಪ್ಪುಗಳು ಇಲ್ಲ ಎಂದು ಸ್ಪಷ್ಟವಾದಾಗ ನೀವು ನನ್ನ ತಫ್ಸೀರ್ ವ್ಯಾಖ್ಯಾನದಿಂದ ತಪ್ಪುಗಳನ್ನು ಹುಡುಕಿಕೊಟ್ಟರೆ ಒಂದು ತಪ್ಪಿಗೆ ಐದು ರೂಪಾಯಿ ಬಹುಮಾನ ನೀಡುವೆವು. ಆದರಿಂದ ನಿಷ್ಪ್ರಯೋಜಕ ಆಕ್ಷೇಪ ಎತ್ತುವ ಬದಲು ಅರಬಿಯಲ್ಲಿ ವ್ಯಾಖ್ಯಾನ ಬರೆದು ತನ್ನ ಪ್ರೌಢತೆ ಸಾಬೀತು ಮಾಡಬೇಕು. ಏಕೆಂದರೆ ಯಾವ ವಿಷಯದಲ್ಲಿ ಒಬ್ಬನು ಪರಿಪೂರ್ಣತೆ ಸಾಧಿಸಲಿಲ್ಲ ಎಂದಾದರೆ ಅವನಿಗೆ ಆ ವಿಷಯದಲ್ಲಿ ಆಕ್ಷೇಪ ಎತ್ತಲು ಹಕ್ಕಿರುವುದಿಲ್ಲ. ಒಬ್ಬ ಶಿಲ್ಪಿಯು ಶಿಲ್ಪಕಲೆಯು ಮೇಲೆ ಆಕ್ಷೇಪ ಎತ್ತಬಹುದು. ಒಬ್ಬ ಕುಲುಮೆಗಾರ ಕುಲುಮೆಗಾರರನ್ನು ಆಕ್ಷೇಪಿಸಬಹುದು. ಆದರೆ ಒಬ್ಬ ಸಿಪಾಯಿ ಕರ್ಮಚಾರಿಗೆ ಜಾಣ ಮೇಸ್ತ್ರಿಯ ಮೇಲೆ ಆಕ್ಷೇಪ ಮಾಡಲು ಹಕ್ಕಿರುವುದಿಲ್ಲ.

(ನುಝೂಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–400)

**ಅರಬಿ ಬರೆಯಲಾಗದವನು ಅರಬಿಯ ತಪ್ಪುಗಳನ್ನು ಹೆಕ್ಕಿ ತೋರಿಸಲು ಹಕ್ಕುದಾರನಾಗಬಹುದೇ?**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಿಮಗೆ ಸ್ವಂತವಾಗಿ ಒಂದು ಸಾಲು ಸಹ ಅರಬಿ ಬರೆಯುವ ಅರ್ಹತೆ ಇಲ್ಲ ಎಂದ ಮೇಲೆ, ಸೈಫ್ ಚಿಶ್ತಿಯಾಯಿನಲ್ಲಿ ಸಹ ನೀವು ಕದ್ದ ಮಾಲನ್ನು ತನ್ನ ಮಾಲು ಎಂದ ಹಾಗಾಯಿತು. ಹೀಗಿರುವಾಗ ಏಕೆ ನಿಮಗೆ ನಾಚಿಕೆಯಾಗುವುದಿಲ್ಲ. ಓ ಭಲೆ ಮನುಷ್ಯ ಮೊದಲು ತಮ್ಮ ಅರಬಿ ಪಾಂಡಿತ್ಯ ಆದರೂ ಸಾಬೀತು ಮಾಡಿ ತೋರಿಸಿರಿ. ನಂತರ ನನ್ನ ಗ್ರಂಥದಿಂದ ತಪ್ಪು ಹುಡುಕಿ ತೋರಿಸಿರಿ. ಆಗ ಒಂದೊಂದು ತಪ್ಪಿಗೆ ಒಂದೊಂದು ರೂಪಾಯಿ ನಮ್ಮಿಂದ ಪಡೆಯಿರಿ. ನನ್ನ ಎದುರಾಗಿ ಅರಬಿಯಲ್ಲಿ ಪತ್ರಿಕೆ ಬರೆದು ನನ್ನ ಗ್ರಂಥದ ಪವಾಡವನ್ನು ಸುಳ್ಳಾಗಿಸಿ ತೋರಿಸಿರಿ. ಅಕಟಾಕಟ! ಹತ್ತು ವರ್ಷಗಳ ಅವಧಿ ಕಲೆಯಿತು. ಯಾರೂ ಸಹ ಸಜ್ಜನಿಕೆಯ ರೀತಿಯಲ್ಲಿ ನನ್ನನ್ನು ಎದುರಿಸಲಿಲ್ಲ. ಹಾಗೆ ಮಾಡಿದ್ದೆನಾದರೂ ಇದ್ದರೆ ಕೇವಲ ನಿಮ್ಮ ಗ್ರಂಥದಲ್ಲಿ ಅದು ತಪ್ಪಾಗಿದೆ, ಇದು ತಪ್ಪಾಗಿದೆ ಅನ್ನುವುದು ಹಾಗೂ ಆ ವಾಕ್ಯ, ಈ ವಾಕ್ಯ ಕದ್ದು ಬರೆಯಲಾಗಿದೆ ಎನ್ನುವುದು ಎಷ್ಟು ಸರಿ? ಅವರಿಂದ ಸಾಧ್ಯವಾದರೆ ಎದುರು ಏಕೆ ಬರುವುದಿಲ್ಲ? ನರಿಯ ಹಾಗೆ ಏಕೆ ಓಡಿ ಹೋಗುತ್ತಾನೆ? ಓ ಮೂಢನೆ ಮೊದಲು ಯಾವುದೇ ವ್ಯಾಖ್ಯಾವಾದರೂ ಅರಬಿಯಲ್ಲಿ ಬರೆದು ತನ್ನ ಅರಬಿ ಪಾಂಡಿತ್ಯವನ್ನು ಸಾಬೀತು ಮಾಡು. ಆಗ ನಿನಗೆ ಆಕ್ಷೇಪ ಎತ್ತುವುದು ಹಕ್ಕು ಸಿಗಬಹುದು. ಸಾಕ್ಷ್ಯಗಳಿಲ್ಲದೆ ಅರಬಿ ಶಿಕ್ಷಣದ ಬಗ್ಗೆ ನನ್ನನ್ನು ಎತ್ತಿ ತೋರಿಸುವುದು, ಕೃತಿ ಚೌರ್ಯದ ಆರೋಪ ಹಚ್ಚುವುದು, ವ್ಯಾಕರಣದ ತಪ್ಪು ತಿಳಿಸುವುದು, ಇವೆಲ್ಲ ಕೇವಲ ಎಂಜಲು ತಿನ್ನುವ ಮಾತಾಗಿದೆ. ಓ ಅಜ್ಞಾನಿಯೇ, ಲಜ್ಜೆಗೇಡಿಯೇ ಮೊದಲು ಅರಬಿಯಲ್ಲಿ ಅರ್ಥಗರ್ಭಿತ ಹಾಗೂ ತಫ್ಸಿರ್ ಆಧಾರವಾಗಿ ಯಾವುದೇ ಸೂರಃ (ಅನ್ಯಾಯ)ದ ವ್ಯಾಖ್ಯಾನ ಬರೆದು ಪ್ರಕಟಿಸು. ಆಗ ನಿನಗೆ ಬೆರೊಬ್ಬರ ಹತ್ತಿರ ನನ್ನ ಗ್ರಂಥದಿಂದ ತಪ್ಪು ಹುಡುಕುವ, ಕೃತಿಚೌರ್ಯದ ಆರೋಪ ಹಚ್ಚಲು ನಿನಗೆ ಹಕ್ಕು ಇರುತ್ತದೆ. ಯಾವ ವ್ಯಕ್ತಿ ಸಾವಿರಾರು ಭಾಗಗಳನ್ನು ಅರಬಿಯಲ್ಲಿ ಬರೆದು ತೋರಿಸಿರುವನೇ ಹೊರತು ಕೇವಲ ಭೂಟಾಟಿಕೆ ಮಾಡಲಿಲ್ಲ, ಬದಲು ಸತ್ಯವಾದ ಸಾಕ್ಷ್ಯಗಳನ್ನು ವಿವರಿಸಿರುವನು. ಕೇವಲ ಅವನನ್ನು ನಿರಾಕರಿಸುವುದು ಅವನಿಗೆ ಉತ್ತರವಾಗಬಹುದೇ ಅಥವಾ ಎಲ್ಲಿಯವರೆಗೆ ಕಾರ್ಯದ ಎದುರು ಕಾರ್ಯ ಮಾಡಿ ತೋರಿಸುವುದಿಲ್ಲ, ಕೇವಲ ಭೂಟಾಟಿಕೆಯಿಂದ ನ್ಯಾಯ ತೀರ್ಪು ಕಾರಣವಾಗಲು ಸಾಧ್ಯವೇ. ಅದರಿಂದ ಯಾವ ಅರ್ಹತೆ ಸಾಬೀತಾಗಲು ಸಾಧ್ಯ? ಕೇವಲ ನಾಲಿಗೆಯಿಂದ ಅದು ತಪ್ಪು, ಇದು ತಪ್ಪು, ಆ ವಾಕ್ಯಗಳನ್ನು ಕದ್ದು ಬರೆಯಲಾಗಿದೆ ಎನ್ನುವುದರಿಂದ ಏನು ಪ್ರಯೋಜನ? ಅದರಿಂದ ನಿಮ್ಮ ಯಾವ ಮಹಾನತೆ ಸಾಬೀತಾದಂತಾಯಿತು? ತಮ್ಮ ಮಹಾನತೆ ಸಾಬೀತು ಮಾಡಿ ತೋರಿಸದಿದ್ದರೆ ನಿಮ್ಮ ಆಕ್ಷೇಪಗಳನ್ನು ಹೇಗೆ ಸರಿಯಾಗುವುದು? ಬದಲು ಯಾವ ವ್ಯಕ್ತಿ ಅಂತಹ ಅರ್ಹತೆಯುಳ್ಳ ಮತ್ತು ಪರಿಪೂರ್ಣ ಮನುಷ್ಯರ ಮೇಲೆ ಆಕ್ಷೇಪ ಮಾಡುವನೋ, ಯಾವ ಜನರು ತನ್ನ ಯಾವ ಮಹಾನತೆ ನಮೂನೆಯನ್ನು ತೋರಿಸಲಾರರು, ಅದಕ್ಕಿಂತ ಹುಚ್ಚುತನ ಬೇರೊಂದಿಲ್ಲ. (ಅದೇ ಪುಟ 441).

**ವಾಗ್ದತ್ತ ಮಸೀಹರಿಗೆ ತತ್ವಾಧಾರಿತ ಬರಹದ ಪವಾಡವನ್ನು ಉಕ್ಕುವ ಸಮುದ್ರ ರೀತಿಯಲ್ಲಿ ನೀಡಲಾಗಿದೆ. ಅಂತಹ ವ್ಯಕ್ತಿಯೊಬ್ಬನ ಮೇಲೆ ಆಕ್ಷೇಪ ಮಾಡುವವನು ಓರ್ವ ಶಾಪಗ್ರಸ್ತ ಕ್ರಿಮಿ ಹೊರತು ಮನುಷ್ಯನಲ್ಲ. ಏಕೆಂದರೆ ಸ್ವಯಂ ನಿಷ್ಪ್ರಯೋಜಕನಾಗಿ, ಅಂತಹ ವ್ಯಕ್ತಿಯೊಬ್ಬನ ಮೇಲೆ ಆರೋಪ ಮಾಡುತ್ತಿದ್ದಾನೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಮನುಷ್ಯನು ಲೇಖನಿ ಸರದಾರನಾದರೆ ಅವನ ಜ್ಞಾನ ಮತ್ತು ಜಾಣ್ಮೆ ಹಲವು ರೀತಿಯಲ್ಲಿ ಸಾಹಿತ್ಯಕ ಶೃಂಗಾರದಿಂದ ಬರಹ ಮತ್ತು ಅರ್ಥಗರ್ಭಿತ ಹಾಗೂ ತತ್ವಪೂರ್ಣ ಉದಾಹರಣೆಗಳನ್ನು ನೀಡುವುದಾದರೆ ಮತ್ತು ಅವನಿಗೆ ಅಲ್ಲಾಹನ ಸಾನಿಧ್ಯದಲ್ಲಿ ಗದ್ಯ ಹಾಗೂ ಪದ್ಯ ಬರೆಯುವುದರಲ್ಲಿ ಪ್ರಾವೀಣ್ಯತೆ ಪಡೆಯುವಂತಾದರೆ ಮತ್ತು ಯಾವುದೆ ಕುಂದುಕೊರತೆ ಬಾಕಿ ಉಳಿಯದಿದ್ದರೆ ಅಂತಹ ಪರಿಪೂರ್ಣತೆ ಮತ್ತು ಮಹಾನತೆ ಸ್ಥಿತಿಯಲ್ಲಿ ಅವನ ಬರಹದಲ್ಲಿ ಸಮಯೋಚಿತವಾಗಿ ಸಂಧರ್ಭಾನುಸಾರ ಕೆಲ ಖುರ್‌ಆನ್‌ನ ವಚನಗಳು ಸೇರಿದರೆ ಅಥವಾ ಪೂರ್ವ ಮಹಾತ್ಮರುಗಳ ಕೆಲ ನುಡಿ ಮುತ್ತುಗಳು ಮತ್ತು ಉದಾಹರಣೆಗಳು ಬಂದರೆ ಅದು ಆಕ್ಷೇಪಾರ್ಹ ಆಗುವುದಿಲ್ಲ. ಏಕೆಂದರೆ ಅದು ಅವನ ಭಾಷಾ ಪಾಂಡಿತ್ಯದ ಒಂದು ಒಪ್ಪತಕ್ಕ ವಿಷಯವಾಗಿರುತ್ತದೆ. ಅದು ನದಿಯ ರೀತಿ ಹರಿಯುತ್ತಾ ಮತ್ತು ವಾಯುವಿನಂತೆ ನಡೆಯುವ ಕ್ರಿಯೆ ಆಗಿರುತ್ತದೆ. ಸ್ವಯಂ ಏನೂ ತಿಳಿಯದೆ ನಿಷ್ಪ್ರಯೋಜಕನಾಗಿ ಸಾರಗರ್ಭಿತ ತತ್ವಪೂರ್ಣ ಬರಹಗಾರನೊಬ್ಬನ ಮೇಲೆ ಆಕ್ಷೇಪವೆತ್ತುವೆನು. ಒಬ್ಬ ಶಾಪಗ್ರಸ್ತ ಕ್ರಿಮಿ ಆಗಬಹುದೆ ಹೊರತು ಮನುಷ್ಯನಲ್ಲ. ಏಕೆಂದರೆ ಅವನು ಹಲವು ಅರಬಿ ಗ್ರಂಥಗಳನ್ನು ಅರ್ಥಗರ್ಭಿತ, ತತ್ವಾಧಾರಿತ ರೀತಿಯಲ್ಲಿ ಬರೆದು ತನ್ನ ಪವಾಡ ಪ್ರದರ್ಶಿಸಿದ ಒಬ್ಬನ ಮೇಲೆ ಆಕ್ಷೇಪ ಮಾಡುವುದೆಂದರೆ ಅದು ಅರ್ಥಹೀನ. ಅವನಿಗೆ ತತ್ವಾಧಾರಿತ ಬರಹಗಳ ಪವಾಡದ ಅಸೀಮ ಸಮುದ್ರ ರೀತಿಯ ಜ್ಞಾನ ನೀಡಲಾಗಿದೆ.

**ಈ ಜನರು ಅದೇ ಮಣ್ಣಿನಂತೆ ಸೃಷ್ಟಿಗೊಂಡವರಾಗಿದ್ದಾರೆ. ಆ ವ್ಯಕ್ತಿಯ ನಾಲಿಗೆಯಿಂದ ಹೊರಡಿತ್ತು "ಫತಬಾರಕಲ್ಲಾಹು ಅಹಸನಲ್ ಖಾಲಿಖೀನ್" ಕಾಕತಾಳಿಯದಂತೆ ಅದೇ ವಚನ ಅವತರಿಸಿತು ಆಗ ಅವನು ಧರ್ಮಭ್ರಷ್ಟನಾದನು.**

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹರ್ಝ್‌ರತ್ ಅಬೂಬಕರ್(ರ) ಹೇಳಿದರು: ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲೆ ನಾನು ಪ್ರಮಾಣ ಮಾಡುತ್ತೇನೆ! ವನ್ಯಮೃಗಗಳು ನನ್ನನ್ನು ಸುಲಿದು ತಿನ್ನುವುದಾಗಿ ನನಗೆ ಖಚಿತವಿದ್ದರೂ ಹರ್ಝ್‌ರತ್ ಪೈಗಂಬರ್(ಸ) ಉಸಾಮರ ಸೈನ್ಯದ ಕುರಿತು ಜಾರಿಗೊಳಿಸಿದ ತೀರ್ಮಾನವನ್ನು ನಾನು ಕಾರ್ಯಗತಗೊಳಿಸುವೆನು**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ್, ಸಿದ್ದೀಖೆ ಅಕ್ಬರ್ ಹರ್ಝ್‌ರತ್ ಅಬೂಬಕರ್ ಸಿದ್ದೀಖ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಯಾವ ಸೈನ್ಯವನ್ನು ರವಾನೆ ಮಾಡಿಸಲು ಹರ್ಝ್‌ರತ್ ಪೈಗಂಬರ್(ಸ) ಆದೇಶ ನೀಡಿದ್ದರೋ ಅದನ್ನು ತಡೆಯುವ ಕೆಲಸವನ್ನು, ಹರ್ಝ್‌ರತ್ ಪೈಗಂಬರ್(ಸ)ರ ನಿಧನದ ನಂತರ ಅಬೂಖಹಾಫನ ಮಗನು ಮಾಡಬೇಕೆಂದು ನೀವು ಬಯಸುತ್ತೀರಾ?**

**ಅಲ್ಲಾಹನಾಣೆ, ಝಕಾತನ್ನು ನೀಡುವುದನ್ನು ನಿರಾಕರಿಸುವವರು ಹರ್ಝ್‌ರತ್ ಪೈಗಂಬರ್(ಸ)ರ ಕಾಲದಲ್ಲಿ ನೀಡುತ್ತಿದ್ದ ಹಾಗೆ ಈಗ ಒಂದು ಹಗ್ಗ ನೀಡುವುದನ್ನು ನಿರಾಕರಿಸಿದರೂ ನಾನು ಅವರೊಂದಿಗೆ ಯುದ್ಧ ಮಾಡುವೆನು.**

**ಈಗಿರುವ ಯುದ್ಧದ ಸ್ಥಿತಿ ಹಾಗೂ ಅಣ್ವಸ್ತ್ರ ಯುದ್ಧದ ಬೆದರಿಕೆಯ ನಿಟ್ಟಿನಲ್ಲಿ ದರೂದೆ ಷರೀಫ್, ಇಸ್ತಿಗ್‌ಫಾರ್ ಹಾಗೂ ದುಆಗಳು ಬಹಳವಾಗಿ ಮಾಡಲು ಕೋರಿಕೆ**

**ಲಾಹೋರಿನ ಝಫರ್ ಇಖ್ಬಾಲ್ ಹಾಶಿಮಿ ಸಾಹಿಬ್‌ರ ಪತ್ನಿಯಾದ ಸಯ್ಯದ ಖೈಸರ್ ಝಫರ್ ಹಾಶಿಮಿ ಸಾಹಿಬರವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11–03–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ - اَلرَّحْمٰنِ الرَّحِيْمِ - مٰلِكِ يَوْمِ الدِّيْنِ -

اِيَّاكَ نَعْبُدُ وَاِيَّاكَ نَسْتَعِيْنُ - اِهْدِنَا الصِّرَاطَ الْمُسْتَقِيْمَ -

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ -

ಹರ್ಝ್‌ರತ್ ಅಬೂಬಕರ್(ರ) ಖಲೀಫರಾದ ನಂತರ ಅವರಿಗೆ ಎದುರಿಸಬೇಕಾಗಿ ಬಂದ ಕಷ್ಟತೆಗಳ ಬಗ್ಗೆ ಪ್ರಸ್ತಾಪಿಸಲಾಗುತ್ತಿತ್ತು. ಅವುಗಳಲ್ಲಿ ಮೊದಲ ಕಷ್ಟತೆ ಎಂಬುದು ಹರ್ಝ್‌ರತ್ ಪೈಗಂಬರ್(ಸ)ರ ನಿಧನದ ದುಃಖವಾಗಿತ್ತು. ಆ ದುಃಖ ಎಲ್ಲ ಮುಸ್ಲಿಮರಿಗೂ ಇತ್ತು. ಆದರೆ ಚಿಕ್ಕಂದಿನ ಮಿತ್ರನಾಗಿದ್ದ ಹರ್ಝ್‌ರತ್ ಅಬೂಬಕರ್(ರ)ರಿಗೆ ಅದರ ಅತ್ಯಂತ ಹೆಚ್ಚಿನ ದುಃಖವಿತ್ತು. ಅದಲ್ಲದೇ ಅವರು ಹೊಂದಿದ್ದ ನಿಷ್ಠೆಯ ಉನ್ನತ ಪದವಿ ಮತ್ತು ಬೈಅತ್ತಿನ ಬಗ್ಗೆ ಅವರಿಗೆ ಇದ್ದ ಆಳವಾದ ಅರಿವು ಬೇರೆ ಯಾರಿಗೂ ಇದ್ದಿರಲಿಲ್ಲ. ಹೀಗಿದ್ದರೂ ಅವರು ಆ ಸಮಯದಲ್ಲಿ ಬಹಳ ಧೈರ್ಯವನ್ನು ತೋರಿಸಿದರು. ಮೊದಲ ಸೂಕ್ಷ್ಮ ಮತ್ತು ಭಯಾನಕ ಹಂತ ಹರ್ಝ್‌ರತ್ ಪೈಗಂಬರ್(ಸ)ರ ನಿಧನದ ದುಃಖವಾಗಿತ್ತು. ಅದರಿಂದ ಎಲ್ಲ ಸಹಾಬಿಯರು ದುಃಖದ ತೀವ್ರತೆಯಿಂದ ಹುಚ್ಚರಂತೆ ಆಗಿದ್ದರು. ಅಚಾನಕ್ಕಾದ ಈ ಮರಣವನ್ನು ಯಾರಿಗೂ ಸಹಿಸಲು ಆಗುತ್ತಿರಲಿಲ್ಲ. ಹರ್ಝ್‌ರತ್ ಪೈಗಂಬರ್(ಸ)ರ ಅಗಲುವಿಕೆಯನ್ನು ಯಾರಿಗೂ ಊಹಿಸಲು ಕೂಡ ಸಾಧ್ಯವಾಗುತ್ತಿರಲಿಲ್ಲ. ಹರ್ಝ್‌ರತ್ ಪೈಗಂಬರ್(ಸ)ರ ಮರಣವು ಎಷ್ಟು ತೀವ್ರ ಮತ್ತು ನೋವುಭರಿತವಾಗಿತ್ತು ಎಂದರೆ, ಶ್ರೇಷ್ಠ ಸಹಾಬಿಯರು ದುಃಖದಿಂದ ಪ್ರಜ್ಞೆ ತಪ್ಪಿದವರಂತೆ ಆಗಿದ್ದರು. ಹರ್ಝ್‌ರತ್ ಉಮರ್(ರ)ರಂತಹ ಧೈರ್ಯವಂತರ ಪ್ರೀತಿಯ ತೀವ್ರತೆಯ ಸ್ಥಿತಿ ಇನ್ನೂ ಹೆಚ್ಚಾಗಿತ್ತು. ಯಾರಾದರೂ ಮುಹಮ್ಮದ್(ಸ) ನಿಧನರಾದರು ಎಂದು ಹೇಳಿದರೆ ಅವರ ತಲೆಯನ್ನು ಕಡಿಯುವೆನು ಎಂದು ಹೇಳುತ್ತಾ ಖಡ್ಗವೆತ್ತಿ ಅವರು ನಿಂತಿದ್ದರು. ಈ ಮಾತನ್ನು ಕೇಳಿ ಹರ್ಝ್‌ರತ್ ಪೈಗಂಬರ್(ಸ) ಸತ್ಯವಾಗಿಯೂ ಮೃತಪಟ್ಟಿರುವರೋ ಇಲ್ಲವೋ ಎಂಬ ಸಂಶಯ ಮುಸ್ಲಿಮರಿಗೆ ಉಂಟಾಯಿತು. ಹರ್ಝ್‌ರತ್ ಪೈಗಂಬರ್(ಸ)ರ ಈ ಪ್ರೇಮಿಗಳು ಏಕತೆಯ ಮುಖ್ಯ ಪಾಠವನ್ನೇ ಮರೆತು ಬಿಟ್ಟುಕೊಂಡು ಹೀಗೆ ಹೇಳುತ್ತಿದ್ದರು: ಹರ್ಝ್‌ರತ್ ಪೈಗಂಬರ್(ಸ) ಎಂದಿಗೂ ಮೃತಪಡಲಾರರು ಮತ್ತು ಮೃತಪಟ್ಟೂ ಇಲ್ಲ. ಆ ಸಮಯದಲ್ಲಿ ಹರ್ಝ್‌ರತ್ ಅಬೂಬಕರ್(ರ) ಮಸ್ಜಿದ್ ನಬವಿಗೆ ಬಂದರು. ಅಲ್ಲಿ ಒಟ್ಟುಗೂಡಿದ ಜನರನ್ನು ಸಂಬೋಧಿಸುತ್ತಾ ಹೇಳಿದರು: **ಮನ್‌ಕಾನ ಮಿನ್‌ಕುಂ ಯಅ್‌ಬುದು ಮುಹಮ್ಮದನ್. ಫಇನ್ನ ಮುಹಮ್ಮದನ್ ಖದ್ ಮಾತ ವಮನ್‌ಕಾನ ಮಿನ್‌ಕುಂ ಯಅ್‌ಬುದುಲ್ಲಾಹ ಫಇನ್ನಲ್ಲಾಹ ಲಾ ಯಮೂತ್**. ಎಂದರೆ, ಯಾರು ಮುಹಮ್ಮದ್ ರಸೂಲುಲ್ಲಾಹ್‌ರನ್ನು ಆರಾಧಿಸುತ್ತಾರೋ ಅವರು ಕೇಳಿರಿ, ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮೃತಪಟ್ಟಿರುವರು. ಯಾರು ಅಲ್ಲಾಹನ ಆರಾಧನೆ ಮಾಡುತ್ತಾರೋ ಅವರು ಸಂತೋಷಗೊಳ್ಳಿರಿ. ಏಕೆಂದರೆ, ಅಲ್ಲಾಹನು ಜೀವಂತನಾಗಿರುವನು. ಅವನು ಎಂದಿಗೂ ಮೃತಪಡಲಾರನು.

ಹರ್ಝ್‌ರತ್ ಅಬೂಬಕರ್(ರ)ಗೆ ಹರ್ಝ್‌ರತ್ ಪೈಗಂಬರ್(ಸ)ರೊಂದಿಗೆ ಬೇರೆ ಯಾರಿಗೂ ಇಲ್ಲದಂತಹ ಅಪರಿಮಿತವಾದ ಪ್ರೀತಿಯಿದ್ದರೂ ಅವರು ಏಕ ದೇವನ ಪಾಠವನ್ನು ಜನರಿಗೆ ಹೇಳಿದರು. ಅನಂತರ ಅವರು ಹೇಳಿದರು: **ವಮಾ ಮುಹಮ್ಮದುನ್ ಇಲ್ಲಾ ರಸೂಲು ಖದ್‌ಖಲತ್ ಮಿನ್ ಖಬ್ಲಿಹಿರ್‍ರುಸುಲು ಅಫಇಮ್ಮಾತ ಔ ಖುತಿಲನ್‌ಖಲಬ್ತುಮ್ ಅಲಾ ಅಖಾಬಿಕುಮ್**. (ಆಲಿ ಇಮ್ರಾನ್:145) ಎಂದರೆ, ಮುಹಮ್ಮದ್ ಕೇವಲ ಓರ್ವ ಸಂದೇಶವಾಹಕರಾಗಿದ್ದಾರೆ. ಅವರಿಗಿಂತ ಹಿಂದಿನ ಎಲ್ಲ ಸಂದೇಶವಾಹಕರೂ ಗತಿಸಿದ್ದಾರೆ. ಒಂದು ವೇಳೆ ಅವರು ಮೃತಪಟ್ಟರೆ ಅಥವಾ ಹತ್ಯೆಗೀಡಾದರೆ ನೀವು ಹಿಂತಿರುಗಿ ಹೋಗುವಿರಾ? ಇಸ್ಲಾಮನ್ನು ತ್ಯಜಿಸುವಿರಾ? ಹೀಗೆ ಹರ್ಝ್‌ರತ್ ಅಬೂಬಕರ್(ರ) ಪರಿಪೂರ್ಣ ಧೈರ್ಯ ಮತ್ತು ಯುಕ್ತಿಯಿಂದ ಆ ಸಮಯದ ದುಃಖದ ಈ ಸ್ಥಿತಿಯಲ್ಲಿ ಸಹಾಬರಿಗೆ ಸಮಾಧಾನ ನೀಡುತ್ತಿದ್ದರು ಮತ್ತು ದುಃಖದಲ್ಲಿದ್ದ ಪ್ರೇಮಿಗಳ ಹೃದಯಗಳಿಗೆ ಶಮನ ನೀಡುತ್ತಿದ್ದರು. ಮತ್ತೊಂದೆಡೆ ಏಕದೇವತ್ವದ ಅಲುಗಾಡುತ್ತಿದ್ದ ಕಟ್ಟಡವನ್ನು ಅವರು ಸರಿಪಡಿಸಿದರು.

ಹರ್ಝ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹರ್ಝ್‌ರತ್ ಅಬೂಬಕರ್(ರ) ಒಂದು ಸಾರ್ವಜನಿಕ ಸಭೆಯಲ್ಲಿ, ಪವಿತ್ರ ಖುರ್‌ಆನಿನ ವಚನದ ಆಧಾರದಲ್ಲಿ, ಹರ್ಝ್‌ರತ್ ಪೈಗಂಬರ್(ಸ)ರ ಜೀವಿತದ ಬಗ್ಗೆ ಕೆಲವು ಸಹಾಬಿಯರ ಹೃದಯದಲ್ಲಿ ಉಂಟಾಗಿದ್ದ ಎಲ್ಲ ತಪ್ಪು ಭಾವನೆಗಳನ್ನು ದೂರಮಾಡಿದರು. ಅದರೊಂದಿಗೆ ಹದೀಸುಗಳನ್ನು ಸರಿಯಾಗಿ ಮನವರಿಕೆ ಮಾಡದ ಕಾರಣದಿಂದ ಈಸಾ ಮಸೀಹರ ಕುರಿತು ಕೆಲವು ಹೃದಯಗಳಲ್ಲಿ ಇದ್ದ ತಪ್ಪಾದ ಭಾವನೆಗಳನ್ನು ಬೇರುಸಹಿತ ಕಿತ್ತುಹಾಕಿದರು.
(ತೊಹ್‌ಫ ಗೊಲಡ್ವಿಯ, ರೂಹಾನಿ ಖಝಾಈನ್, ಸಂಪುಟ–17, ಪಉಟ–184)

ಖಿಲಾಫತಿನ ಚುನಾವಣೆಯ ವೇಳೆ ಮುಸ್ಲಿಂ ಸಮುದಾಯವನ್ನು ಒಗ್ಗಟ್ಟು ಮತ್ತು ಐಕ್ಯದ ದಾರದಲ್ಲಿ ಪೋಣಿಸುವುದಾಗಿತ್ತು ಹರ್ಝ್‌ರತ್ ಅಬೂಬಕರ್(ರ) ಮಾಡಿದ ಎರಡನೇ ದೊಡ್ಡ ಕೆಲಸ.

ಹರ್ಝ್‌ರತ್ ಪೈಗಂಬರ್(ಸ)ರ ಮರಣದಿಂದ ಉಂಟಾದ ಎರಡನೇ ದೊಡ್ಡ ಆತಂಕವೆಂಬುದು ಸಖೀಫ ಬನೂ ಸಾಇದದಲ್ಲಿ ಅನ್ಸಾರರ ಸಭೆಯಾಗಿತ್ತು. ಅನ್ಸಾರರು ಯಾವುದೇ ರೀತಿಯಲ್ಲೂ ಮುಹಾಜಿರರಿಂದ ಒಬ್ಬ ಖಲೀಫರನ್ನು ಅಂಗೀಕರಿಸಲು ತಯಾರಾಗಲಿಕ್ಕಿಲ್ಲವೆಂದು ಆರಂಭದಲ್ಲಿ ತೋರುತ್ತಿತ್ತು. ಇಂತಹ ನಿರ್ಣಾಯಕ ಸಂದರ್ಭದಲ್ಲಿ ಅಲ್ಲಾಹನು ಹರ್ಝ್‌ರತ್ ಅಬೂಬಕರ್(ರ)ರ ನಾಲಗೆಯಲ್ಲಿ ಎಂತಹ ಪ್ರಭಾವ ಉಂಟುಮಾಡಿದನು ಎಂದರೆ ಒಡಕು ಮತ್ತು ಭಿನ್ನಾಭಿಪ್ರಾಯವು ಪ್ರೀತಿ ಹಾಗೂ ಐಕ್ಯವಾಗಿ ಬದಲಾಯಿತು.

ಹರ್ಝ್‌ರತ್ ಮಸೀಹ್ ಮೌಊದ್(ಅ) ಹೇಳಿದಂತೆ, ಹರ್ಝ್‌ರತ್ ಮೂಸಾ(ಅ)ರ ನಿಧನದ ನಂತರ ಬನೀ ಇಸ್ರಾಈಲರು ಯೂಶಅ್ ಬಿನ್ ನೂನ್‌ರ ಮಾತುಗಳನ್ನು ಅಂಗೀಕರಿಸಿದರು. ಯಾರೂ ಭಿನ್ನಾಭಿಪ್ರಾಯ ಹೊಂದಲಿಲ್ಲ. ಎಲ್ಲರೂ ಅನುಸರಿಸಿದರು. ಅದೇ ರೀತಿಯ ಘಟನೆ ಹರ್ಝ್‌ರತ್

ಅಬೂಬಕರ್(ರ)ರ ಕಾಲದಲ್ಲೂ ನಡೆಯಿತು. ಎಲ್ಲರೂ ಹಝ್ರ‌ತ್ ಪೈಗಂಬರ್(ಸ)ರ ಅಗಲುವಿಕೆಯಿಂದ ದುಃಖಿತರಾದ ನಂತರ ಮನಸ್ಸಾರೆ ಹಝ್ರ‌ತ್ ಅಬೂಬಕರ್(ರ)ರ ಖಿಲಾಫತ್ತನ್ನು ಅಂಗೀಕರಿಸಿದರು.
(ತೊಹ್‌ಫ ಗೊಲಡ್ವಿಯ, ರೂಹಾನಿ ಖಝಾಈನ್, ಸಂಪುಟ–17, ಪುಟ–186)

ಹಝ್ರ‌ತ್ ಅಬೂಬಕರ್(ರ) ಬೇಗನೇ ನಿಭಾಯಿಸಿದ ಮೂರನೇ ಕೆಲಸವು ಉಸಾಮರ ಸೈನ್ಯವನ್ನು ಕಳುಹಿಸುವುದರ ಕಾರ್ಯವಾಗಿತ್ತು. ಈ ಸೈನ್ಯವನ್ನು ಸಿರಿಯದ ಗಡಿಯಲ್ಲಿ ರೋಮನರ ವಿರುದ್ಧ ಹೋರಾಡಲಿಕ್ಕಾಗಿ ಹಝ್ರ‌ತ್ ಪೈಗಂಬರ್(ಸ) ತಯಾರು ಮಾಡಿದ್ದರು. ಮೌತ ಯುದ್ಧ ಹಾಗೂ ತಬೂಕ್ ಯುದ್ಧದ ನಂತರ ಇಸ್ಲಾಂ ಮತ್ತು ಕ್ರಿಶ್ಚಿಯನ್ ಧರ್ಮಗಳ ನಡುವೆ ಬೆಳೆಯುತ್ತಿರುವ ಭಿನ್ನಾಭಿಪ್ರಾಯಗಳು ಮತ್ತು ಯಹೂದಿಗಳ ದೇಶದ್ರೋಹದಿಂದಾಗಿ ರೋಮನ್ನರು ಅರೇಬಿಯಾವನ್ನು ಆಕ್ರಮಿಸಬಹುದು ಎಂದು ಪ್ರವಾದಿ(ಸ)ರವರಿಗೆ ಭೀತಿ ಉಂಟಾಯಿತು.

ಮೌತ ಯುದ್ಧದಲ್ಲಿ ಹಝ್ರತ್ ಝೈದ್(ರ), ಹಝ್ರತ್ ಜಾಫರ್(ರ), ಹಝ್ರತ್ ಅಬ್ದುಲ್ಲಾ ಬಿನ್ ರವಾಹ(ರ), ಮುಸಲ್ಮಾನರ ಮೂವರು ಅಮೀರ್‌ಗಳು ಒಬ್ಬರ ನಂತರ ಒಬ್ಬರು ಹುತಾತ್ಮರಾದರು. ಮೌತ ಪಟ್ಟಣವು ಪೂರ್ವ ಜೋರ್ಡಾನ್‌ನಲ್ಲಿರುವ ಫಲವತ್ತಾದ ನಗರವಾಗಿದೆ. (ಅಬೂಬಕರ್ ಸಿದ್ದೀಖ್ ಅಕ್ಬರ್, ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ ಶೇಖ್ ಮುಹಮ್ಮದ್ ಅಹ್ಮದ್ ಪಾಣಿಪತಿ, ಪುಟ 123, ಮಕ್ತಬ್ ಜದೀದ್ ಲಾಹೋರ್) (ಉರ್ದು ದಾಎರ ಮುಆರಿಫ್ ಇಸ್ಲಾಮಿಯ, ಸಂಪುಟ–21, ಪುಟ–731)

ಅದೇನೇ ಇರಲಿ, ಹಝ್ರತ್ ಝೈದ್(ರ), ಹಝ್ರತ್ ಜಾಫರ್(ರ) ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ರವಾಹಾ(ರ) ಅವರ ಮರಣದ ಬಗ್ಗೆ ಜನರಿಗೆ ಯಾವುದೇ ಸುದ್ದಿ ಸಿಗುವ ಮೊದಲು ರಸೂಲುಲ್ಲಾಹ್(ಸ) ಜನರಿಗೆ ತಿಳಿಸಿದ್ದರು ಎಂದು ಹಝ್ರತ್ ಅನಸ್(ರ) ವಿವರಿಸುತ್ತಾರೆ. ಪ್ರವಾದಿ(ಸ) ಹೇಳಿದರು: ಝೈದ್(ರ) ಧ್ವಜವನ್ನು ತೆಗೆದುಕೊಂಡರು ಮತ್ತು ಅವರು ಹುತಾತ್ಮರಾದರು. ಆಗ ಜಾಫರ್(ರ) ಅದನ್ನು ಹಿಡಿದರು ಅವರೂ ಹುತಾತ್ಮರಾದರು. ಆಗ ಇಬ್ನ್ ರವಾಹಾ(ರ) ಧ್ವಜವನ್ನು ಹಿಡಿದರು ಅವರೂ ಹುತಾತ್ಮರಾದರು. ಮತ್ತು ನಮ್ಮ(ಸ)ರವರ ಕಣ್ಣುಗಳು ಕಣ್ಣೀರು ಸುರಿಸಿದವು. ಕೊನೆಗೆ ಅಲ್ಲಾಹನ ಖಡ್ಗಗಳಲ್ಲಿ ಒಂದಾದ ಖಾಲಿದ್ ಬಿನ್ ವಲೀದ್ ಈ ವಿರೋಧಿಗಳ ಮೇಲೆ ಅಲ್ಲಾಹನು ತನಗೆ ವಿಜಯವನ್ನು ನೀಡುವವರೆಗೂ ಧ್ವಜವನ್ನು ತೆಗೆದುಕೊಂಡರು ಎಂದು ಅವರು ಹೇಳಿದರು. (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಮನಾಕಿಬ್, ಅಧ್ಯಾಯ ಮನಾಕಿಬ್ ಖಾಲಿದ್ ಬಿನ್ ಅಲ್–ವಲೀದಾ, ಹದೀಸ್–3757)

ತದನಂತರ ಪ್ರವಾದಿ(ಸ) ಸ್ವತಃ ಮುಸ್ಲಿಮರೊಂದಿಗೆ ತಬೂಕಿಗೆ ಹೊರಟರು, ಆದರೆ ಶತ್ರುಗಳು ಮೈದಾನದಲ್ಲಿ ಹೋಗಿ ಮುಸ್ಲಿಮರೊಂದಿಗೆ ಹೋರಾಡಲು ಧೈರ್ಯ ಮಾಡಲಿಲ್ಲ, ಅವರು ಸೀರಿಯಾದ ಒಳಪ್ರದೇಶದಲ್ಲಿ ಹೋಗಿ ಮುಸ್ಲಿಮರ ಅಕ್ರಮಣದಿಂದ ಉಳಿದಿರುವುದು ಉತ್ತಮ ಎಂದು ಭಾವಿಸಿದರು. ಈ ಯುದ್ಧಗಳ ಪರಿಣಾಮವಾಗಿ, ಮುಸ್ಲಿಮರ ಕಡೆಗೆ ರೋಮನ್ನರ ಉದ್ದೇಶಗಳು ತುಂಬಾ ಅಪಾಯಕಾರಿಯಾದವು ಮತ್ತು ಅವರು ಅರೇಬಿಯನ್ ಗಡಿಯಲ್ಲಿ ಮುನ್ನಡೆಯಲು ತಯಾರಿ ಆರಂಭಿಸಿದರು. ಆದ್ದರಿಂದಲೇ ಮುಂಜಾಗ್ರತೆಯಾಗಿ ಸಿರಿಯಾಕ್ಕೆ ತೆರಳುವಂತೆ ಪ್ರವಾದಿ(ಸ)ರು ಉಸಾಮ(ರ) ಅವರಿಗೆ ಆದೇಶಿಸಿದರು. (ಅಬೂಬಕರ್ ಸಿದ್ದಿಕ್ ಅಕ್ಬರ್ ಮುಹಮ್ಮದ್ ಹುಸೇನ್ ಹೈಕಲ್ ಅನುವಾದಕ ಶೇಖ್ ಮುಹಮ್ಮದ್ ಅಹ್ಮದ್ ಪಾಣಿಪತಿ, ಪುಟ 124, ಮಕ್ತಬ್ ಜದೀದ್ ಲಾಹೋರ್)

ಮೌತ ಯುದ್ಧದ ಹುತಾತ್ಮರಿಗೆ ಪ್ರತೀಕಾರ ತೀರಿಸುವುದು ಒಂದು ಉದ್ದೇಶವಾಗಿತ್ತು. ಉಸಾಮರ ಸೈನ್ಯದ ತಯಾರಿ ಹಝ್ರ‌ತ್ ಪೈಗಂಬರ್(ಸ)ರ ನಿಧನಕ್ಕೆ ಎರಡು ದಿನಗಳಿಗೆ ಮುಂಚಿತವಾಗಿ ಶನಿವಾರದಂದು ಪೂರ್ತಿಯಾಗಿತ್ತು. ಇದರ ತಯಾರಿಯ ಆರಂಭ ಹಝ್ರ‌ತ್ ಪೈಗಂಬರ್(ಸ) ರೋಗಿಯಾಗುವುದಕ್ಕೆ ಮುಂಚೆ ಶುರುವಾಗಿತ್ತು. ಸಫರ್ ತಿಂಗಳ ಕೊನೆಯಲ್ಲಿ ಹಝ್ರ‌ತ್ ಪೈಗಂಬರ್(ಸ) ರೋಮನರ ವಿರುದ್ಧ ಯುದ್ಧದ ತಯಾರಿ ಮಾಡಲು ಆದೇಶ ನೀಡಿದ್ದರು. ಈ ಸೈನ್ಯದ ನೇತೃತ್ವವನ್ನು ಹಝ್ರ‌ತ್ ಉಸಾಮರಿಗೆ ಒಪ್ಪಿಸಿಕೊಂಡು ಹಝ್ರ‌ತ್ ಪೈಗಂಬರ್(ಸ) ಹಝ್ರ‌ತ್ ಉಸಾಮರಿಗೆ ವಿಶದವಾದ ನಿರ್ದೇಶನಗಳನ್ನು ಕೂಡ ನೀಡಿದ್ದರು. ಹಝ್ರ‌ತ್ ಉಸಾಮರನ್ನು ಕರೆದು ಹಝ್ರ‌ತ್ ಪೈಗಂಬರ್(ಸ) ಹೇಳಿದರು: ನಿನ್ನ ತಂದೆ ಹುತಾತ್ಮರಾದ ಜಾಗಕ್ಕೆ ಹೋಗು. ಶತ್ರುಗಳನ್ನು ಕುದುರೆಗಳ ಮೂಲಕ ತುಳಿದುಹಾಕು. ನಾನು ನಿನ್ನನ್ನು ಈ ಸೈನ್ಯದ ಸೇನಾಧಿಪತಿಯನ್ನಾಗಿ ಮಾಡಿದ್ದೇನೆ. (ಫ‌ತಹ್ ಅಲ್‌ಬಾರಿ ಲಿಇಬ್ನೆ ಹಜರ್, ಸಂಪುಟ–8, ಪುಟ–192, ಖದೀಮ್ ಕುತುಬ್ ಖಾನ ಆರಾಮ್‌ಬಾಗ್ ಕರಾಚಿ)

ಮತ್ತೊಂದು ವರದಿ ಪ್ರಕಾರ ಹಝ್ರ‌ತ್ ಪೈಗಂಬರ್(ಸ) ಹೇಳಿದರು: ಬಲ್‌ಖಾ ಮತ್ತು ದಾರೋಮ್ ನಿವಾಸಿಗಳನ್ನು ಕುದುರೆಗಳ ಮೂಲಕ ತುಳಿದುಹಾಕು. ಎಂದರೆ ಈ ಶತ್ರುಗಳು ಯುದ್ಧ ಮಾಡಲು ಬಯಸುತ್ತಿದ್ದಾರೆ. ಆದ್ದರಿಂದ ಅವರ ವಿರುದ್ಧ ಅತ್ಯುತ್ತಮವಾಗಿ ಯುದ್ಧ ಮಾಡು. ಬಲ್‌ಖಾ ಎಂಬುದು ಸೀರಿಯಾದಲದಲಿರುವ ಒಂದು ನಗರವಾಗಿದೆ ಅದು ದಮಸ್ಕಸ್ ಹಾಗೂ ಖುರಾ ಕಣಿವಿಯ ಮಧ್ಯೆ ಇದೆ. ದಾರೋಮ್ ಬಗ್ಗೆ ಬಗ್ಗೆ ಬರೆಯಲಾಗಿದೆ ಅದು ಮಿಸರ್ ಹೋಗುವ ಮಾರ್ಗದಲ್ಲಿ ಪಾಲಸ್ಟೈನ್‌ನಲ್ಲಿ ಗಝ್ಝು ಎಂಬ ನಗರದ ನಂತರದ ಒಂದು ಸ್ಥಳವಾಗಿದೆ. (ತಾರೀಖ್ ಅತ್ತಬರಿ, ಸಂಪುಟ–2, ಪುಟ–224, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಮುಜಮುಲ್ ಬಲದಾನ್, ಸಂಪುಟ–1, ಪುಟ–579, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಫರ್ಹಂಗ್ ಸೀರತ್, ಪುಟ–119, ಝುವಾರ ಅಕಾಡಮಿ ಪಬ್ಲಿಕೇಶನ್ಸ್ ಕರಾಚಿ 2003)

ಏನೇ ಇರಲಿ ಸೀರಿಯಾಗೆ ಹೋಗಲು ಆದೇಶಿಸುತ್ತ ಪ್ರವಾದಿ(ಸ) ಹೇಳಿದರು: ಬೆಳಿಗ್ಗೆಯಾಗುತ್ತಲೇ ಉಬ್ನಾ ನಿವಾಸಿಗಳ ಮೇಲೆ ಹಲ್ಲೆ ನಡೆಸು. ಅವರಿಗೆ ಸುದ್ದಿ ತಲುಪುವುದಕ್ಕೆ ಮುಂಚಿತವಾಗಿ ತಲುಪಲಿಕ್ಕಾಗಿ ಬೇಗಬೇಗನೇ ಯಾತ್ರೆ ಮಾಡು. ಅಲ್ಲಾಹನು ನಿನಗೆ ವಿಜಯ ನೀಡಿದರೆ, ಅಲ್ಲಿ ಹೆಚ್ಚು ಕಾಲ ತಂಗಬೇಡ. ತನ್ನ ಜೊತೆಗೆ ಮಾರ್ಗದೋರಿಸುವವನನ್ನು ಕರೆದುಕೊಂಡು ಹೋಗು. ಗೂಢಚರರನ್ನು ನಿಮಗಿಂತ ಮುಂಚೆ ಕಳುಹಿಸಿರಿ. ಅದಲ್ಲದೇ ಹಝ್ರ‌ತ್ ಪೈಗಂಬರ್(ಸ) ತನ್ನ ಅನುಗ್ರಹೀತ ಕೈಗಳಿಂದ ಒಂದು ಧ್ವಜವನ್ನು ಸಹ ಕಟ್ಟಿದ್ದರು ಮತ್ತು ಹೀಗೆ ಹೇಳಿದರು: ಅಲ್ಲಾಹನ ನಾಮದಲ್ಲಿ ಅವನ ಮಾರ್ಗದಲ್ಲಿ ಯುದ್ಧ ಮಾಡು. ಅಲ್ಲಾಹನನ್ನು ನಿರಾಕರಿಸಿದವರೊಡನೆ ಯುದ್ಧ ಮಾಡು. ಹಝ್ರ‌ತ್ ಉಸಾಮ ಹಝ್ರ‌ತ್ ಪೈಗಂಬರ್(ಸ) ಕಟ್ಟಿದ ಧ್ವಜವನ್ನು ಪಡೆದು ಹೊರಟರು ಮತ್ತು ಅದನ್ನು ಹಝ್ರ‌ತ್ ಬರೀದ ಬಿನ್ ಹಸೀಬ್‌ರಿಗೆ ಒಪ್ಪಿಸಿದರು ಮತ್ತು ಜುರುಫ್ ಎಂಬ ಸ್ಥಳದಲ್ಲಿ ಸೈನ್ಯ ಒಟ್ಟುಗೂಡಿತು. ಹೇಗಿದ್ದರೂ ಯುದ್ಧಕ್ಕಾಗಿ ಮುಹಾಜಿರ್ ಮತ್ತು ಅನ್ಸಾರರ ಎಲ್ಲ ಶ್ರೇಷ್ಠ ಸಹಾಬಿಯರನ್ನು ಭಾಗವಹಿಸಲಾಗಿತ್ತು. ಈ ಸೈನ್ಯದಲ್ಲಿ ಹಝ್ರ‌ತ್ ಅಬೂಬಕರ್(ರ), ಹಝ್ರ‌ತ್ ಉಮರ್(ರ), ಹಝ್ರ‌ತ್ ಅಬೂಉಬೈದ ಬಿನ್ ಜರ್ರಾಹ್, ಹಝ್ರ‌ತ್ ಸಅದ್ ಬಿನ್ ಅಬೀ ವಖಾಸ್, ಹಝ್ರ‌ತ್ ವಸೀದ್ ಬಿನ್ ಝೈದ್, ಹಝ್ರ‌ತ್ ಖತ್ತಾದ ಬಿನ್ ನೂಮಾನ್, ಹಝ್ರ‌ತ್ ಸಲ್ಮಾ ಬಿನ್ ಅಸ್ಲಂ ಸಮೇತ ಶ್ರೇಷ್ಠ ಸಹಾಬಿಯರನ್ನು ಕೂಡ ಸೇರ್ಪಡೆ ಮಾಡಲಾಗಿತ್ತು. ಒಬ್ಬ ಹುಡುಗನನ್ನು ಮುಹಾಜಿರರ ಶ್ರೇಷ್ಠ ಸಹಾಬಿಯರ ನೇತಾರನನ್ನಾಗಿ ನೇಮಿಸಲಾಗಿರುವುದರ ಕುರಿತು ಕೆಲವು ಜನರು ಮಾತು ಎತ್ತಿದಾಗ ಹಝ್ರ‌ತ್ ಪೈಗಂಬರ್(ಸ) ಅಸಂತುಷ್ಟಿಯನ್ನು ತೋರಿಸಿದ್ದರು. ಹಝ್ರ‌ತ್ ಪೈಗಂಬರ್(ಸ) ತನ್ನ ತಲೆಗೆ ಒಂದು ರೂಮಾಲನ್ನು ಕಟ್ಟಿದ್ದರು ಮತ್ತು ಒಂದು ಚಾದರವನ್ನು ಹೊದ್ದುಕೊಂಡಿದ್ದರು. ಅವರು ಪ್ರವಚನ ಪೀಠವನ್ನೇರಿದರು ಮತ್ತು ಹೀಗೆ ಭಾಷಣ ಮಾಡಿದರು: ಎಲ್ಲೈ ಜನರೇ, ಉಸಾಮರನ್ನು ಸೇನಾಧಿಪತಿಯನ್ನಾಗಿ ಮಾಡುವುದಕ್ಕೆ ವಿರುದ್ಧವಾಗಿ ನಿಮ್ಮಲ್ಲಿ ಕೆಲವರ ಮಾತುಗಳನ್ನು ನಾನು ಆಲಿಸಿದ್ದೇನೆ. ಉಸಾಮರನ್ನು ನಾನು ಸೇನಾಧಿಪತಿಯನ್ನಾಗಿ ಮಾಡಿದ್ದರ ಕುರಿತು ನಿಮಗೆ ಆಕ್ಷೇಪವಿದ್ದರೆ ನನಗೆ ಅಚ್ಚರಿಯಿಲ್ಲ. ಇದಕ್ಕಿಂತ ಮುಂಚೆ ನಾನು ಉಸಾಮರ ತಂದೆಯನ್ನು ಸೇನಾಧಿಪತಿಯನ್ನಾಗಿ ಮಾಡಿದಾಗಲೂ ನೀವು ಆಕ್ಷೇಪವೆತ್ತಿದ್ದೀರಿ. ಉಸಾಮರ ತಂದೆ ಸೇನಾಧಿಪತಿಯಾಗಲು ಅರ್ಹರಾಗಿದ್ದರು. ಅವರ ನಂತರ ಅವರ ಮಗನು ಕೂಡ ಸೇನಾಧಿಪತಿಯಾಗಲು ಯೋಗ್ಯನಾಗಿರುವನು. ಅವರಿಬ್ಬರೂ ನನಗೆ ಅತ್ಯಂತ ಪ್ರಿಯರಾದ ಜನರಲ್ಲಿ ಸೇರಿದವರಾಗಿರುವರು. ಅವರಿಬ್ಬರ ಬಗ್ಗೆ ಎಲ್ಲ ರೀತಿಯ ಒಳಿತು ಮತ್ತು ಸತ್ಕರ್ಮಗಳ ಪ್ರತೀಕ್ಷೆ ಇರಿಸಬಹುದಾಗಿದೆ.

ಆದ್ದರಿಂದ ಉಸಾಮ ಹೇಳುವ ಒಳ್ಳೆಯ ಮಾತುಗಳನ್ನು ಅನುಸರಿಸಿರಿ. ಏಕೆಂದರೆ ಅವರು ನಿಮ್ಮಲ್ಲಿ ಅತ್ಯುತ್ತಮರಾದವರಲ್ಲಿ ಸೇರಿದವರಾಗಿರುವರು. ಅದು ರಬಿ–ಉಲ್–ಅವ್ವಲ್‌ನ 10 ನೇ ದಿನ ಮತ್ತು ಶುಕ್ರವಾರದ ದಿನವಾಗಿತ್ತು ಅಂದರೆ ಪ್ರವಾದಿ(ಸ)ರವರ ಮರಣದ ಎರಡು ದಿನಗಳ ಮೊದಲ ವಿಷಯವಾಗಿತ್ತು. ಹಝ್ರತ್ ಉಸಾಮ(ರ) ಅವರೊಂದಿಗೆ ಹೊರಡುತ್ತಿದ್ದ ಮುಸ್ಲಿಮರು ಪ್ರವಾದಿ(ಸ)ರಿಗೆ ವಿದಾಯ ಹೇಳಿ ಜುರ್ಫ್‌ನಲ್ಲಿ ಸೈನ್ಯವನ್ನು ಸೇರಲು ಹೋದರು. ಪ್ರವಾದಿ(ಸ) ಅವರ ಅನಾರೋಗ್ಯವು ಹೆಚ್ಚಾಯಿತು, ಆದರೆ ಅವರು ಉಸಾಮನ ಸೈನ್ಯವನ್ನು ಕಳುಹಿಸಲು ಒತ್ತಾಯಿಸಿದರು. ಭಾನುವಾರ, ಪ್ರವಾದಿ(ಸ) ಅವರ ನೋವು ಹೆಚ್ಚಾಯಿತು. ಹಝ್ರತ್ ಉಸಾಮಾ ಸೇನೆಯಿಂದ ಹಿಂದಿರುಗಿದಾಗ, ಅವರು ಕೋಮಾದಲ್ಲಿದ್ದರು. ಆ ದಿನ ಜನರು ನಿಮಗೆ ಔಷಧಿ ನೀಡಿದರು. ಹಝ್ರತ್ ಉಸಾಮ(ರ) ಅವರು ತನ್ನ ತಲೆಯನ್ನು ಬಾಗಿಸಿ ಪ್ರವಾದಿ(ರ)ಅವರನ್ನು ಚುಂಬಿಸಿದರು. ಅವರಿಗೆ ಮಾತನಾಡಲಾಗಲಿಲ್ಲ ಆದರೆ ಅವರು ತಮ್ಮ ಎರಡೂ ಕೈಗಳನ್ನು ಆಕಾಶದ ಕಡೆಗೆ ಎತ್ತಿ ಹಝ್ರತ್ ಉಸಾಮ(ರ)ಅವರ ತಲೆಯ ಮೇಲೆ ಇಡುತ್ತಾರೆ. ಅವರು ನನಗಾಗಿ ಪ್ರಾರ್ಥಿಸುತ್ತಿದ್ದಾರೆಂದು ನಾನು ಅರ್ಥಮಾಡಿಕೊಂಡಿದ್ದೇನೆ ಎಂದು ಹಝ್ರತ್ ಉಸಾಮಾ ಹೇಳುತ್ತಾರೆ. ಹಝ್ರತ್ ಉಸಾಮ(ರ) ಸೇನೆಗೆ ಮರಳಿದರು. ಹಝ್ರತ್ ಉಸಾಮಾ ಸೋಮವಾರ ಪ್ರವಾದಿ(ಸ) ಗೆ ಹಿಂತಿರುಗಿದಾಗ,

ಅವರು ಸಮಾಧಾನಗೊಂಡರು. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದೊಂದಿಗೆ ಹೊರಡಲು ಅವರು ಉಸಾಮಾಗೆ ಹೇಳಿದರು.

ಹಝ್ರತ್ ಉಸಾಮ(ರ) ಪ್ರವಾದಿ(ಸ.ಅ) ರನ್ನು ಬಿಟ್ಟು ತನ್ನ ಸೈನ್ಯದ ಕಡೆಗೆ ಹೊರಟರು ಮತ್ತು ಜನರನ್ನು ಹೊರಡಲು ಆದೇಶಿಸಿದರು. ಪ್ರವಾದಿ(ಸ.ಅ) ರವರ ಕೊನೆಯ ದಿನಗಳು ಬರಲಿವೆ ಎಂದು ಅವರ ತಾಯಿ ಹಝ್ರತ್ ಉಮ್ ಅಯ್ಮಾನ್(ರ) ಅವರ ಸಂದೇಶದೊಂದಿಗೆ ಒಬ್ಬ ವ್ಯಕ್ತಿ ಬಂದಾಗ ಅವರು ರಸೂಲುಲ್ಲಾಹ್(ಸ) ಬಳಿಗೆ ಬಂದರು. ಅವರೊಂದಿಗೆ ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಬು ಉಬೈದಾ(ರ) ಅವರೂ ಇದ್ದರು. ಆಗ ಪ್ರವಾದಿ(ಸ)ರವರು ಮರಣಾ ಸನ್ನಾ ಸ್ಥಿತಿಯಲ್ಲಿದ್ದರು. ಪ್ರವಾದಿ(ಸ.ಅ) ರಬಿ ಅಲ್-ಅವ್ವಲ್ 12ರ ಸೋಮವಾರ ಸೂರ್ಯಾಸ್ತದ ನಂತರ ನಿಧನರಾದರು, ಆದ ಕಾರಣ ಮುಸ್ಲಿಮರ ಸೈನ್ಯವೂ ಜುರ್ಫ್‌ದಿಂದ ಮದೀನಕ್ಕೆ ಹಿಂದಿರುಗಿದರು. ಹಝ್ರತ್ ಬುರೈದ ಬಿನ್ ಹುಸೈಬ್(ರ) ಹಝ್ರತ್ ಉಸಾಮ(ರ)ರವರ ಧ್ವಜವನ್ನು ತೆಗೆದುಕೊಂಡು ಬಂದು ರಸೂಲುಲ್ಲಾಹ್(ಸ)ರವರ ಮನೆಗ ಬಾಗಿಲಲ್ಲಿ ನೆಟ್ಟಿದರು. ಒಂದು ವರದಿಯ ಪ್ರಕಾರ ಹಝ್ರತ್ ಉಸಾಮರ ಸೈನ್ಯವು ಧಿ ಖುಷುಬ್‌ನಲ್ಲಿದ್ದಾಗ, ಪ್ರವಾದಿ(ಸ) ನಿಧನರಾದರು. ಇದು ಮದೀನಾದಿಂದ ಸಿರಿಯಾಕ್ಕೆ ಹೋಗುವ ದಾರಿಯಲ್ಲಿರುವ ಕಣಿವೆಯ ಹೆಸರಾಗಿದೆ. ಆದಾಗ್ಯೂ, ಹಝ್ರತ್ ಅಬುಬಕರ್(ರ) ಅವರ ಬೈಅತ್ ಮಾಡಿದಾಗ, ಹಝ್ರತ್ ಅಬುಬಕರ್(ರ) ಹಝ್ರತ್ ಬುರೈದಾ ಬಿನ್ ಖಸಬ್(ರ) ಅವರಿಗೆ ಧ್ವಜವನ್ನು ತೆಗೆದುಕೊಂಡು ಉಸಾಮಾ(ರ) ಅವರ ಮನೆಗೆ ಹೋಗುವಂತೆ ಆದೇಶಿಸಿದರು. ಹಝ್ರತ್ ಬುರೈದ(ರ) ಧ್ವಜವನ್ನು ಸೈನ್ಯದ ಮೊದಲ ಸ್ಥಾನಕ್ಕೆ ತಂದರು. (ಅತ್ತಬಖಾತುಲ್‌ಕುಬ್ರಾ, ಸಂಪುಟ-2, ಪುಟಗಳು 146-147, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್ 1990) (ಅಲ್‌ಬದಾಯ ವನ್ನಹಾಯ, ಸಂಪುಟ-3, ಭಾಗ-6, ಪುಟ-302, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಮುಜಮುಲ್ ಬಲದಾನ್, ಸಂಪುಟ-1, ಪುಟ-101, ದಾರುಲ್ ಕುತುಬ್ ಇಲ್‌ಮಿಯ ಬೈರೂತ್) (ಫರ್ಹಾಂಗ್ ಸಿರಾ, ಪುಟ-114, 87 ಜವಾರ್ ಅಕಾಡೆಮಿ ಪಬ್ಲಿಕೇಶನ್ಸ್ ಕರಾಚಿ 2003)

ಈ ಸೇನೆಯ ಸಂಖ್ಯೆ ಮೂರು ಸಾವಿರ ಎಂದು ಹೇಳಲಾಗಿದೆ. (ಶರ್ಹ್ ಅಲ್-ಜರ್ಕಾನಿ ಅಲಲ್-ಮವಾಹಿಬ್ ಅಲ್-ಲುದ್ನಿಯಾ, ಸಂಪುಟ-4, ಪುಟ-155, ದಾರ್ ಅಲ್-ಕಿತಾಬ್ ಅಲ್-ಅಲಮಿಯಾ ಬೈರುತ್ 1996)

ಮತ್ತೊಂದು ವರದಿಯ ಪ್ರಕಾರ, ಹಝ್ರತ್ ಉಸಾಮಾ ಬಿನ್ ಝೈದ್(ರ) ಅವರನ್ನು 700 ಪುರುಷರೊಂದಿಗೆ ಸಿರಿಯಾಕ್ಕೆ ಕಳುಹಿಸಲಾಯಿತು. ಪ್ರವಾದಿ(ಸ)ರ ಮರಣದ ನಂತರ ಎರಡನೇ ದಿನ, ಅಬುಬಕರ್(ರ) ಉಸಾಮನ ದಂಡಯಾತ್ರೆಯು ಅಂತ್ಯಗೊಳ್ಳಲಿದೆ ಎಂದು ಘೋಷಿಸಿದರು ಎಂದು ವರದಿಯಾಗಿದೆ. ಉಸಾಮ(ರ)ಅವರ ಸೈನ್ಯದಲ್ಲಿದ್ದ ಯಾವ ವ್ಯಕ್ತಿಯು ಮದೀನಾದಲ್ಲಿ ಉಳಿಯಬಾರದು ಅವರೆಲ್ಲರೂ ಜುರಾಫ್‌ನಲ್ಲಿ ಅವರ ಸೈನ್ಯವನ್ನು ಸೇರಿಕೊಂಡರು.

ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅರೇಬಿಯದ ಗೋತ್ರಗಳಲ್ಲಿ ಧರ್ಮತ್ಯಾಗದ ಪಿತೂರಿ ಹರಡುತ್ತಿತ್ತು. ಅದೇ ವೇಳೆ ಯಹೂದಿಯರು ಮತ್ತು ಕ್ರೈಸ್ತರು ಕೂಡ ತಮ್ಮ ತಲೆಗಳನ್ನು ಎತ್ತಿಯೆತ್ತಿ ನೋಡುತ್ತಿದ್ದರು. ಪ್ರವಾದಿ(ಸ.ಅ) ರವರ ಮರಣ ಮತ್ತು ಕಡಿಮೆ ಸಂಖ್ಯೆಯ ಮುಸ್ಲಿಮರು ಮತ್ತು ಶತ್ರುಗಳ ಹೆಚ್ಚು ಸಂಖ್ಯೆಯಿಂದಾಗಿ, ಅವರ ಸ್ಥಿತಿಯು ಮಳೆಯ ಮರಳಿನಲ್ಲಿ ಕುರಿ ಮತ್ತು ಮೇಕೆಗಳಂತಿತ್ತು, ಅಂದರೆ, ಅವರು ಅಸಹಾಯಕರಾಗಿದ್ದರು, ಇದಕ್ಕೆ ಜನರು ಉಸಾಮ(ರ) ಅವರ ಸೈನ್ಯವನ್ನು ಮಾತ್ರ ಮುಸ್ಲಿಮರ ಸೈನ್ಯವೆಂದು ಪರಿಗಣಿಸುತ್ತಾರೆ ಮತ್ತು ನೀವು ನೋಡುವಂತೆ ಅರಬ್ಬರು ನಿಮ್ಮ(ರ) ವಿರುದ್ಧ ಬಂಡಾಯವೆದ್ದಿದ್ದಾರೆ. ಆದುದರಿಂದ ಈ ಮುಸಲ್ಮಾನರ ಗುಂಪನ್ನು ನಿಮ್ಮಿಂದ ಬೇರ್ಪಡಿಸುವುದು ಅಂದರೆ ಉಸಾಮನ ಸೈನ್ಯವನ್ನು ಕಳುಹಿಸುವುದು ನಿಮಗೆ ಸೂಕ್ತವಲ್ಲ. ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲೆ ನಾನು ಪ್ರಮಾಣ ಮಾಡುತ್ತೇನೆ! ವನ್ಯಮೃಗಗಳು ನನ್ನನ್ನು ಸುಲಿದು ತಿನ್ನುವುದಾಗಿ ನನಗೆ ಖಚಿತವಿದ್ದರೂ ಹಝ್ರತ್ ಪೈಗಂಬರ್(ಸ) ಉಸಾಮರ ಸೈನ್ಯದ ಕುರಿತು ಜಾರಿಗೊಳಿಸಿದ ತೀರ್ಮಾನವನ್ನು ನಾನು ಕಾರ್ಯಗತಗೊಳಿಸುವೆನು.

ಮತ್ತೊಂದು ವರದಿಯ ಪ್ರಕಾರ, ಹಝ್ರತ್ ಅಬೂಬಕರ್(ರ) ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳಿದರು: ಒಂದು ವೇಳೆ ಪ್ರವಾದಿ(ಸ) ಅವರ ಪತ್ನಿಯರ ಕಾಲುಗಳನ್ನು ನಾಯಿಗಳು ಎಳೆದು ಕೊಂಡು ಹೋದರೂ ಸಹ ನಾನು ಪ್ರವಾದಿ(ಸ)ರವರು ಕಳುಹಿಸಿದ ಈ ಸೈನ್ಯವನ್ನು ನಾನು ಹಿಂದಿರುಗಿಸುವುದಿಲ್ಲ ಅದೇ ರೀತಿ ಪ್ರವಾದಿ(ಸ) ಕಟ್ಟಿರುವಂತಹ ಧ್ವಜವನ್ನು ನಾನು ತೆಗೆಯುವುದಿಲ್ಲ. (ಅಲ್‌ಬಿದಾಯ ವನ್ನಹಾಯ, ಸಂಪುಟ-3, ಭಾಗ-6, ಪುಟ-302, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001) (ತಾರೀಖ್ ಅತ್ತಬರಿ, ಸಂಪುಟ-2, ಪುಟ-244, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012) (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-199, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006)

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ: ಪ್ರವಾದಿ(ಸ) ಮರಣಹೊಂದಿದಾಗ, ಇಡೀ ಅರೇಬಿಯಾದವರು ಧರ್ಮಭ್ರಷ್ಟರಾದರು ಮತ್ತು ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಲಿ(ರ) ಅವರಂತಹ ಧೈರ್ಯಶಾಲಿಗಳು ಸಹ ಈ ಪಿತೂರಿತನವನ್ನು ನೋಡಿ ಆಘಾತಕ್ಕೊಳಗಾದರು. ಪ್ರವಾದಿ(ಸ) ತಮ್ಮ ಮರಣದ ಸಮೀಪದಲ್ಲಿ ರೋಮನ್ ಪ್ರದೇಶದ ಮೇಲೆ ದಾಳಿ ಮಾಡಲು ಸೈನ್ಯವನ್ನು ಸಿದ್ಧಪಡಿಸಿದ್ದರು ಮತ್ತು ಹಝ್ರತ್ ಉಸಾಮಾ(ರ) ಅವರನ್ನು ಅದರ ಸೇನಾಧಿಪತಿಯನ್ನಾಗಿ ನೇಮಿಸಿದರು. ಪ್ರವಾದಿ(ಸ) ನಿಧನರಾದಾಗ ಮತ್ತು ಅವರ ಮರಣದ ನಂತರ ಈ ಸೈನ್ಯವು ಇನ್ನೂ ಹೊರಟು ಹೋಗಿರಲಿಲ್ಲ ಮತ್ತು ಅರಬ್ಬರು ಧರ್ಮಭ್ರಷ್ಟರಾದಾಗ ಸಹಾಬರವರು ಭಾವಿಸಿದ್ದರು ಉಸಾಮನ ಸೈನ್ಯವು ಇಂತಹ ಸಂದಿಗ್ಧದ ಸಮಯದಲ್ಲಿ ರೋಮನ್ ಪ್ರದೇಶದ ಮೇಲೆ ದಾಳಿ ಮಾಡಲು ಕಳುಹಿಸಿದರೆ ಕೇವಲ ವೃದ್ಧರು, ಮಕ್ಕಳು ಮತ್ತು ಮಹಿಳೆಯರು ಹಿಂದೆ ಉಳಿಯುತ್ತಾರೆ ಮತ್ತು ಮದೀನಕ್ಕೆ ಯಾವುದೇ ರಕ್ಷಣೆ ಇರುವುದಿಲ್ಲ. ಆದ್ದರಿಂದ, ಅವರು ಹಿರಿಯ ಸಹಾಬರ ಒಂದು ತಂಡವು ಹಝ್ರತ್ ಅಬೂಬಕರ್(ರ) ರವರ ಸೇವೆಗೆ ಹೋಗಬೇಕು ಮತ್ತು ದಂಗೆ ಮುಗಿಯುವವರೆಗೆ ಈ ಸೈನ್ಯವನ್ನು ನಿಲ್ಲಿಸುವಂತೆ ಕೇಳಬೇಕು ಎಂದು ಸಲಹೆ ನೀಡಿದರು. ಆದ್ದರಿಂದ ಹಝ್ರತ್ ಉಮರ್(ರ) ಮತ್ತು ಇತರ ಮಹಾನ್ ಸಹಾಬರವರು ಅವರ ಸೇವೆಗೆ ಬಂದು ಈ ವಿನಂತಿಯನ್ನು ಸಲ್ಲಿಸಿದರು. ಇದನ್ನು ಕೇಳಿದ ಹಝ್ರತ್ ಅಬೂಬಕರ್(ರ) ಅವರು ಕೋಪದಿಂದ ಹೀಗೆ ಉತ್ತರಿಸಿದರು: ಯಾವ ಸೈನ್ಯವನ್ನು ರವಾನೆ ಮಾಡಿಸಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರೋ ಅದನ್ನು ತಡೆಯುವ ಕೆಲಸವನ್ನು, ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಅಬೂಖುಹಾಫನ ಮಗನು ಮಾಡಬೇಕೆಂದು ನೀವು ಬಯಸುತ್ತೀರಾ?

ಮತ್ತೆ ಹಝ್ರತ್ ಅಬೂಬಕರ್(ರ) ಹೀಗೆ ನುಡಿದರು: ಅಲ್ಲಾಹನಾಣೆ, ಶತ್ರುಗಳ ಸೈನ್ಯಗಳು ಮದೀನಕ್ಕೆ ನುಗ್ಗಿ ಮತ್ತು ನಾಯಿಗಳು ಮಹಿಳೆಯರ ಶವಗಳನ್ನು ಎಳೆಯುತ್ತಾ ಸುತ್ತಿದರೂ ನಾನು ಈ ಸೈನ್ಯವನ್ನು ತಡೆಯುವುದಿಲ್ಲ. ಈ ಧೈರ್ಯ ಮತ್ತು ಶೌರ್ಯ ಹಝ್ರತ್ ಅಬೂಬಕರ್(ರ)ರಲ್ಲಿ ಉಂಟಾಗಲು ಕಾರಣವೇನೆಂದು **"ಮುಹಮ್ಮದುರ್ರಸೂಲುಲ್ಲಾಹಿ ವಲ್ಲಧೀನ ಮಅಹೂ ಅಶಿದ್ದಾಉ ಅಲಲ್ ಕುಫ್ಫಾರಿ** ಎಂಬ ವಚನದಲ್ಲಿ ಅಲ್ಲಾಹನು ಹೇಳಿದ್ದಾನೆ. (ಅರ್ಥ: ಮುಹಮ್ಮದ್ ಅಲ್ಲಾಹನ ಸಂದೇಶವಾಹಕ. ಅವರೊಂದಿಗಿರುವವರು ಅವಿಶ್ವಾಸಿಗಳ ವಿರುದ್ಧ ಕಠಿಣರಾಗಿದ್ದಾರೆ.) ಅದೇನೆಂದರೆ, ವಿದ್ಯುತ್ತಿನ ತಂತಿಯ ಜೊತೆ ಮಾಮೂಲಿ ತಂತಿ ಸೇರಿದರೆ, ಮಾಮೂಲಿ ತಂತಿಯಲ್ಲಿ ಮಹತ್ತಾದ ಶಕ್ತಿ ಉಂಟಾಗುವ ಹಾಗೆಯೇ ಹಝ್ರತ್ ಪೈಗಂಬರ್(ಸ)ರ ಜೊತೆ ಸಂಬಂಧದ ಕಾರಣದಿಂದ ಹಝ್ರತ್ ಪೈಗಂಬರ್(ಸ)ರನ್ನು ನಂಬುವವರು ಸಹ ಅವಿಶ್ವಾಸಿಗಳ ವಿರುದ್ಧ ಕಠಿಣರಾಗುವಂತೆ ಆದರು. (ಸೈರೆ ರೂಹಾನಿ(6), ಅನ್ವಾರುಲ್ ಉಲೂಮ್, ಸಂಪುಟ-22, ಪುಟ-593-594)

ಉಸಾಮರ ಸೈನ್ಯದ ರವಾನೆಯ ಕುರಿತು ಹಝ್ರತ್ ಮಸೀಹ್ ಮೌಊದ್(ಅ) "ಸಿರ್ರುಲ್‌ಖಿಲಾಫ"ದಲ್ಲಿ ಹೇಳುತ್ತಾರೆ: "ಇಬ್ನ್ ಅಸೀರ್ ತನ್ನ ಇತಿಹಾಸದ ಗ್ರಂಥದಲ್ಲಿ ಹೀಗೆ ಬರೆದಿದ್ದಾನೆ: ಹಝ್ರತ್ ಪೈಗಂಬರ್(ಸ) ನಿಧನರಾದ ನಂತರ ಆ ಸುದ್ದಿ ಮಕ್ಕ ಮತ್ತು ಅಲ್ಲಿಯ ಗವರ್ನರ್ ಆದ ಅತ್ತಾಬ್ ಬಿನ್ ಉಸೈದ್‌ರಿಗೆ ತಲುಪಿದಾಗ, ಅತ್ತಾಬ್ ಅಡಗಿ ಕುಳಿತನು ಮತ್ತು ಮಕ್ಕ ನಡುಗಿತು. ಮಕ್ಕಾ ನಿವಾಸಿಗಳು ಧರ್ಮತ್ಯಾಗಿಗಳಾಗುವ ಸಾಧ್ಯತೆಯಿತ್ತು. "ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅರೇಬಿಯದ ಗೋತ್ರಗಳಲ್ಲಿ ಧರ್ಮತ್ಯಾಗದ ಪಿತೂರಿ ಹರಡುತ್ತಿತ್ತು. ಅದೇ ವೇಳೆ ಯಹೂದಿಯರು ಮತ್ತು ಕ್ರೈಸ್ತರು ಕೂಡ ತಮ್ಮ ತಲೆಗಳನ್ನು ಎತ್ತಿಯೆತ್ತಿ ನೋಡುತ್ತಿದ್ದರು. ಪ್ರವಾದಿ(ಸ.ಅ) ರವರ ಮರಣ ಮತ್ತು ಕಡಿಮೆ ಸಂಖ್ಯೆಯ ಮುಸ್ಲಿಮರು ಮತ್ತು ಶತ್ರುಗಳ ಹೆಚ್ಚು ಸಂಖ್ಯೆಯಿಂದಾಗಿ, ಅವರ ಸ್ಥಿತಿಯು ಮಳೆಯ ಮರಳಿನಲ್ಲಿ ಕುರಿ ಮತ್ತು ಮೇಕೆಗಳಂತಿತ್ತು, ಅಂದರೆ, ಅವರು ಅಸಹಾಯಕರಾಗಿದ್ದರು, ಇದಕ್ಕೆ ಜನರು ಉಸಾಮ(ರ) ಅವರ ಸೈನ್ಯವನ್ನು ಮಾತ್ರ ಮುಸ್ಲಿಮರ ಸೈನ್ಯವೆಂದು ಪರಿಗಣಿಸುತ್ತಾರೆ ಮತ್ತು ನೀವು ನೋಡುವಂತೆ ಅರಬ್ಬರು ನಿಮ್ಮ(ರ) ವಿರುದ್ಧ ಬಂಡಾಯವೆದ್ದಿದ್ದಾರೆ. ಆದುದರಿಂದ ಈ ಮುಸಲ್ಮಾನರ ಗುಂಪನ್ನು ನಿಮ್ಮಿಂದ ಬೇರ್ಪಡಿಸುವುದು ಅಂದರೆ ಉಸಾಮನ ಸೈನ್ಯವನ್ನು ಕಳುಹಿಸುವುದು ನಿಮಗೆ ಸೂಕ್ತವಲ್ಲ. ಅದಕ್ಕೆ ಹಝ್ರತ್ ಅಬೂಬಕರ್(ರ) ಹೇಳಿದರು: ನನ್ನ ಆತ್ಮ ಯಾರ ಕೈಯಲ್ಲಿದೆಯೋ ಅವನ ಮೇಲೆ ನಾನು ಪ್ರಮಾಣ ಮಾಡುತ್ತೇನೆ! ವನ್ಯಮೃಗಗಳು ನನ್ನನ್ನು ಸುಲಿದು ತಿನ್ನುವುದಾಗಿ ನನಗೆ ಖಚಿತವಿದ್ದರೂ ಹಝ್ರತ್ ಪೈಗಂಬರ್(ಸ) ಉಸಾಮರ ಸೈನ್ಯದ ಕುರಿತು ಜಾರಿಗೊಳಿಸಿದ ತೀರ್ಮಾನವನ್ನು ನಾನು ಕಾರ್ಯಗತಗೊಳಿಸುವೆನು. (ಸಿರ್ರುಲ್ ಖಿಲಾಫ ಉರ್ದು ಅನುವಾದ, ಪುಟ-188-189, ಅಡಿಟಿಪ್ಪಣಿ ಪ್ರಕಟಣೆ ನಝಾರತ್ ಇಶಾಅತ್ ರಬ್ವಹ್)

ಹೀಗೆ ಹಝ್ರತ್ ಅಬೂಬಕರ್(ರ) ರವರು ಪ್ರವಾದಿ(ಸ.ಅ)ರವರ ಆಜ್ಞೆಯನ್ನು ಎತ್ತಿಹಿಡಿದರು ಮತ್ತು ಜಾರಿಗೊಳಿಸಿದರು ಮತ್ತು ಉಸಾಮ(ರ) ಅವರ ಸೈನ್ಯದಲ್ಲಿದ್ದವರಿಗೆ ಸೈನ್ಯಕ್ಕೆ ಮರಳಲು ಸೂಚಿಸಿದರು. ಈ ಹಿಂದೆ ಉಸಾಮನ ಸೈನ್ಯಕ್ಕೆ ಸೇರಿದ್ದ ಮತ್ತು ಪ್ರವಾದಿ(ಸ) ಅವರಿಂದ ಸೇರಲು ಸೂಚಿಸಿದ ಪ್ರತಿಯೊಬ್ಬ ವ್ಯಕ್ತಿಯನ್ನು ಹಿಂದೆ ಸರಿಯಬಾರದು ಮತ್ತು ಆತನನ್ನು ಹಿಂದೆ ಉಳಿಯಲು ನಾನು ಬಿಡುವುದಿಲ್ಲ ಎಂದು ಅವರು(ರ) ಹೇಳಿದರು. ಕಾಲ್ನಡಿಗೆಯಲ್ಲಿ ಹೋಗಬೇಕಾದರೂ ಅವರ ಜೊತೆಯೇ ಹೋಗುತ್ತಾರೆ. ಹಾಗಾಗಿ ಓರ್ವ ವ್ಯಕ್ತಿಯು ಸಹ ಹಿಂದೆ ಉಳಿಯಲಿಲ್ಲ. (ಶರ್ಹ್ ಅಲ್-ಜರ್ಕಾನಿ ಅಲಲ್-ಮವಾಹಿಬ್ ಲುದ್ದುನಿಯಾ, ಸಂಪುಟ-4, ಪುಟ-155, ದಾರ್ ಅಲ್-ಕುತುಬ್ ಅಲ್-ಅಲಮಿಯಾ ಬೈರುತ್ 1996)

ಆದಾಗ್ಯೂ, ಸೈನ್ಯವು ಮತ್ತೆ ಸಿದ್ಧವಾಯಿತು. ಕೆಲವು ಸಹಾಬರವರು, ಪರಿಸ್ಥಿತಿಯ ಸೂಕ್ಷ್ಮ ಸ್ವರೂಪದಿಂದಾಗಿ, ಸದ್ಯಕ್ಕೆ ಈ ಸೈನ್ಯವನ್ನು ನಿಲ್ಲಿಸಬೇಕೆಂದು ಮತ್ತೆ ಸೂಚಿಸಿದರು. ಒಂದು ವರದಿಯ ಪ್ರಕಾರ, ಹಝ್ರತ್ ಉಸಾಮಾ(ರ) ಹಝ್ರತ್ ಉಮರ್(ರ) ಅವರನ್ನು ಹಝ್ರತ್ ಅಬುಬಕರ್(ರ)ರವರ ಬಳಿಗೆ ಹೋಗುವಂತೆ ಕೇಳಿಕೊಂಡರು. ಹೀಗೆ ನಾವು ನಾವು ಮೊದಲು ಧರ್ಮತ್ಯಾಗಿಗಳ ವಿರುದ್ಧ ಹೋರಾಡಿ ಪ್ರವಾದಿ(ಸ)ರವರ ಖಲೀಫರನ್ನು, ಪ್ರವಾದಿ(ಸ)ರವರ ಧರ್ಮಪತಿಯರನ್ನು, ಹಾಗೂ ಮುಸ್ಲಿಮರನ್ನು ಮುಶ್ರಿಕೀನರ ಆಕ್ರಮಣಗಳಿಂದ ರಕ್ಷಿಸಿಕೊಳ್ಳಬೇಕು ಆದ್ದರಿಂದ ಸೈನ್ಯದ ನಿರ್ಗಮನದ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಕೇಳಿಕೊಂಡರು. ಹಝ್ರತ್ ಉಸಾಮ(ರ)ಅವರ ಸೈನ್ಯದಲ್ಲಿದ್ದ ಕೆಲವು ಅನ್ಸಾರ್‌ಗಳು ಹಝ್ರತ್ ಉಮರ್(ರ)ಗೆ ಹೇಳಿದರು, ಹಝ್ರತ್ ಉಸಾಮರ ಸೈನ್ಯವನ್ನು ಕಳುಹಿಸುವುದರಿಂದ ಹಝ್ರತ್ ಅಬೂಬಕರ್(ರ)ರನ್ನು ತಡೆಯಬೇಕು. ಇನ್ನೇನಾದರೂ ಸೈನ್ಯವನ್ನು ಕಳುಹಿಸಲೇ ಬೇಕು ಎಂದಾದರೆ, ಉಸಾಮರಿಗಿಂತ ಹಿರಿವಯಸ್ಸಿನ ಒಬ್ಬ ವ್ಯಕ್ತಿಯನ್ನು ನೇತಾರನನ್ನಾಗಿ ನಿಶ್ಚಯಿಸಬೇಕು ಎಂದು ಹೇಳಿದರು. ಹಝ್ರತ್ ಉಸಾಮಾ(ರ) ಅವರ ಕೋರಿಕೆಯ ಮೇರೆಗೆ ಹಝ್ರತ್ ಉಮರ್(ರ) ಅವರು ಹಝ್ರತ್ ಅಬೂಬಕರ್(ರ) ಅವರ ಸೇವೆಗೆ ಬಂದು ಹಝ್ರತ್ ಉಸಾಮಾ(ರ) ಅವರು ಹೇಳಿದ್ದನ್ನು ತಿಳಿಸಿದರು. ಆಗ ಹಝ್ರತ್ ಅಬೂಬಕರ್(ರ) ಹೇಳಿದರು, "ನಾಯಿಗಳು ಮತ್ತು ತೋಳಗಳು ನನ್ನನ್ನು ತಿಂದರೂ ಸಹ, ನಾನು ಪ್ರವಾದಿ(ಸ) ಆದೇಶದಂತೆ ಈ ನಿರ್ಧಾರವನ್ನು ಕೈಗೊಳ್ಳುತ್ತೇನೆ ಮತ್ತು ನಾನು ಪ್ರವಾದಿ(ಸ) ಅವರ ನಿರ್ಧಾರವನ್ನು ಬದಲಾಯಿಸುವುದಿಲ್ಲ." ಪ್ರವಾದಿ(ಸ) ಹೇಳಿದಂತೆ: ಈ ಪಟ್ಟಣಗಳಲ್ಲಿ ನನ್ನನ್ನು ಹೊರತುಪಡಿಸಿ ಯಾರೂ ಉಳಿದಿಲ್ಲದಿದ್ದರೂ, ನಾನು ಈ ನಿರ್ಧಾರವನ್ನು ಜಾರಿಗೊಳಿಸುವುದನ್ನು ಮುಂದುವರಿಸುತ್ತೇನೆ. ಆಗ ಹಝ್ರತ್ ಉಮರ್(ರ) ಹೇಳಿದರು: ಅನ್ಸಾರ್‌ಗಳು ಉಸಾಮಾಗಿಂತ ಹಿರಿಯನಾದ ವ್ಯಕ್ತಿಯನ್ನು ಅಮೀರನನ್ನಾಗಿ ನೇಮಿಸಬೇಕು ಎಂದು ಬಯಸುತ್ತಿದ್ದಾರೆ. ಅದಕ್ಕೆ ಕುಳಿತುಕೊಂಡಿದ್ದ ಹಝ್ರತ್ ಅಬೂಬಕರ್(ರ) ಎದ್ದುನಿಂತು ಹಝ್ರತ್ ಉಮರರ(ರ) ಗಡ್ಡವನ್ನು ಹಿಡಿದುಕೊಂಡು ಹೇಳಿದರು: ಎಲೈ ಇಬ್ನು ಖತ್ತಾಬ್, ಹಝ್ರತ್ ಪೈಗಂಬರ್(ಸ) ಸೇನಾಧಿಪತಿಯನ್ನಾಗಿ ನಿಶ್ಚಯಿಸಿದ ವ್ಯಕ್ತಿಯನ್ನು ನಾನು ಸೇನಾಧಿಪತಿ ಸ್ಥಾನದಿಂದ ವಜಾಗೊಳಿಸಬೇಕು ಎಂದು ನೀನು ಹೇಳುತ್ತಿರುವುದು ಎಷ್ಟು ದುಃಖಕರವಾದ ಸಂಗತಿಯಾಗಿದೆ!
(ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟಗಳು 199-200, ದಾರುಲ್ ಇಲ್‌ಮಿಯ ಬೈರುತ್ 2006)

ಹಝ್ರತ್ ಉಮರ್(ರ) ಜನರ ಬಳಿಗೆ ಹಿಂತಿರುಗಿದಾಗ, ಜನರು ಏನು ಮಾಡಬೇಕೆಂದು ಕೇಳಿದರು. ಅದಕ್ಕೆ ಹಝ್ರತ್ ಉಮರ್(ರ) ಅವರಿಗೆ ಹೇಳಿದರು: ಇಲ್ಲಿಂದ ಹೊರಡಿಹೋಗಿ. ನಿಮ್ಮ ತಾಯಂದಿರು ನಿಮ್ಮನ್ನು ಕಳೆದುಕೊಳ್ಳಲಿ ಅಂದರೆ, ಅವರು ಅವರನ್ನು ಇಷ್ಟಪಡದ ರೀತಿಯಲ್ಲಿ ವರ್ತಿಸಿದರು. ನಿಮ್ಮಿಂದಾಗಿ ಇಂದು ನಾನು ಪ್ರವಾದಿ(ಸ) ಅವರ ಖಲೀಫರಿಂದ ಯಾವುದೇ ಒಳ್ಳೆಯದನ್ನು ಪಡೆದಿಲ್ಲ. (ಅತ್ತಾರೀಖ್ ಅತ್ತಬರಿ ಲಿಅಬಿ ಜಾಫರ್ ಮುಹಮ್ಮದ್ ಬಿನ್ ಜರೀರ್ ತಬರಿ, ಸಂಪುಟ-2, ಪುಟ-246, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) ಅಂದರೆ, ಅವರು ನನ್ನ ಮಾತುಗಳನ್ನು ಬಹಳ ಗಂಭೀರವಾಗಿ ತೆಗೆದುಕೊಂಡರು.

ಹಝ್ರತ್ ಅಬೂಬಕರ್(ರ)ರವರ ಆದೇಶದ ಪ್ರಕಾರ ಉಸಾಮರ ಸೈನ್ಯವೂ ಜುರ್ಫ್‌ನಲ್ಲಿ ಸೇರಿದಾಗ ಹಝ್ರತ್ ಅಬೂಬಕರ್(ರ) ಸ್ವತಃ ಆ ಸ್ಥಳಕ್ಕೆ ಆಗಮಿಸಿ ಆ ಸೈನ್ಯವನ್ನು ಪರಿಶೀಲಿಸಿದರು.

ಆ ಸೈನ್ಯದ ಹೊರಡುವಿಕೆಯ ದೃಶ್ಯ ಕೂಡ ಬಹಳ ಆಶ್ಚರ್ಯಕರವಾಗಿತ್ತು. ಆ ಸಮಯದಲ್ಲಿ ಹಝ್ರತ್ ಉಸಾಮ ಸವಾರರಾಗಿದ್ದರು ಮತ್ತು ಹಝ್ರತ್ ಅಬೂಬಕರ್(ರ) ನಡೆಯುತ್ತಿದ್ದರು. ಹಝ್ರತ್ ಉಸಾಮ ಹೇಳಿದರು: ಹೇ ರಸೂಲುಲ್ಲಾಹ್(ಸ)ರ ಖಲೀಫಾ, ನೀವು ಕೂಡ ಸವಾರರಾಗಿರಿ. ಇಲ್ಲದಿದ್ದರೆ ನಾನು ಇಳಿದು ನಡೆಯುತ್ತೇನೆ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಖಂಡಿತವಾಗಿಯೂ ನೀನು ಕೆಳಗೆ ಇಳಿಯಬಾರದು, ನಾನು ಸವಾರನಾಗುವುದೂ ಇಲ್ಲ. ನಾನು ಒಂದು ಘಳಿಗೆಗಾಗಿ ಕೂಡ ನನ್ನ ಪಾದಗಳನ್ನು ಅಲ್ಲಾಹನ ಮಾರ್ಗದಲ್ಲಿ ಧೂಳಿಗೆ ಮುಟ್ಟಿಸಬಾರದೇ? ಏಕೆಂದರೆ, ಯುದ್ಧಕ್ಕಾಗಿ ಹೋಗುವವನು ಹಾಕುವ ಒಂದು ಹೆಜ್ಜೆಗೆ ಪ್ರತಿಫಲವಾಗಿ 700 ಸತ್ಕರ್ಮಗಳನ್ನು ಬರೆಯಲಾಗುತ್ತವೆ. ಅವನ 700 ಪದವಿಗಳನ್ನು ಏರಿಸಲಾಗುತ್ತವೆ. ಅವನ 700 ಕೆಡುಕುಗಳನ್ನು ಕೊನೆಗೊಳಿಸಲಾಗುತ್ತವೆ. (ಅಲ್‌ಕಾಮಿಲ್ ಫಿತ್ತಾರೀಖ್, ಸಂಪುಟ-2, ಪುಟ-200, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2006)

ಅನಂತರ ಹಝ್ರತ್ ಉಸಾಮರೊಡನೆ ಹಝ್ರತ್ ಅಬೂಬಕರ್(ರ) ಹೇಳಿದರು: ನೀವು ಸರಿಯೆಂದು ಭಾವಿಸುವುದಾದರೆ ಹಝ್ರತ್ ಉಮರ್(ರ)ರನ್ನು ನನ್ನ ಕೆಲಸದಲ್ಲಿ ನೆರವಾಗಲು ಇಲ್ಲೇ ನಿಲ್ಲಿಸಲು ಅನುಮತಿ ನೀಡಿರಿ. ಹಝ್ರತ್ ಉಸಾಮ(ರ) ಅನುಮತಿ ಕೊಟ್ಟರು. (ತಾರೀಖ್ ಅತ್ತಿಬರಿ ಲಿಅಬಿ ಜಾಫರ್ ಮುಹಮ್ಮದ್ ಬಿನ್ ಜರೀರ್ ತಬರಿ, ಸಂಪುಟ-2, ಪುಟ-246, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಅನಂತರ ಹಝ್ರತ್ ಉಮರ್(ರ) ಹಝ್ರತ್ ಉಸಾಮರನ್ನು ಭೇಟಿಯಾಗುವಾಗಲೆಲ್ಲ **"ಅಸ್ಸಲಾಮು ಅಲೈಕ ಅಯ್ಯುಹಲ್ ಅಮೀರ್"** ಎಂದು ಹೇಳುತ್ತಿದ್ದರು. ಅವರು ಖಲೀಫರಾದ ನಂತರವೂ ಹೀಗೆಯೇ ಹೇಳುತ್ತಿದ್ದರು. ಆಗ ಹಝ್ರತ್ ಉಸಾಮ ಹೀಗೆ ಉತ್ತರಿಸುತ್ತಿದ್ದರು: **ಗ಼ಫರಲ್ಲಾಹು ಲಕ ಯಾ ಅಮೀರಲ್ ಮೂಅ್‌ಮಿನೀನ್**, ಎಂದರೆ, ಹೇ ಅಮೀರಲ್ ಮೂಮಿನೀನ್, ಅಲ್ಲಾಹನು ನಿಮ್ಮೊಂದಿಗೆ ಮಗ್‌ಫಿರತ್‌ನಿಂದ ವರ್ತಿಸಲಿ. (ಅಸ್ಸೀರತುಲ್ ಹಲಬೀಯ, ಸಂಪುಟ-3, ಪುಟ-294, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002)

ಹೇಗಿದ್ದರೂ ಉಸಾಮರ ಸೈನ್ಯವನ್ನು ಕಳುಹಿಸುವಾಗ ಹಝ್ರತ್ ಅಬೂಬಕರ್(ರ) ಭಾಷಣ ಮಾಡುತ್ತಾ ಹೇಳಿದರು: ನಾನು ನಿಮಗೆ ಹತ್ತು ಸಂಗತಿಗಳ ಉಪದೇಶವನ್ನು ನೀಡುತ್ತೇನೆ. ನೀವು ಮೋಸಮಾಡಬಾರದು, ಯುದ್ಧ ಸಂಪತ್ತಿನಿಂದ ಕಳ್ಳತನ ಮಾಡಬಾರದು, ಪ್ರತಿಜ್ಞೆಯ ಉಲ್ಲಂಘನೆ ಮಾಡಬಾರದು, ಶವಶರೀರದ ಮುಖವನ್ನು ಕುರೂಪಗೊಳಿಸಬಾರದು, ಸಣ್ಣ ಮಕ್ಕಳು, ವೃದ್ಧರು ಮತ್ತು ಮಹಿಳೆಯರನ್ನು ಕೊಲ್ಲಬಾರದು, ಫಲದಾಯಕ ಮರಗಳನ್ನು ಕಡಿಯಬಾರದು, ಆಡುಗಳು, ದನಗಳು ಮತ್ತು ಒಂಟೆಗಳನ್ನು ತಿನ್ನಲಿಕ್ಕಲ್ಲದೇ ಕೊಯ್ಯಬಾರದು, ಚರ್ಚಿನ ಪುರೋಹಿತರಿಗೆ ತೊಂದರೆ ಕೊಡಬಾರದು, ಯಾರಾದರೂ ಏನಾದರೂ ತಿನ್ನಲಿಕ್ಕೆ ಕೊಟ್ಟರೆ, ಬಿಸ್ಮಿಲ್ಲಾಹ್ ಎಂದು ಹೇಳಿ ಪಡೆಯಬೇಕು, ಮಧ್ಯಭಾಗದಲ್ಲಿ ತಲೆಮುಂಡನ ಮಾಡಿಕೊಂಡು ತಲೆಯ ಸುತ್ತ ಹಣೆಪಟ್ಟಿಯಂತೆ ಕೂದಲನ್ನು ಇರಿಸುವ ಜನರನ್ನು ಬಿಡಬಾರದು. ಅವರು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಹುರಿದುಂಬಿಸುವ ಮತ್ತು ಯುದ್ಧದಲ್ಲಿ ಭಾಗವಹಿಸುವ ಜನರಾಗಿರುವರು. ಅಲ್ಲಾಹನ ಹೆಸರಲ್ಲಿ ಹೊರಡು, ಅಲ್ಲಾಹನು ನಿಮ್ಮನ್ನು ಎಲ್ಲ ರೀತಿಯ ಗಾಯಗಳಿಂದ, ಎಲ್ಲ ವಿಧದ ರೋಗಗಳಿಂದ, ಸಾಂಕ್ರಾಮಿಕ ಕಾಯಿಲೆಗಳಿಂದ ಸಂರಕ್ಷಿಸಲಿ.
(ತಾರೀಖ್ ಅತ್ತಬರಿ, ಸಂಪುಟ-2, ಪುಟ-246, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ಹಝ್ರತ್ ಉಸಾಮರೊಡನೆ ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ಮಾಡಲು ಹೇಳಿದ್ದ ಎಲ್ಲವನ್ನು ನೀವು ಖಂಡಿತ ಮಾಡಬೇಕು. ಪ್ರವಾದಿ(ಸ) ಆಜ್ಞೆಗಳಬ್ಬು ಪಾಲಿಸುವುದರಲ್ಲಿ ಯಾವುದೇ ರೀತಿಯ ದುರ್ಬಲತೆಯನ್ನು ತೋರಿಸಬೇಡ. (ತಾರೀಖ್ ಅತ್ತಬರಿ, ಸಂಪುಟ-2, ಪುಟ-246, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2012)

ತದನಂತರ ಹಝ್ರತ್ ಅಬೂಬಕರ್(ರ)ರವರು ಹಝ್ರತ್ ಉಮರ್(ರ)ರವರನ್ನು ಕರೆದುಕೊಂಡು ಮದೀನಕ್ಕೆ ಹಿಂದಿರುಗಿದರು.

(ಅಲ್‌ಬಿದಾಯ ವನ್ನಹಾಯ, ಸಂಪುಟ-3, ಭಾಗ-6, ಪುಟ-302, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಒಂದು ವರದಿಯ ಪ್ರಕಾರ ಈ ಸೈನ್ಯವು ರಬೀಉಲ್ ಅವ್ವಲಿನ ಕೊನೆಯಲ್ಲಿ ಹೊರಟಿತು. (ಅತ್ತಬಖಾತುಲ್ ಕುಬ್ರ, ಸಂಪುಟ-2, ಪುಟ-147, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಹಝ್ರತ್ ಉಸಾಮ(ರ)ರವರು 20 ರಾತ್ರಿಗಳ ಯಾತ್ರೆಯ ನಂತರ ಉಬ್ನಾ ನಿವಾಸಿಗಳ ಮೇಲೆ ಅಚಾನಕ್ಕಾದ ದಾಳಿ ನಡೆಸಿತು. ಮುಂದಿನಿಂದ ಬಂದವರನ್ನು ಕೊಂದು ಹಾಕಲಾಯಿತು. ಕೆಲವರನ್ನು ಬಂಧಿಸಲಾಯಿತು. ಹಝ್ರತ್ ಉಸಾಮ ತನ್ನ ತಂದೆಯ ಸುಹ್‌ಬಾ ಎಂಬ ಹೆಸರಿನ ಕುದುರೆಯಲ್ಲಿ ಸವಾರರಾಗಿದ್ದರು. ಉಸಾಮ ಹಲ್ಲೆ ನಡೆಸಿ, ತನ್ನ ತಂದೆಯನ್ನು ಶಹೀದ್ ಮಾಡಿದ ಕೊಲೆಗಾರನನ್ನು ಕೊಂದು ಹಾಕಿದರು. ಹೀಗೆ ಶತ್ರುಗಳು ಹಿಂದೆ ಮಾಡಿದ ದೌರ್ಜನ್ಯಗಳಿಗೆ ಪ್ರತೀಕಾರ ಪಡೆಯುವುದರಲ್ಲಿ ಯಶಸ್ಸು ಗಳಿಸಿತು. ಬಹಳಷ್ಟು ಯುದ್ಧ ಸಂಪತ್ತನ್ನು ಗಳಿಸಿದರು. ಸಂಜೆಯಾದಾಗ ಹಝ್ರತ್ ಉಸಾಮ ಸೈನ್ಯದೊಡನೆ ಮರಳಿ ಹೋಗಲು ಆದೇಶಿಸಿದರು. 9 ರಾತ್ರಿಗಳಲ್ಲಿ ಖುರಾ ಕಣಿವೆಗೆ ತಲುಪಿದರು. ಸೈನ್ಯ ಸುರಕ್ಷಿತವಾಗಿ ಮರಳಿ ಬರುತ್ತಿದೆ ಎಂಬ

ಸುದ್ದಿಯೊಂದಿಗೆ ಸುವಾರ್ತೆಗಾರರನ್ನು ಮದೀನಕ್ಕೆ ಕಳುಹಿಸಿದರು. ಹೀಗೆ ಅಲ್ಲಿಂದ ಹೊರಟು 6 ರಾತ್ರಿಗಳಲ್ಲಿ ಮದೀನಕ್ಕೆ ತಲುಪಿದರು. ಈ ಯುದ್ಧದಲ್ಲಿ ಮುಸ್ಲಿಮರಲ್ಲಿ ಯಾರೂ ಶಹೀದ್ ಆಗಲಿಲ್ಲ. ಈ ಸೈನ್ಯ ವಿಜಯಿಯಾಗಿ ಮದೀನಕ್ಕೆ ತಲುಪಿದಾಗ ಹಝ್ರತ್ ಅಬೂಬಕರ್(ರ) ಮುಹಾಜಿರರು ಮತ್ತು ಮದೀನಾ ನಿವಾಸಿಗಳ ಜೊತೆಗೆ ಉಸಾಮರನ್ನು ಭೇಟಿಯಾಗಲು ಹೊರಗೆ ಬಂದರು. ಹಝ್ರತ್ ಉಸಾಮ ತನ್ನ ತಂದೆಯ ಕುದುರೆಯಲ್ಲಿ ಸವಾರರಾಗಿ ಪ್ರವೇಶಿಸಿದರು ಮತ್ತು ಹಝ್ರತ್ ಬರೀದ ಬಿನ್ ಹಸೀಬ್ ಅವರ ಮುಂದೆ ಮುಂದೆ ಧ್ವಜವನ್ನು ಎತ್ತಿಕೊಂಡು ಮಸ್ಜಿದ್ ನಬವಿ ತನಕ ತಲುಪಿದರು. ಹಝ್ರತ್ ಉಸಾಮ ಮಸ್ಜಿದ್ ನಬವಿಗೆ ಪ್ರವೇಶಿಸಿ ಎರಡು ರಕಅತ್ ನಫ್ಲ್ ನಮಾಝ್ ನಿರ್ವಹಿಸಿ ಮನೆಗೆ ಹೋದರು. (ಅತ್ತಬಖಾತುಲ್ ಕುಬ್ರ, ಸಂಪುಟ–2, ಪುಟ–147, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಬೇರೆ ಬೇರೆ ವರದಿಗಳ ಪ್ರಕಾರ ಈ ಸೈನ್ಯವು ನಲವತ್ತಿರಿಂದ ಎಪ್ಪತ್ತು ದಿನವರೆಗೆ ಹೊರಗೆ ಇದ್ದನಂತರ ಮದೀನಕ್ಕೆ ಹಿಂದಿರುಗಿದರು.
(ಅಲ್‌ಕಾಮಮಿಲ್ ಫಿತ್ತಾರೀಖ್, ಸಂಪುಟ–2, ಪುಟ–200, ದಾರುಲ್ ಕುತುಬ್ ಇಲ್‌ಮಿಯ 2006)

ಹಝ್ರತ್ ಪೈಗಂಬರ್(ಸ) ತನ್ನ ಕೈಗಳಿಂದ ಕಟ್ಟಿದ ಉಸಾಮರ ಧ್ವಜವನ್ನು, ಹಝ್ರತ್ ಪೈಗಂಬರ್(ಸ)ರ ಪ್ರೀತಿಯ ಕಾರಣದಿಂದ ಹಝ್ರತ್ ಅಬೂಬಕರ್ ಬಿಚ್ಚಲಿಲ್ಲ. ಹಝ್ರತ್ ಅಬೂಬಕರ್(ರ) ಹೇಳಿದರು: ಹಝ್ರತ್ ಪೈಗಂಬರ್(ಸ) ತನ್ನ ಕೈಗಳಿಂದ ಕಟ್ಟಿದ ಧ್ವಜವನ್ನು ಅಬೂಖಹಾಫರ ಮಗನು ಹೇಗೆ ಬಿಚ್ಚಲಿ. ಹೀಗೆ ಉಸಾಮರ ಸೈನ್ಯ ಮರಳಿ ಬಂದ ನಂತರವೂ ಆ ಧ್ವಜವನ್ನು ಬಿಚ್ಚಲಾಗಲಿಲ್ಲ. ಹಝ್ರತ್ ಉಸಾಮರ ನಿಧನದ ತನಕ ಆ ಧ್ವಜ ಉಸಾಮರ ಮನೆಯಲ್ಲೇ ಇತ್ತು ಎಂದು ಬರೆಯಲಾಗಿದೆ.
(ಅಲ್‌ಮಸೀರತುಲ್ ಇಸ್ಲಾಮೀಯ ಲಿಜೈಲುಲ್ ಖಿಲಾಫತುರ್ರಾಶಿದ, ಮುನೀರ್ ಮುಹಮ್ಮದ್ ಅಲ್‌ಗಝ್ಬಾನ್, ಸಂಪುಟ–1, ಪುಟ–34–35, ದಾರುಸ್ಸಲಾಮ್ 2015)

ಉಸಾಮರ ಸೈನ್ಯದ ರವಾನೆಯಿಂದ ಅನೇಕ ದೀರ್ಘಕಾಲೀನ ಪರಿಣಾಮಗಳು ಪ್ರಕಟವಾದುವು. ಖಲೀಫರ ತೀರ್ಮಾನ ಎಷ್ಟು ಸಮಯೋಚಿತ ಮತ್ತು ಪ್ರಯೋಜನಕರವಾಗಿತ್ತು ಎಂದು ಎಲ್ಲ ಜನರಿಗೆ ಮನವರಿಕೆಯಾಯಿತು ಮತ್ತು ಹಝ್ರತ್ ಅಬೂಬಕರ್(ರ) ಬಹಳ ಸೂಕ್ಷ್ಮದೃಷ್ಟಿಯುಳ್ಳವರೂ ತೀಕ್ಷ್ಣಬುದ್ಧಿಯುಳ್ಳವರೂ ಬುದ್ಧಿವಂತರೂ ಆಗಿರುವರು ಎಂದು ಜನರು ಅರಿತುಕೊಂಡರು. ಅರೇಬಿಯದ ಗೋತ್ರಗಳಲ್ಲಿ ಮುಸ್ಲಿಮರ ಬಗ್ಗೆ ಭೀತಿ ಉಂಟಾಯಿತು. ಅರೇಬಿಯದ ಗಡಿಗಳ ಮೇಲೆ ಕಣ್ಣಿರಿಸಿದ್ದ ಅನ್ಯದೇಶಿಯರೊಳಗೆ ಮುಸ್ಲಿಮರ ಕುರಿತು ಭಯ ಹುಟ್ಟಿತು. (ಸಯ್ಯಿದುನಾ ಅಬೂಬಕರ್ ಸಿದ್ದೀಖ್(ರ), ಸಲಾಬಿ, ಪುಟ–258, 268)

ಬ್ರಿಟನಿನ ಪ್ರಸಿದ್ಧ ಪೌರಸ್ತ್ಯನಾದ ಸರ್ ಥಾಮಸ್ ವಾಕರ್ ಆರ್ನಲ್ಡ್ ಬರೆಯುತ್ತಾರೆ:

[AFTER the death of Muhammad, the army he had intended for Syria was despatched thither by Abū Bakr, in spite of the protestations made by certain Muslims in view of the then disturbed state of Arabia. He silenced their expostulations with the words: "I will not revoke any order given by the Prophet. Medina may become the prey of wild beasts, but the army must carry out the wishes of Muhammad." This was the first of that wonderful series of campaigns in which the Arabs overran Syria, Persia and Northern Africa—overturning the ancient kingdom of Persia and despoiling the Roman Empire of some of its fairest provinces.]

(The Preaching of Islam By T.W. Arnold. Chapter III. Page 41. London Constable and Company Ltd. 1913)

ಅದರ ಅನುವಾದ ಹೀಗಿದೆ: ಪ್ರವಾದಿ ಮುಹಮ್ಮದ್(ಸ) ರವರ ಮರಣದ ನಂತರ, ಅರೇಬಿಯಾ ರಾಜ್ಯದ ಕ್ಷೋಭೆಗೊಳಗಾದ ರಾಜ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲವು ಮುಸ್ಲಿಮರು ಮಾಡಿದ ಪ್ರತಿಭಟನೆಯ ಹೊರತಾಗಿಯೂ, ಅಬುಬಕರ್(ರ) ಅವರು ಸೀರಿಯಕ್ಕಾಗಿ ಉದ್ದೇಶಿಸಿರುವ ಸೈನ್ಯವನ್ನು ಅಲ್ಲಿಗೆ ಕಳುಹಿಸಿದರು. ಅವರು ಈ ಮಾತುಗಳೊಂದಿಗೆ ಅವರ ಹೇಳಿಕೆಗಳನ್ನು ಮೌನಗೊಳಿಸಿದರು: "ಪ್ರವಾದಿಯವರು ನೀಡಿದ ಯಾವುದೇ ಆದೇಶವನ್ನು ನಾನು ಹಿಂತೆಗೆದುಕೊಳ್ಳುವುದಿಲ್ಲ. ಮದೀನಾ ಕಾಡು ಮೃಗಗಳ ಬೇಟೆಯಾಗಬಹುದು, ಆದರೆ ಸೈನ್ಯವು ಮುಹಮ್ಮದ್‌ನ ಇಚ್ಛೆಗಳನ್ನು ಪೂರೈಸಬೇಕು. ಮತ್ತು ಅದರ ಕೆಲವು ಉತ್ತಮ ಪ್ರಾಂತ್ಯಗಳ ರೋಮನ್ ಸಾಮ್ರಾಜ್ಯವನ್ನು ಹಾಳುಮಾಡುತ್ತದೆ. ಸಿರಿಯ, ಇರಾನ್ ಮತ್ತು ಉತ್ತರ ಆಫ್ರಿಕವನ್ನು ವಶಪಡಿಸಲು, ಪ್ರಾಚೀನ ಇರಾನಿನ ಆಡಳಿತವನ್ನು ಕೊನೆಗೊಳಿಸಲು ಮತ್ತು ರೋಮನರ ಆಡಳಿತದ ಹಿಡಿತದಿಂದ ಅದರ ಅತ್ಯುತ್ತಮ ರಾಜ್ಯಗಳನ್ನು ಸ್ವತಂತ್ರಗೊಳಿಸಲು ಮುಸ್ಲಿಮರು ಮಾಡಿದ ವೈಭವಶಾಲಿ ಯುದ್ಧಗಳಲ್ಲಿ ಇದು ಮೊದಲ ಯುದ್ಧವಾಗಿತ್ತು.

ಅದೇ ರೀತಿ ಇದರ ಬಗ್ಗೆ ಇನ್‌ಸೈಕ್ಲೊಪೀಡಿಯಾ ಆಫ್ ಇಸ್ಲಾಮ್‌ನಲ್ಲಿ ಹಝ್ರತ್ ಉಸಾಮ(ರ)ರವರ ಉಲ್ಲೇಖದಲ್ಲಿ ಹೀಗೆ ಬರೆಯಲಾಗಿದೆ:

The newly-elected caliph Abu Bakr ordered the expedition to be resumed, in accordance with the Prophet's wishes, though the tribes were already in revolt. Usama reached the region of al-Balka in Syria, where Zayd had fallen, and raided the village of Ubna......His victory brought joy to Medina, depressed by news of the ridda, thus acquiring an importance out of proportion to its real significance, which caused it later to be regarded as the beginning of a campaign for the conquest of Syria.

(The Encyclopaedia of Islam vol. 10 Page 913 Under Usama Printed by Leiden brill 2000)

ಹೊಸದಾಗಿ ಚುನಾಯಿತರಾದ ಖಲೀಫ್ ಅಬುಬಕರ್(ರ) ಅವರು ಗೋತ್ರಗಳಲ್ಲಿ ಈಗಾಗಲೇ ದಂಗೆ ಎದ್ದಿದ್ದರೂ ಉಸಾಮಾ ಅವರ ಸೈನ್ಯವು ಪ್ರವಾದಿ(ಸ) ಅವರ ಆಶಯಗಳನ್ನು ಮುಂದುವರಿಸಲು ಆದೇಶಿಸಿತು. ಉಸಾಮಾ ಸೀರಿಯಾದ ಬಾಲ್ಕಾ ಪ್ರದೇಶವನ್ನು ತಲುಪಿದರು, ಅಲ್ಲಿ ಜೈದ್ ಕೊಲ್ಲಲ್ಪಟ್ಟರು ಮತ್ತು ಉಸಾಮಾ ಉಬ್ನಾ ಪಟ್ಟಣದ ಮೇಲೆ ಅಕ್ರಮಣ ಮಾಡಿದರು....... ಅವರ ವಿಜಯದಿಂದಾಗಿ ಈಗಾಗಲೆ ಮದೀನದವರು ಧರ್ಮತ್ಯಾಗಿಗಳ ಪಿತೂರಿತನದಿಂದಾಗಿ ಖಿನ್ನತೆಗೆ ಒಳಗಾಗಿದ್ದರು ಅವರಿಗೆ ಈ ವಿಜಯವು ಮದೀನಾಗೆ ಸಂತೋಷವನ್ನು ತಂದಿತು. ಆದ್ದರಿಂದ, ಈ ಅಭಿಯಾನವು ಸಾಮಾನ್ಯ ಅಭಿಯಾನದಿಂದ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು, ಇದರಿಂದಾಗಿ ಈ ಅಭಿಯಾನವು ಸಿರಿಯಾವನ್ನು ವಶಪಡಿಸಿಕೊಳ್ಳುವ ಮುನ್ನುಡಿಯಾಗಿ ಪರಿಗಣಿಸಲ್ಪಟ್ಟಿದೆ.

ಹಝ್ರತ್ ಅಬೂಬಕರ್(ರ)ರಿಗೆ ಎದುರಿಸಬೇಕಾಗಿ ಬಂದ ಮತ್ತೊಂದು ಕಷ್ಟತೆ ಝಕಾತ್ ನೀಡುವುದನ್ನು ನಿರಾಕರಿಸಿದವರ ಪಿತೂರಿ. ಅಲ್ಲಾಮಾ ಇಬ್ನ್ ಇಸ್‌ಹಾಕ್ ಹೇಳುತ್ತಾರೆ ಪ್ರವಾದಿ(ಸ) ರವರ ಮರಣದ ಸಮಯದಲ್ಲಿ ಮಕ್ಕಾ ಮತ್ತು ಮದೀನಾದ ಎರಡು ಮಸೀದಿಗಳ ಜನರನ್ನು ಹೊರತುಪಡಿಸಿ ಎಲ್ಲಾ ಅರಬ್ಬರು ಧರ್ಮಭ್ರಷ್ಟರಾದರು. (ಅಲ್‌ಬಿದಾಯ ವನ್ನಹಾಯ ಲಿಇಬ್ನೆ ಕಸೀರ್, ಸಂಪುಟ–3, ಭಾಗ–6, ಪುಟ–309, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಪ್ರವಾದಿ(ಸ)ರವರ ಮರಣದ ನಂತರ ಮಕ್ಕಾದ ಜನರು ಧರ್ಮಭ್ರಷ್ಟತೆಯಿಂದ ಸುರಕ್ಷಿತವಾಗಿ ಉಳಿದರಲಿ ಎಂಬುದರ ಬಗ್ಗೆ ವಿವರಗಳು ಈ ಕೆಳಗಿನಂತಿವೆ. ಸುಹೈಲ್ ಬಿನ್ ಉಮ್ರೊ ಅವರು ಮಕ್ಕ ವಿಜಯದ ಸಂದರ್ಭದಲ್ಲಿ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು ಅವರು ಬದರ್ ಯುದ್ಧದಲ್ಲಿ ಕಾಫಿರ್ ಆಗಿದ್ದ ಸ್ಥಿತಿಯಲ್ಲಿ ಮುಸ್ಲಿಮರ ಸೆರೆವಾಸಿಯಾಗಿದ್ದರು. ಅವರು ತಮ್ಮ ತುಟಿಗಳ ಮೇಲೆ ಗುರುತುಗಳನ್ನು ಮಾಡಿಕೊಂಡಿದ್ದರು. ಹಝ್ರತ್ ಉಮರ್(ರ)ರವರು ಆ ಸಂದರ್ಭದಲ್ಲಿ ಪ್ರವಾದಿ(ಸ) ಅವರನ್ನು ಹೇಳಿದರು: ಯಾ ರಸೂಲಲ್ಲಾಹ್!! ಅವನು ಗುರುತು ಮಾಡಿದ ಸ್ಥಳದಲ್ಲಿ ಅವನ ಮುಂದೆ ಎರಡು ಹಲ್ಲುಗಳನ್ನು ಎಳೆಯಿರಿ. ಹೀಗೆ ಮಾಡಿದರೆ ಅವನು ನಿಮ್ಮ(ಸ) ಮುಂದೆ ನಿಮ್ಮ ವಿರುದ್ಧ ನಿಲ್ಲಲು ಸಾಧ್ಯವಾಗುವುದಿಲ್ಲ. ಪ್ರವಾದಿ(ಸ) ಹೇಳಿದರು: ಓ ಉಮರ್! ಅದೆಲ್ಲ ಬಿಡಿ, ಆತನು ಮುಂದಿನ ಕಾಲದಲ್ಲಿ ಅಚ್ಚುಮೆಚ್ಚಿನ ಜಾಗದಲ್ಲಿ ನಿಲ್ಲಬಹುದು.

ಹಝ್ರತ್ ಉಮರ್(ರ) ಅವರನ್ನು ಶಿಕ್ಷಿಸಲು ಬಯಸಿದ್ದರು. ಪ್ರವಾದಿ(ಸ) ಹೇಳಿದರು, ಇಲ್ಲ, ಏನನ್ನೂ ಹೇಳಬೇಡ. ಒಂದು ಸಂದರ್ಭಬರುವುದು ಅವನು ಎಂತಹ ಮಾತುಗಳನ್ನು ಆಡುವನು ಎಂದರೆ ನೀವು ಆತನನ್ನು ಮೆಚ್ಚುಗೆ ನೀಡುವಿರಿ. ಏನೇ ಇರಲಿ ಪ್ರವಾದಿ(ಸ)ರವರು ಮರಣ ಹೊಂದಿ ಮಕ್ಕಾದ ಜನರು ತತ್ತರಿಸಿರುವ ಸಮಯದಲ್ಲಿ ಈ ಸಂದರ್ಭವು ಬಂದಿತು ಎಂದು ಅವರು ಹೇಳುತ್ತಾರೆ. ಖುರೈಶೀಯರು ಅರಬ್ಬರು ಧರ್ಮಭ್ರಷ್ಟರಾಗುವುದನ್ನು ನೋಡಿದಾಗ ಮತ್ತು ಅಲ್ಲಿಯ ಗವರ್ನರ್ ಆದ ಅತ್ತಾಬ್ ಬಿನ್ ಉಸೈದ್‌ರಿಗೆ ತಲುಪಿದಾಗ, ಅತ್ತಾಬ್ ಅಡಗಿ ಕುಳಿತನು ಮತ್ತು ಮಕ್ಕ ನಡುಗಿತು. ಆ ಸಮಯದಲ್ಲಿ ಹಝ್ರತ್ ಸುಹೈಲ್ ಬಿನ್ ಅಮ್ರ್ ಭಾಷಣ ಮಾಡುತ್ತಾ ಹೇಳಿದರು: ಎಲೈ ಖುರೈಶಿಯರೇ, ನೀವು ಎಲ್ಲರಿಗಿಂತ ಕೊನೆಯದಾಗಿ ಇಸ್ಲಾಂ ಸ್ವೀಕಾರ ಮಾಡಿ, ಎಲ್ಲರಿಗಿಂತ ಮೊದಲು ಧರ್ಮತ್ಯಾಗ ಮಾಡುವವರಾಗಬೇಡಿರಿ. ಅಲ್ಲಾಹನಾಣೆ, ಸೂರ್ಯ ಮತ್ತು ಚಂದ್ರ ಪೂರ್ವದಿಂದ ಪಶ್ಚಿಮದ ವರೆಗೆ ಹರಡುವ ಹಾಗೆಯೇ ಈ ಧರ್ಮ ಹರಡುವುದು. ಹೀಗೆ

ಸುಹೈಲ್ ಒಂದು ದೀರ್ಘವಾದ ಭಾಷಣವನ್ನು ಮಾಡಿದರು. ಈ ಭಾಷಣದ ಪ್ರಭಾವ ಮಕ್ಕಾ ನಿವಾಸಿಗಳ ಹೃದಯಗಳಲ್ಲಿ ಉಂಟಾಯಿತು. ಅಡಗಿಕೊಂಡಿದ್ದ ಹಝ್ರತ್ ಉತಾಬ್‌ರನ್ನು ಕೂಡ ಕರೆಯಲಾಯಿತು. ಖುರೈಶಿಯರು ಇಸ್ಲಾಮಿನಲ್ಲಿ ನೆಲೆನಂತರು. (ಅಸದುಲ್‌ಗಾಬ, ಸಂಪುಟ-2, ಪಉಟ-585, ಸುಹೈಲ್ ಬಿಮ್ ಉಮ್ರೊ(ರ), ದಾರುಲ್ ಕುತುಬ್ ಇಲ್‌ಮಿಯ)

ಜನರಲ್ಲಿ ಧರ್ಮತ್ಯಾಗ ಮಾಡಿದವರಲ್ಲಿ ಅನೇಕ ವಿಧಗಳ ಧರ್ಮತ್ಯಾಗಿಗಳಿದ್ದರು. ಅದರ ಬಗ್ಗೆ ಪ್ರಸ್ತಾಪಿಸುತ್ತಾ ಒಬ್ಬ ಲೇಖಕ ಬರೆಯುತ್ತಾರೆ: ಧರ್ಮತ್ಯಾಗದ ಅನೇಕ ವಿಧಗಳಿದ್ದುವು. ಕೆಲವರು ಪೂರ್ಣವಾಗಿ ಇಸ್ಲಾಂ ಧರ್ಮವನ್ನು ಉಪೇಕ್ಷಿಸಿದರು ಮತ್ತು ವಿಗ್ರಹ ಆರಾಧಕರಾದರು. ಕೆಲವರು ಪ್ರವಾದಿತ್ವವಾದಿಗಳಾದರು. ಕೆಲವು ಜನರು ಇಸ್ಲಾಂ ಧರ್ಮದಲ್ಲಿ ನೆಲೆನಿಂತಿದ್ದರು. ನಮಾಝ್ ನಿರ್ವಹಿಸುತ್ತಿದ್ದರು. ಆದರೆ ಝುಕಾತ್ ನೀಡುವುದು ಕಡ್ಡಾಯವೆಂಬುದನ್ನು ಮತ್ತು ಅದನ್ನು ಖಲೀಫರಿಗೆ ಕೊಡುವುದರ ಆವಶ್ಯಕತೆಯನ್ನು ನಿರಾಕರಿಸಿದರು. ಕೆಲವರು ಹಝ್ರತ್ ಪೈಗಂಬರ್(ಸ)ರ ನಿಧನದಿಂದ ಸಂತುಷ್ಟರಾದರು ಮತ್ತು ಜಾಹಿಲಿಯ್ಯಾ ಕಾಲದ ಅಭ್ಯಾಸಗಳನ್ನು ಪುನಃ ಶುರುಮಾಡಿದರು. ಕೆಲವರು ಆಶ್ಚರ್ಯ ಮತ್ತು ಹಿಂಜರಿಕೆಯಿಂದ ಯಾರು ಮೇಲುಗೈ ಸಾಧಿಸುತ್ತಾರೆ ಎಂದು ಕಾಯುತ್ತಿದ್ದರು. ಈ ಎಲ್ಲಾ ರೂಪಗಳನ್ನು ಸಿರಾ ಮತ್ತು ಫಿಖ್ ವಿದ್ವಾಂಸರು ವಿವರಿಸಿದ್ದಾರೆ. ಇಮಾಮ್ ಖತ್ತಾಬಿಯವರು ಎರಡು ರೀತಿಯ ಧರ್ಮಭ್ರಷ್ಟರಿದ್ದರು ಎಂದು ಬರೆಯುತ್ತಾರೆ, ಒಬ್ಬರು ಧರ್ಮದಿಂದ ಧರ್ಮಭ್ರಷ್ಟರು ಎಂದು ಹೇಳುತ್ತಾರೆ. ಅವರು ಮಿಲ್ಲತ್‌ಅನ್ನು ತೊರೆದರು ಮತ್ತು ಕುಫರ್ ಕಡೆಗೆ ಮರಳಿದರು. ಈ ಪಂಥದ ಎರಡು ಗುಂಪುಗಳಿದ್ದವು. ಒಂದು ಗುಂಪು ಮುಸೈಲಮ ಕಝ್ಝಾಬ್ ಮತ್ತು ಅಸ್ವದ್ ಅನ್ಸಿಯನ್ನು ನಂಬಿದ ಜನರು. ಅವರ ಪ್ರವಾದಿತ್ವವನ್ನು ದೃಢೀಕರಿಸಿದರು ಮತ್ತು ಪ್ರವಾದಿ(ಸ) ಅವರ ಪ್ರವಾದಿತ್ವವನ್ನು ನಿರಾಕರಿಸಿದರು. ಎರಡನೆಯ ಗುಂಪು ಇಸ್ಲಾಂ ಧರ್ಮದಿಂದ ಧರ್ಮಭ್ರಷ್ಟರಾದವರು. ಷರಿಯಾ ನಿಯಮಗಳನ್ನು ನಿರಾಕರಿಸಿದರು. ನಮಾಝ್ ಮತ್ತು ಝುಕಾತ್ ಇತ್ಯಾದಿ ವಿಷಯಗಳನ್ನು ತ್ಯಜಿಸಿ, ಅಜ್ಞಾನಿಗಳ ಧರ್ಮಕ್ಕೆ ಮರಳಿದರು ಮತ್ತು ಎರಡನೆಯ ವಿಧದ ಧರ್ಮಭ್ರಷ್ಟರು ನಮಾಝ್ ಮತ್ತು ಝುಕಾತ್ ನಡುವೆ ವ್ಯತ್ಯಾಸವನ್ನು ತೋರಿಸಿದರು. ಅವರು ನಮಾಝನ್ನು ಒಪ್ಪಿಕೊಂಡರು ಮತ್ತು ಝುಕಾತ್‌ನ ಬಾಧ್ಯತೆ ಮತ್ತು ಅದನ್ನು ಖಲೀಫರಿಗೆ ನೀಡುವ ಬಾಧ್ಯತೆಯನ್ನು ನಿರಾಕರಿಸಿದರು. ಝುಕಾತ್ ಅನ್ನು ತಡೆಹಿಡಿದವರಲ್ಲಿ ಝುಕಾತ್ ಪಾವತಿಸಲು ಬಯಸಿದವರೂ ಇದ್ದರು ಆದರೆ ಅವರ ಮುಖ್ಯಸ್ಥರು ಹಾಗೆ ಮಾಡದಂತೆ ತಡೆದಿದ್ದರು.

ಧರ್ಮಭ್ರಷ್ಟರ ವಿವಿಧ ವಿಭಾಗಗಳು ಖಾಜಿ ಅಯಾಜ್ ಅವರ ವಿಭಜನೆಗೆ ಹತ್ತಿರವಾಗಿವೆ ಆದರೆ ಅವರು ಮೂರು ಪ್ರಕಾರಗಳನ್ನು ಹೇಳಿದ್ದಾರೆ: ಒಬ್ಬರು ವಿಗ್ರಹಾರಾಧನೆಯನ್ನು ಅಳವಡಿಸಿಕೊಂಡವರು; ಎರಡನೇಯದು ಮುಸೈಲ್ಮಾ ಕಝ್ಝಾಬ್ ಮತ್ತು ಅಸ್ವದ್ ಅನ್ಸಿಯನ್ನು ಅನುಸರಿಸಿದವರು, ಇವರಿಬ್ಬರು ಪ್ರವಾದಿತ್ವದ ದಾವೆದಾರರಾಗಿದ್ದರು; ಮೂರನೆಯದಾಗಿ, ಇಸ್ಲಾಂ ಧರ್ಮಕ್ಕೆ ಸೇರಿಕೊಂಡವರು ಆದರೆ ಝುಕಾತ್ ಅನ್ನು ನಿರಾಕರಿಸಿದವರು ಮತ್ತು ಅದರ ಬಾಧ್ಯತೆ ಪ್ರವಾದಿ(ಸ)ರ ಕಾಲಕ್ಕೆ ಸೀಮಿತವಾಗಿದೆ ಎಂಬ ವ್ಯಾಖ್ಯಾನಕ್ಕೆ ಬಲಿಯಾದವರು.

ಮತ್ತೆ ಡಾಕ್ಟರ್ ಅಬ್ದುರ್ರಹ್ಮಾನ್ ಹೀಗೆ ಬರೆಯುತ್ತಾರೆ: ಧರ್ಮತ್ಯಾಗಿಗಳು ನಾಲ್ಕು ವಿಧಗಳಲ್ಲಿ ಇದ್ದರು. ಒಂದು, ಕೆಲವರು ಮೂರ್ತಿಪೂಜಕರಾದರು. ಎರಡು, ಕೆಲವರು ಸುಳ್ಳುಪ್ರವಾದಿತ್ವವನ್ನು ವಾದಿಸಿದ ಅಸ್ವದ್ ಅನ್ಸಿ, ಮುಸೈಲಿಮ ಕದ್ದಾಬ್ ಮತ್ತು ಸಜ್ಜಾಹ್‌ರಿಗೆ ವಿಧೇಯರಾದರು. ಮೂರು, ಕೆಲವರು ಝುಕಾತ್ ನೀಡುವುದನ್ನು ನಿರಾಕರಿಸಿದರು. ನಾಲ್ಕು, ಕೆಲವರು ಝುಕಾತ್ ನೀಡುವುದನ್ನು ನಿರಾಕರಿಸಲಿಲ್ಲ. ಆದರೆ ಹಝ್ರತ್ ಅಬೂಬಕರ್(ರ)ರಿಗೆ ನೀಡುವುದನ್ನು ನಿರಾಕರಿಸಿದರು. (ಸಯ್ಯದುನಾ ಅಬೂಬಕರ್ ಸಿದ್ದೀಖ್(ರ) ಶಖ್ಸಿಯ್ಯತ್ ಔರ್ ಕಾರ್ನಾಮೆ, ಡಾ॥ ಅಲಿ ಮುಹಮ್ಮದ್ ಸಲಾಬಿ ಅನುವಾದಕ, ಪುಟ-272-273, ಅಲ್‌ಫುರ್ಖಾನ್ ಮುಝಫ್ಫರ್‌ಗಡ್ ಪಾಕಿಸ್ತಾನ್)

ಝುಕಾತ್ ನೀಡಲು ನಿರಾಕರಿಸಿದ ಗೋತ್ರಗಳಲ್ಲಿ ಮದೀನದ ಗೋತ್ರಗಳಾದ ಅಬ್ಸ್, ಝುಬ್ಯಾನ್ ಮತ್ತು ಅವರೊಂದಿಗೆ ಬನೂ ಕಿನಾನ, ಉತ್ಫಾನ್ ಮತ್ತು ಫಝಾರ ಎಂಬವರಾಗಿದ್ದರು. (ಹಝ್ರತ್ ಅಬೂಬಕರ್ ಸಿದ್ದೀಖ್(ರ), ಮುಹಮ್ಮದ್ ಹುಸೈನ್ ಹೈಕಲ್ ಅನುವಾದಕ, ಪುಟ-101, ಇಲ್ಮವ ಇರ್ಫಾನ್ ಪಬ್ಲಿಷರ್ಸ್ ಲಾಹೋರ್)

ಝುಕಾತ್ ನಿಷೇಧದ ಬಗ್ಗೆ, ಹಝ್ರತ್ ಅಬೂಬಕರ್(ರ) ಅವರು ಶ್ರೇಷ್ಠ ಸಹಾಬಿಗಳ ಸಲಹೆಯನ್ನು ಕೇಳಿದರು ಎಂದು ಉಲ್ಲೇಖಿಸಲಾಗಿದೆ. ಹಝ್ರತ್ ಅಬೂಬಕರ್(ರ) ಅವರು ಕಿಬಾರ್(ಶ್ರೇಷ್ಠ) ಸಹಾಬರನ್ನು ಒಟ್ಟುಗೂಡಿಸಿದರು ಮತ್ತು ಝುಕಾತ್ ನಿರಾಕರಿಸುವವರ ವಿರುದ್ಧ ಹೋರಾಡಲು ಸಲಹೆ ನೀಡಿದರು. ಅವರು ತಮ್ಮನ್ನು ಮುಸ್ಲಿಮರು ಎಂದು ಕರೆದುಕೊಂಡವರು ಆದರೆ ಝುಕಾತ್ ನಿರಾಕರಿಸಿದರು. ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಮತ್ತು ಹೆಚ್ಚಿನ ಮುಸ್ಲಿಮರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ನಂಬುವವರ ವಿರುದ್ಧ ಹೋರಾಡದೆ ಅವರೊಂದಿಗೆ ಕೈಜೋಡಿಸಿ ಧರ್ಮಭ್ರಷ್ಟರ ವಿರುದ್ಧ ಕೆಲಸ ಮಾಡಬೇಕೆಂದು ಅಭಿಪ್ರಾಯಪಟ್ಟರು. ಕೆಲವರು ಈ ಅಭಿಪ್ರಾಯವನ್ನು ವಿರೋಧಿಸಿದರು ಆದರೆ ಅವರ ಸಂಖ್ಯೆ ಬಹಳ ಕಡಿಮೆ ಇತ್ತು. (ಹಝ್ರತ್ ಸೈಯದುನಾ ಅಬುಬಕರ್ ಸಿದ್ದಿಕ್(ರ), ಮುಹಮ್ಮದ್ ಹುಸೇನ್ ಹೈಕಲ್, ಪುಟ-135, ಮಕ್ತಾಬ್ ಜದೀದ್ ಲಾಹೋರ್)

ಒಂದು ವರದಿಯ ಪ್ರಕಾರ, ಸಹಾಬರವರು ಹಝ್ರತ್ ಅಬುಬಕರ್(ರ) ಅವರಿಗೆ ಝುಕಾತ್ ವಿರೋಧಿಗಳನ್ನು ಅವರ ಸ್ಥಿತಿಯಲ್ಲಿ ಬಿಡಲು ಮತ್ತು ಅವರ ಹೃದಯದಲ್ಲಿ ನಂಬಿಕೆಯನ್ನು ಸ್ಥಾಪಿಸುವವರೆಗೆ ಅವರ ಹೃದಯವನ್ನು ಸಂಗ್ರಹಿಸಲು ಸಲಹೆ ನೀಡಿದರು ಮತ್ತು ನಂತರ ಅವರಿಂದ ಝುಕಾತ್‌ಅನ್ನು ಸಂಗ್ರಹಿಸಬೇಕು ಎಂದು ಸಲಹೆ ನೀಡಿದರು. ಆದರೆ ಹಝ್ರತ್ ಅಬೂಬಕರ್(ರ) ಅದನ್ನು ಸ್ವೀಕರಿಸಲಿಲ್ಲ ಮತ್ತು ನಿರಾಕರಿಸಿದರು. (ಅಲ್‌ಬದಾಇಯ್ಯ ವನ್ನಹಾಯ, ಸಂಪುಟ-3, ಭಾಗ-6, ಪುಟ-308, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಝುಕಾತ್ ನಿರಾಕರಿಸುವವರ ವಿರುದ್ಧ ಹೋರಾಡಬೇಕು ಮತ್ತು ಝುಕಾತ್ ನೀಡುವಂತೆ ಒತ್ತಾಯಿಸಬೇಕು ಎಂದು ಹಝ್ರತ್ ಅಬೂಬಕರ್(ರ) ಅಭಿಪ್ರಾಯಪಟ್ಟರು. ಈ ವಿಷಯದ ಬಗ್ಗೆ ಹಝ್ರತ್ ಅಬೂಬಕರ್(ರ)ರವರ ಎಷ್ಟು ದೃಢವಾಗಿದ್ದರು ಎಂದರೆ ಅವರು ಚರ್ಚೆ ಮಾಡುವಾಗ ಅವರ ಮಾತುಗಳು ಬಹಳ ಗಟ್ಟಿಯಾಗಿತ್ತು.

ಅಲ್ಲಾಹನಾಣೆ! ಅಲ್ಲಾಹನಾಣೆ, ಝುಕಾತನ್ನು ನೀಡುವುದನ್ನು ನಿರಾಕರಿಸುವವರು ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ನೀಡುತ್ತಿದ್ದ ಹಾಗೆ ಈಗ ಒಂದು ಹಗ್ಗ ನೀಡುವುದನ್ನು ನಿರಾಕರಿಸಿದರೂ ನಾನು ಅವರೊಂದಿಗೆ ಯುದ್ಧ ಮಾಡುವೆನು. (ಹಝ್ರತ್ ಅಬುಬಕರ್ ಸಿದ್ದಿಕ್(ರ) ಅವರಿಂದ ಮುಹಮ್ಮದ್ ಹುಸೇನ್ ಹೈಕಲ್, ಪುಟ-135, 136 ಮಕ್ತಾಬ್ ಜದೀದ್ ಲಾಹೋರ್)

ಬುಖಾರಿಯ ಒಂದು ವರದಿಯಲ್ಲಿ ಹೇಳಲಾಗಿದೆ. ಹಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ ಅವರು ಹೇಳಿದರು ಹಝ್ರತ್ ಉಮರ್(ರ) ಹೇಳಿದರು: ನೀವು ಜನರೊಂದಿಗೆ ಹೇಗೆ ಯುದ್ಧವಾಡುವಿರಿ ಏಕೆಂದರೆ ಪ್ರವಾದಿ(ಸ) ಹೇಳಿದ್ದಾರೆ **ಉಮಿರ್‌ತು ಅನ್ ಅಖಾತಿಲನ್ನಾಸ ಹತ್ತಾ ಯಖೂಲೂ ಲಾ ಇಲಾಹ ಇಲ್ಲಲ್ಲಾಹು ಫಮನ್ ಖಾಲಹಾ ಫಖದ್ ಅಸಮ ಮಿನ್ನಿ ಮಾಲಹೂ ವ ನಫ್ಸಹೂ ಅಲಲ್ಲಾಹ್**- ಅಲ್ಲಾಹನ ಹೊರತು ಆರಾಧನೆಗೆ ಬೇರೆ ಯಾರು ಇಲ್ಲ ಎಂದು ಜನರು ಒಪ್ಪಿಕೊಳ್ಳುವವರೆಗೂ ಅವರೊಂದಿಗೆ ಹೋರಾಡಲು ನನಗೆ ಆಜ್ಞಾಪಿಸಲಾಯಿತು, ಮತ್ತು ಯಾರು ಅದನ್ನು ಒಪ್ಪಿಕೊಂಡರೂ, ಅವನು ನನ್ನಿಂದ ತನ್ನ ಆಸ್ತಿ ಮತ್ತು ಅವನ ಪ್ರಾಣವನ್ನು ಉಳಿಸಿಕೊಳ್ಳುತ್ತಾನೆ ಮತ್ತು ಅದರ ಲೆಕ್ಕಾಚಾರವು ಅಲ್ಲಾಹನ ಬಳಿ ಇದೆ. ಆಗ ಹಝ್ರತ್ ಅಬೂಬಕರ್(ರ) ಹೇಳಿದರು: ಅಲ್ಲಾಹನ ಆಣೆ! ನಮಾಝ್ ಮತ್ತು ಝುಕಾತ್ ನಡುವೆ ವ್ಯತ್ಯಾಸವನ್ನು ತೋರಿಸುವವರೊಂದಿಗೆ ನಾನು ಖಂಡಿತವಾಗಿಯೂ ಹೋರಾಡುತ್ತೇನೆ ಏಕೆಂದರೆ ಝುಕಾತ್ ಸಂಪತ್ತಿನ ಹಕ್ಕಾಗಿದೆ. ಅಲ್ಲಾಹನಾಣೆ! ಅಲ್ಲಾಹನ ಸಂದೇಶವಾಹಕರಾದ ಪ್ರವಾದಿ(ಸ) ಅವರಿಗೆ ಅವರು ಪಾವತಿಸುತ್ತಿದ್ದ ಮೇಕೆಯನ್ನು ಅವರು ನನಗೆ ನೀಡದಿದ್ದರೆ, ಅವರು ಅದನ್ನೂ ತಡೆದರೆ ನಾನು ಅವರೊಂದಿಗೆ ಹೋರಾಡುತ್ತೇನೆ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾಹನ ಆಣೆ! ಇದು ಸಂಭವಿಸಲಿಲ್ಲ ಆದರೆ ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಅಬುಬಕರ್(ರ) ಅವರ ಮನಸ್ಸನ್ನು ತೆರೆದನು. ಇದು ಸತ್ಯ ಎಂದು ನಾನು ತಿಳಿದುಕೊಂಡೆ.

ಹಝ್ರತ್ ಸೈಯದ್ ಝೈನ್-ಉಲ್-ಅಬಿದೀನ್ ವಲಿಯುಲ್ಲಾ ಶಾ ಸಾಹಿಬ್(ರ)ರವರ ಒಂದು ಹದೀಸ್ ಹೀಗಿದೆ **ಅಸಮ ಮಿನ್ನಿ ಮಾಲಹೂ ವ ನಫ್ಸಹೂ ಇಲ್ಲಾ ಬಿಹಖ್ಖಿಹೀ**- ಇದನ್ನು ವ್ಯಾಖ್ಯಾನಿಸುತ್ತ ಅವರು ಬರೆಯುತ್ತಾರೆ **"ಇಲ್ಲಾ ಬಿಹಖ್ಖಿಲ್ ಇಸ್ಲಾಮ್"** ಎಂಬ ವಾಕ್ಯವೂ ಇದರ ತಿರುಳನ್ನು ಇನ್ನೂ ಉತ್ತಮವಾಗಿ ತೆರೆಯುತ್ತದೆ. ಒಬ್ಬ ಮುಸಲ್ಮಾನನು **ಲಾ ಇಲಾಹ ಇಲ್ಲಲ್ಲಾಹ್** ಎಂದು ಒಪ್ಪಿಕೊಂಡು ಇಸ್ಲಾಮಿಕ್ ಹಕ್ಕುಗಳ ಬಗ್ಗೆ ಕಾಳಜಿ ವಹಿಸದಿದ್ದರೆ, ಅವನು ಸಹ ಜವಾಬ್ದಾರನಾಗಿರುತ್ತಾನೆ. ಕೇವಲ ಈಮಾನ್ ತಂದ ಕಾರಣದಿಂದ ಅವನು ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. **ಬಿಹಖ್ಖಿಲ್ ಇಸ್ಲಾಮ್** ಅನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಒಂದು ಇಸ್ಲಾಮಿಕ್ ಹಕ್ಕುಗಳ ವಿಷಯಕ್ಕೆ ಬಂದಾಗ, **"ಹಖ್"** ಎಂಬ ಧಾತುವಾಗಿದೆ. ಅದು ಬಹುವಚನದ ಅರ್ಥವನ್ನು ನೀಡುತ್ತದೆ. ಎರಡನೇಯ ಅರ್ಥ ಏನೆಂದರೆ ಇಸ್ಲಾಮ್ ಇಂತಹ ಸಂಪತ್ತುಗಳನ್ನು ಪಡೆಯಲು ಆಜ್ಞಾಪಿಸುತ್ತದೆ. **ಹಖಿಲ್ ಅಮರ: ಅಸ್ಬತಹು ವ ಔ ಹಬ್ಬಹೂ** ಅಂದರೆ ಅದು ಅಗತ್ಯವೆಂದು ಘೋಷಿಸುತ್ತದೆ. ಇದನ್ನು ಸಾಂಕ್ರಾಮಿಕ ಅರ್ಥದಲ್ಲಿಯೂ ಬಳಸಲಾಗುತ್ತದೆ." (ಸಾಹಿಹ್ ಬುಖಾರಿ, ಕಿತಾಬ್ ಅಲ್-ಇಮಾನ್, ಸಂಪುಟ-1, ಪುಟ-65)

"ಇಸ್ಲಾಮಿನಲ್ಲಿ ಉಮ್ಮತ್ತಿನ ಜನರ ಭದ್ರತೆಯು ಹಕ್ಕುಗಳನ್ನು ನೀಡುವುದರಲ್ಲಿಯೇ ಉಳಿದಿದೆ. ತೆರಿಗೆಯನ್ನು ಪಾವತಿಸದಿರುವುದು ಬಂಡಾಯ

ಮತ್ತು ಕಡ್ಡಾಯ ಶಿಕ್ಷೆಯಂತಿದೆಯೋ ಅದೇ ರೀತಿಯಲ್ಲಿ ಝಕಾತ್ ಪಾವತಿಸದಿರುವುದು ಆಗಿದೆ. ಹಝ್ರತ್ ಉಮರ್(ರ) ಅವರು ಹಝ್ರತ್ ಅಬೂಬಕರ್(ರ) ಅವರನ್ನು ಮೊದಲು ಒಪ್ಪಲಿಲ್ಲ ಆದರೆ ಅವರು **ಇಲ್ಲಾ ಬಿಹಖ್ಖಿಹೀ** ಎಂಬ ಪದಗಳಿಂದ ಅದರ ತಿರುಳನ್ನು ಆಲಿಸಿದ ನಂತರ ಅವರು ಹಝ್ರತ್ ಅಬೂಬಕರ್(ರ)ಅವರ ಅಭಿಪ್ರಾಯವನ್ನು ಒಪ್ಪಿಕೊಂಡರು. ಕೇವಲ ನಾಲಿಗೆಯಿಂದ **ಲಾ ಇಲಾಹ ಇಲ್ಲಲ್ಲಾಹ್** ಎಂದು ಹೇಳುವುದು ಸತ್ಕರ್ಮಗಳ ಅನುಪಸ್ಥಿತಿಯಲ್ಲಿ ಸಂಪೂರ್ಣವಾಗಿ ವಾಸ್ತವಿಕತೆಯನ್ನು ಹೊಂದಿರುವುದಿಲ್ಲ ಎಂಬುದು ಈ ಘಟನೆಯಿಂದ ಸ್ಪಷ್ಟವಾಗಿದೆ......; ಈ ಅಧ್ಯಾಯದ ಶೀರ್ಷಿಕೆ **ಫಇನ್ ತಾಬು ವ ಅಖಾಮೂಸ್ಸಲಾತ ವ ಆತುಝ್ಝಕಾತ ಫಖಲ್ಲೂ ಸಬೀಲಹುಮ್** ಎಂಬ ಆಯತ್ ಆಗಿದೆ.

ಈ ಸೂರಾದಲ್ಲಿ, ಮೇಲಿನ ಆಯತ್ತಿನ ವಿಳಯವನ್ನು ಪುನರಾವರ್ತಿಸುತ್ತಾ ಅಲ್ಲಾಹನು ಹೇಳುತ್ತಾನೆ: **ಫಇನ್ ತಾಬೂ ವ ಅಖಾಮೂಸ್ಸಲಾತ ವ ಆತುಝ್ಝಕಾತ ಫಇಖ್ವಾನುಕುಮ್ ಫಿದ್ದೀನಿ**– ಅಂದರೆ ಅವರು ಪಶ್ಚಾತ್ತಾಪಪಟ್ಟು ನಮಾಝನ್ನು ನಿರ್ವಹಿಸಿದರೆ ಮತ್ತು ಝಕಾತ್ ಪಾವತಿಸಿದರೆ, ಅವರು ಧರ್ಮದಲ್ಲಿ ನಿಮ್ಮ ಸಹೋದರರಾಗಿರುವರು ಮತ್ತು ಅವರನ್ನು ವಿರೋಧಿಸಬಾರದು. ಈ ಮೂರು ವಿಷಯಗಳಲ್ಲಿ ಒಂದನ್ನು ಸಹ ನಿರಾಕರಿಸಿದರೆ ಆತನು ಮುಸಲ್ಮಾನನಲ್ಲ ಎಂಬುದನ್ನು ಈ ಮಾತುಗಳು ಸಾಬೀತುಪಡಿಸುತ್ತವೆ. ಇಸ್ಲಾಮಿನ ಐದು ಸ್ತಂಭಗಳಿಗೆ ವಿಧೇಯತೆ ಕಡ್ಡಾಯವಾಗಿದೆ. ಅಲ್ಲಾಹನಿಗಾಗಿ ಖರ್ಚು ಮಾಡುವುದು ಸಮಾಜದ ದುರ್ಬಲ ವರ್ಗಗಳ ಹಕ್ಕು ಎಂದು ಸ್ವತಃ ಪ್ರವಾದಿ(ಸ) ಹೇಳಿದ್ದಾರೆ. ಅಂದರೆ, ಸಾಮರ್ಥ್ಯವುಳ್ಳ ಜನರು ಇಸ್ಲಾಮಿನ ನಿಯಮಗಳನ್ನು ಪಾಲಿಸುವುದು ಕಡ್ಡಾಯವಾಗಿದೆ ಮತ್ತು ಅವರಿಗೆ ವಿಧಿಸಲಾದ ಆರ್ಥಿಕ ಹಖ್ಖುಗಳನ್ನು ಪಾವತಿಸುವುದು ಅವರ ಕರ್ತವ್ಯವಾಗಿದೆ. ಹೀಗೆ ಅವರ ಹಕ್ಕುಗಳನ್ನು ಸಹ ರಕ್ಷಿಸಲಾಗುತ್ತದೆ. **ಅಲ್ಲಾ ಬಿಹಖ್ಖಿಹೀ** ಪದಗಳಲ್ಲಿ ಅಬುಬಕರ್(ರ) ಅವರ ವಾದವು ಆಳವಾದ ಮತ್ತು ವಿಶಾಲವಾದ ದೃಷ್ಟಿಕೋನವನ್ನು ಸೂಚಿಸುತ್ತದೆ........ ಹಝ್ರತ್ ಅಬೂಬಕರ್(ರ)ರವರ ಪ್ರಕಾರ ಝಕಾತ್ ನೀಡದಿದ್ದಿರುವುದು ದ್ರೋಹವಾಗಿದೆ ಮತ್ತು ಝಕಾತ್ ನೀಡದಿರುವವನು ಮುಸಲ್ಮಾನನಲ್ಲ ಹೀಗಾಗಿ ಆತನೊಂದಿಗೆ ಯುದ್ಧವಾಡುವುದು ಅವಶ್ಯಕವಾಗಿದೆ. ನಿಸ್ಸಂದೇಹವಾಗಿ ಇಸ್ಲಾಮಿನಲ್ಲಿ ಯಾವುದೇ ರೀತಿಯ ಬಲವಂತ ಇಲ್ಲ, ಧರ್ಮದಲ್ಲಿ ಸ್ವಾತಂತ್ರ್ಯವನ್ನು ನೀಡಲಾಗಿದೆ ಆದರೆ ಸ್ಪಷ್ಟವಾಗಿ ಇಸ್ಲಾಮಿನ ದಾವೆದಾರ, ಇಸ್ಲಾಮಿಕ್ ಸಮಾಜವನ್ನು ಸೇರಿಕೊಂಡಿರುವ, ಅದರ ರಕ್ಷಣೆಯಲ್ಲಿರುವ ಮತ್ತು ಅದರ ಅನುಗ್ರಹದ ಮತ್ತು ಸಾಮೂಹಿಕ ಹಕ್ಕುಗಳಿಂದ ಪೂರ್ಣವಾಗಿ ಪ್ರಯೋಜನ ಪಡೆದಿರುವ ವ್ಯಕ್ತಿ. ಇಸ್ಲಾಮಿಕ್ ಸಮಾಜದ ವ್ಯಕ್ತಿಯಾಗಿ ಇಸ್ಲಾಂ ತನ್ನ ಮೇಲೆ ವಿಧಿಸಿದ ಕರ್ತವ್ಯಗಳು ಮತ್ತು ಕಟ್ಟುಪಾಡುಗಳನ್ನು ಪೂರೈಸುವುದಿಲ್ಲ ಎಂದಾದರೆ ಇಂತಹ ವ್ಯಕ್ತಿ ಯಾವುದೇ ರೀತಿಯ ಸಾಮೂಹಿಕ ಸಂರಕ್ಷಣೆ ಪಡೆಯಲು ಅರ್ಹನಲ್ಲ. ಜಗತ್ತಿನಲ್ಲಿ ಯಾವುದೇ ಸರ್ಕಾರವು ಕಾನೂನುಬಾಹಿರ ಮತ್ತು ದಂಗೆಕೋರರನ್ನು ಸಹಿಸುವುದಿಲ್ಲ. ಝಕಾತ್ ಮತ್ತು ಸದಕಾತ್ ಎಂಬ ಇಸ್ಲಾಮಿಕ್ ವ್ಯವಸ್ಥೆಯು ನಿಜವಾಗಿ ಸಮಾಜಕ್ಕೆ ಸೇರಿದ್ದು ಮತ್ತು ಯಾವುದೇ ವ್ಯಕ್ತಿಗೆ ಅಲ್ಲ. ಮತ್ತು ಅದರ ಪರಿಣಾಮಗಳು ಸಮಾಜದೊಂದಿಗೆ ಸಂಬಂಧಿಸಿವೆಯೇ ಹೊರತು ವ್ಯಕ್ತಿಗಳೊಂದಿಗೆ ಅಲ್ಲ."

(ಸಹೀಹ್ ಬುಖಾರಿ, ಕಿತಾಬುಝ್ಝಕಾತ್, ಸಂಪುಟ–3, ಪುಟಗಳು 14, 15)

ಒಂದು ವರದಿಯ ಪ್ರಕಾರ, ಈ ಸಂದರ್ಭದಲ್ಲಿ ಹಝ್ರತ್ ಉಮರ್(ರ) ಹೇಳಿದರು: ಓ ಪ್ರವಾದಿ(ಸ)ರ ಖಲೀಫ಼ರೇ! ಜನರನ್ನು ದಯೆ ಮತ್ತು ಸೌಮ್ಯತೆಯಿಂದ ನಡೆಸಿಕೊಳ್ಳಿ. ಇದಕ್ಕೆ ಹಝ್ರತ್ ಅಬೂಬಕ್ಕರ್(ರ) ಅವರು ಹಝ್ರತ್ ಉಮರ್(ರ) ರವರಿಗೆ ಹೇಳಿದರು: ಅಜ್ಞಾನದ ಕಾಲದಲ್ಲಿ ತುಂಬಾ ಧೈರ್ಯಶಾಲಿಯಾಗಿದ್ದ ನೀವು ಈಗ ಇಸ್ಲಾಂನಲ್ಲಿ ಇಂತಹ ಹೇಡಿತನವನ್ನು ತೋರಿಸುತ್ತಿದ್ದೀರಿ. (ಮಿಷ್ಕಾತ್ ಅಲ್‌ಮಸಾಬೀಹ್, ಸಂಪುಟ–2, ಕಿತಾಬುಲ್ ಫಝಾಎಲ್ ವ ಶುಮಾಎಲ್, ಹದೀಸ್–6024, ಪುಟ–492, ಮಕ್ತಬ್ ದಾರುಲ್ ಅರ್ಕಾಮ್)

ಅದೇನೇ ಇರಲಿ, ಝಕಾತ್ ವಿರೋಧಿಸುವವರೊಂದಿಗೆ ಯುದ್ಧವಾಡುವುದು ಮತ್ತು ಅವರ ಸಂಬಂಧಿಕರು ಮತ್ತು ಇತರರ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ಇನ್ಶಾಅಲ್ಲಾ ಮುಂದಿನ ಖುತ್ಬದಲ್ಲಿ ಪ್ರಸ್ತಾಪಿಸುವೆನು.

ಇಂದು ಪುನಃ ನಾನು ಲೋಕದ ಈಗಿನ ಸ್ಥಿತಿಗತಿಗಳ ಬಗ್ಗೆ ಹೇಳಬಯಸುತ್ತೇನೆ. ಎರಡೂ ಕಡೆಯ ಆಡಳಿತಗಳಿಗೆ ಅಲ್ಲಾಹನು ಬುದ್ಧಿ ಮತ್ತು ವಿವೇಕವನ್ನು ನೀಡಲಿ. ಮನುಷ್ಯಹತ್ಯೆಯಿಂದ ಈ ಜನರು ದೂರ ಸರಿಯುವಂತಾಗಲಿ ಎಂದು ದುಆ ಮಾಡಿರಿ. ಅದರ ಜೊತೆಗೆ ಈ ಯುದ್ಧದಿಂದ ಮುಸ್ಲಿಮರು ಕೂಡ ಪಾಠ ಕಲಿಯಬೇಕು. ಅವರೆಲ್ಲರೂ ಒಟ್ಟಾಗಿ ಇರುವುದನ್ನು ನೋಡಿರಿ. ಆದರೆ ಮುಸ್ಲಿಮರು ಒಂದೇ ಕಲಿಮ ಹೇಳುವವರಾಗಿ ಕೂಡ ಎಂದಿಗೂ ಒಂದಾಗುವುದಿಲ್ಲ. ಒಂದಾಗುವುದಕ್ಕೆ ಬದಲಾಗಿ ಒಂದು ದೇಶವನ್ನೇ ನಾಶಮಾಡುತ್ತಾರೆ. ಇರಾಕನ್ನು ನಾಶಮಾಡಿದರು, ಸಿರಿಯವನ್ನು ನಾಶಮಾಡಿದರು, ಯಮನನಲ್ಲಿ ನಾಶನಷ್ಟಗಳು ಆಗುತ್ತಿವೆ, ಅನ್ಯರಿಂದಲೂ ನಾಶಮಾಡಿಸುತ್ತಾರೆ ಮತ್ತು ಸ್ವತ ಕೂಡ ನಾಶ ಮಾಡುತ್ತಾರೆ. ಕನಿಷ್ಠ ಪಕ್ಷ ಒಗ್ಗಟಿನಂದ ಇರುವ ಪಾಠವನ್ನಾದರೂ ಮುಸ್ಲಿಮರು ಅವರಿಂದ ಕಲಿಯಲಿ.

ಅಲ್ಲಾಹನು ಮುಸ್ಲಿಂ ಸಮುದಾಯದ ಮೇಲೂ ಕರುಣೆದೋರಲಿ, ಮುಸ್ಲಿಮರ ಮೇಲೂ ಕರುಣೆದೋರಲಿ. ಈ ಜನರು ಕಾಲಘಟ್ಟದ ಇಮಾಮರನ್ನು ನಂಬುವವರಾದರೆ ಮಾತ್ರ ಅದು ಸಾಧ್ಯ. ಅದೇ ಉದ್ದೇಶಕ್ಕಾಗಿ ಅಲ್ಲಾಹನು ಅವರನ್ನು ಈ ಕಾಲಘಟ್ಟದಲ್ಲಿ ಕಳುಹಿಸಿದ್ದಾನೆ. ಅಲ್ಲಾಹನು ಅವರಿಗೆ ಬುದ್ಧಿ ಮತ್ತು ವಿವೇಕ ನೀಡಲಿ. ಮುಸ್ಲಿಮರು ತಮ್ಮ ಸ್ಥಿತಿಗಳನ್ನು ಸರಿಪಡಿಸುವವರಾಗಲು ದುಆ ಮಾಡುವುದರೊಂದಿಗೆ, ಲೋಕಕ್ಕಾಗಿಯೂ ದುಆ ಮಾಡಿರಿ. ಮುಸ್ಲಿಮರು ಸ್ವತಃ ಯುದ್ಧಗಳಲ್ಲಿ ಭಾಗಿಯಾಗುವವರಾಗುವ ಬದಲಾಗಿ ತಮ್ಮ ಮಾಧ್ಯಮ ಮತ್ತು ಮಾರ್ಗೋಪಾಯಗಳನ್ನು ಉಪಯೋಗಿಸಿ ಲೋಕವನ್ನು ಯುದ್ಧಗಳಿಂದ ತಡೆಯುವವರಾಗಲಿ.

ಜುಮಾ ನಮಾಝಿನ ನಂತರ ಲಾಹೋರಿನ ಝಫರ್ ಇಖ್ಬಾಲ್ ಹಾಶಿಮಿ ಸಾಹಿಬ್‌ರ ಪತ್ನಿಯಾದ ಸಯ್ಯದ ಖೈಸರ್ ಝಫರ್ ಹಾಶಿಮಿರ ಜನಾಝ ನಮಾಝ್ ಕೂಡ ನಿರ್ವಹಿಸುವೆನು. ಕೆಲವು ದಿನಗಳಿಗೆ ಮುಂಚಿತವಾಗಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಹಝ್ರತ್ ಮಸೀಹ್ ಮೌಊದ್(ಅ)ರ ಸಹಾಬಿಯಾದ ಹಝ್ರತ್ ಸಯ್ಯದ್ ಮುಹಮ್ಮದ್ ಅಲಿ ಬುಖಾರಿ ಸಾಹಿಬ್‌ರ ಮೊಮ್ಮಗಳಾಗಿದ್ದರು. ಸಯ್ಯದ್ ನದೀರ್ ಅಹ್ಮದ್ ಬುಖಾರಿ ಸಾಹಿಬ್‌ರ ಮನೆಯಲ್ಲಿ ಜನಿಸಿದ್ದರು. ವಿವಾಹದ ನಂತರ ಅವರು ವಿವಿಧ ಸ್ಥಳಗಳಲ್ಲಿ ಇದ್ದರು. 1961ರಲ್ಲಿ ಅವರ ವಿವಾಹ ನಡೆದಿತ್ತು. ಅದರ ನಂತರ 1981ರಲ್ಲಿ ಅಲ್ಲಾಮ ಇಖ್ಬಾಲ್ ಟೌನ್ ಲಾಹೋರಿಗೆ ಶಿಫ್ಟ್ ಆದರು. ಅಲ್ಲಿ ಲಜ್ನದ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಸದರ್ ಆಗಿಯೂ ಸೆಕ್ರೆಟರಿಯಾಗಿಯೂ ಸೇವೆ ಸಲ್ಲಿಸುತ್ತಿದ್ದರು. ಉಪವಾಸ, ನಮಾಝ್ ಪಾಲಿಸುವವರಾಗಿದ್ದರು, ದುಆ ಮಾಡುವ, ಸಹಾನುಭೂತಿ ಹೊಂದಿರುವ, ಅತಿಥಿ ಸತ್ಕಾರ ಮಾಡುವ, ಸಹನೆದೋರುವ, ವಂದಿಸುವ ಸಾತ್ವಿಕ ಮತ್ತು ನಿಷ್ಠಾವಂತ ಮಹಿಳೆಯಾಗಿದ್ದರು. ಖಿಲಾಫತಿನೊಂದಿಗೆ ಅಪರಿಮಿತವಾದ ಪ್ರೀತಿ ಮತ್ತು ಅನುಸರಣೆಯ ಸಂಬಂಧವನ್ನು ಹೊಂದಿದ್ದರು. ಸಾಂಪತ್ತಿಕ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗಿಯಾಗುತ್ತಿದ್ದರು. ಚಂದಾವನ್ನು ವರ್ಷದ ಆರಂಭದಲ್ಲೇ ಪಾವತಿ ಮಾಡುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದ್ದರು. ದಿವಂಗತರು ಪತಿಯನ್ನಲ್ಲದೇ ಐವರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಒಬ್ಬ ಮಗನಾದ ಮಹ್ಮೂದ್ ಇಖ್ಬಾಲ್ ಹಾಶಿಮಿ ಸಾಹಿಬ್ ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಆಗಿರುವರು. ಈಗ ಲಾಹೋರಿನ ಕ್ಯಾಂಪ್ ಜೈಲಿನಲ್ಲಿ ಇರುವರು. ಅವರಿಗೆ ತಾಯಿಯ ಮರಣದ ವೇಳೆ ಸೆರೆಮನೆಯಿಂದ ಹೊರಗೆ ಬರಲು ಅನುಮತಿ ಸಿಕ್ಕಿರಲಿಲ್ಲವಾದರೂ ತಾಯಿಯ ಮೃಯ್ಯತ್ತನ್ನು ಜೈಲಿಗೆ ತರಿಸಿ ಕೊನೆಯ ನೋಟ ಬೀರುವ ಅನುಮತಿಯನ್ನು ಹೇಗಿದ್ದರೂ ಆಡಳಿತ ಕೊಟ್ಟಿತು. ಅಹ್ಮದಿಯರು ಇಸ್ಲಾಮಿಕ ಕರ್ಮಗಳನ್ನು ಮಾಡುವುದರ ಕಾರಣದಿಂದ ಇಂತಹ ಹಿರಿದಾದ ಶಿಕ್ಷೆಗೆ ಅಹ್ಮದಿಯರನ್ನು ಗುರಿಪಡಿಸುತ್ತಾರೆ. ಜನಾಝ ನಿರ್ವಹಿಸಲು ಕೂಡ ಜೈಲಿನಲ್ಲಿ ಹೊರಗೆ ಬಿಡುವುದಿಲ್ಲ. ಅದೇ ವೇಳೆ ದೊಡ್ಡ ದೊಡ್ಡ ಕೊಲೆಗಡುಕರಿಗೆ ಅದರ ಅನುಮತಿಯನ್ನು ನೀಡುತ್ತಾರೆ. ಹೇಗಿದ್ದರೂ ಅಲ್ಲಾಹನು ಆ ದೇಶದ ಆಡಳಿತಗಳ ಮೇಲೂ ಕರುಣೆದೋರಲಿ. ಮಹ್ಮೂದ್ ಇಖ್ಬಾಲ್ ಸಾಹಿಬ್ ಮತ್ತು ಅವರ ಮೂವರು ಸ್ನೇಹಿತರ ವಿರುದ್ಧ 2019 ಜೂನ್‌ರಲ್ಲಿ ಮೊಕದ್ದಮೆ ಹೂಡಲಾಗಿತ್ತು. ಅವರಿಗೆ ಜಾಮೀನು ಕೂಡ ನೀಡಲಾಗಿತ್ತು. ಆದರೆ 2021 ಆಗಸ್ಟಿನಲ್ಲಿ ಜಾಮೀನನ್ನು ರದ್ದುಗೊಳಿಸಲಾಯಿತು. ನ್ಯಾಯಾಲಯ ಪುನಃ ಅವರನ್ನು ಬಂಧಿಸಿತು. ಅಲ್ಲಾಹನು ಅವರ ಬಿಡುಗಡೆಯ ಮಾರ್ಗವನ್ನು ತೆರೆಯಲಿ. ದಿವಂಗತರ ಒಬ್ಬ ಮೊಮ್ಮಗನಾದ ಹಾಶಿಂ ಇಖ್ಬಾಲ್ ಸಾಹಿಬ್ ಯು.ಕೆ.ಯಲ್ಲಿ ಮುಬಲ್ಲಿಗ್ ಆಗಿರುವರು. ಅಲ್ಲಾಹನು ಅವರಿಗೂ ಅವರ ಅಜ್ಜಿಯ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ. ಅವರ ಮಕ್ಕಳಿಗೂ ಅವರ ಸತ್ಕರ್ಮಗಳಲ್ಲಿ ನಡೆಯಲು ಸೌಭಾಗ್ಯ ನೀಡಲಿ. ದಿವಂಗತರೊಂದಿಗೆ ಅಲ್ಲಾಹನು ಮಗ್‌ಫಿರತ್ ಮಾಡಲಿ.

**********

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಈ ರೀತಿಯ ದುಷ್ಟ ಸ್ವಭಾವದವರು ಸದಾ ಇರುತ್ತಾರೆ. ಅವರು ಅಲ್ಲಾಹನ ಗ್ರಂಥದ ಮೇಲೆಯೇ ಆಕ್ಷೇಪಿಸುವುದರಿಂದ ಹೆದರಲಿಲ್ಲ, ತಿರುಳಿಲ್ಲದವರಾದರೂ ಟೀಕೆ ಮಾಡುವುದರಿಂದ ಹಿಂದುಳಿಯಲಿಲ್ಲ. ಉದಾಹರಣೆಗೆ ಪವಿತ್ರ ಖುರ್‌ಆನ್‌ನ ಸೂರದ ಕೆಲ ವಾಕ್ಯಗಳನ್ನು (ವಚನಗಳನ್ನು) ಉಮ್ರಾಉಲ್ ಯಕೀನ್‌ರ ಒಂದು ಖಸೀದದ ಅಧ್ಯಾಪನೆಯಾಗಿದೆ ಎಂದು ಆ ದುಷ್ಟರು ಆಕ್ಷೇಪವೆತ್ತುತ್ತಾರೆ. ಅಂದರೆ ಅವರಿಗೆ ತಿಳಿಯಬೇಕಾಗಿತ್ತು. ಪವಿತ್ರ ಖುರ್‌ಆನ್ ಆ ಕಥೆಗಳು ಪುರಾತನ ಪುಸ್ತಕದ ಅತ್ಯಂತ ವರ್ಣರಂಜಿತ ಬರಹವೆಂದು ವರ್ಣಿಸಲಾಗಿದೆ. ಮತ್ತು ಅವು ದೈವಿಕ ಜ್ಞಾನದ ಸಾಕ್ಷ್ಯಗಳನ್ನು ಪವಾಡ ರೀತಿಯಲ್ಲಿ ವಿವರಿಸಲಾಗಿದೆ. ಅವು ಯಾವ ಅರಬ್ ಕವಿಯ

ಕವನವಾಗಿದೆ ಅಥವಾ ಅಧ್ಯಾಪನೆ ಆಗಿದೆ ಎಂದು. ಹಾಗೆ ಅಂತಹ ವ್ಯಕ್ತಿಯೊಬ್ಬನು ಕುರುಡನಾಗಿದ್ದಾನೆಯೇ ಹೊರತು ದೃಷ್ಟಿ ಹೊಂದಿದವನಲ್ಲ, ಅಂತಹವರು ನದಿಯ ರೀತಿಯಲ್ಲಿ ಹರಿಯುತ್ತಿರುವ ಮಹಾನತೆಯನ್ನು ಕಾಣುತ್ತಿಲ್ಲ. ಒಂದೆರಡು ಪೂರ್ವಿಕ ರೀತಿಯಲ್ಲಿರುವ ವಚನಗಳ ಮೇಲೆ ಸಂಶಯ ಪ್ರವೃತ್ತಿಯಿಂದ ಸಂಶಯವನ್ನು ಉಂಟು ಮಾಡುತ್ತಾರೆ. ಅಂತಹ ಜನರು ಆ ವ್ಯಕ್ತಿಯ ಸಮಾನದಂತೆ ಅವನ ನಾಲಿಗೆಯಿಂದ ಹೊರಟಿತ್ತು. ಪತಬಾಕಕಲ್ಲಾಹು ಅಹಸನುಲ್ ಖಾಲಿಖೀನ್: ಕಾಕತಾಳಿಯವಾಗಿ ಅದೇ ವಚನ ಅವತರಿಸಿತು. ಆಗ ಅವನು ಧರ್ಮಭ್ರಷ್ಟನಾದನು. ಏಕೆಂದರೆ ಅವನು ತಿಳಿದುಕೊಂಡದ್ದೇನೆಂದರೆ ನನ್ನ ವಾಕ್ಯವೇ ಖುರ್‌ಆನ್‌ನಲ್ಲಿ ಸೇರಿಸಲಾಗಿದೆ ಎಂದು. ಇಗ ಪೀರ್ ಮಹರ್ ಆಲಿ ಶಾಹ್ ಸಾಹಿಬರ ಕಾರ್ಯಾಚರಣೆ ನೋಡಿದರೆ ಅವರು ಸ್ವಯಂ ನನ್ನ ಹನ್ನೆರಡು ಭಾಗದ ಗ್ರಂಥದ ಎದುರಿನಲ್ಲಿ ಒಂದು ಭಾಗವು ಸಹ ಬರೆಯಲಾಗಲಿಲ್ಲ. ಅವರು ಅಷ್ಟೊಂದು ಬೃಹತ್ ಗ್ರಂಥದಿಂದ ಒಂದೆರಡು ವಾಕ್ಯಗಳನ್ನು ಪ್ರಸ್ತುತಪಡಿಸಿದ್ದಾರೆ. ಇದು ಇಂತಹದೊಂದು ಪುಸ್ತಕದಲ್ಲಿ ಇದೆ ಎಂದು. ಈಗ ಯೋಚಿಸಿ ಅದು ಎಷ್ಟೊಂದು ಹೇಡಿತನದ ಮಾತಾಗಿದೆ. ಅದನ್ನು ಯಾವೊಬ್ಬ ಸಾಹಿತ್ಯಗಾರನು ಮೆಚ್ಚುವನೇ? ಸಾಹಿತ್ಯಗಾರರು ಬಲ್ಲರು, ಸಾವಿರಾರು ವಾಕ್ಯಗಳಿಂದ ಒಂದೆರಡು ವಾಕ್ಯಗಳು ಅಧ್ಯಾಪನೆ ರೂಪದಲ್ಲಿ ಬಂದು ಸೇರಿದರೆ ಅದರಿಂದ ಸಾರಗರ್ಭಿತ್ವದಲ್ಲಿ ವ್ಯತ್ಯಾಸವೇನು ಉಂಟಾಗುವುದಿಲ್ಲ. ಬದಲು ಈ ರೀತಿಯ ಬಳಕೆಯಿಂದ ಇನ್ನಷ್ಟು ಮೆರಗು ಹೆಚ್ಚಾಗುತ್ತದೆ. (ಅದೇ ಪುಟ 4420.)

**ಪೀರ್ಮಹರ್ ಅಲಿ ಶಾಹ್ ಕೇವಲ, ಸುಳ್ಳುಗಾರರಲ್ಲ, ಬದಲು ಅಪ್ಪಟ ಸುಳ್ಳುಗಾರರಾಗಿದ್ದಾರೆ, ಜೊತೆಯಲ್ಲಿ ಕುಷ್ಟ ರೋಗಿಯೂ ಹೌದು.**

ಒಬ್ಬ ನ್ಯಾಯವಂತ ಮನುಷ್ಯನು ತಿಳಿಯಬಹುದು. ಯಾವ ವ್ಯಕ್ತಿ ಅಷ್ಟೊಂದು ದೀರ್ಘ ಸಮಯ ಪಡೆದರೂ ತನ್ನ ಏಕಾಂತ ಅವಸ್ಥೆಯಲ್ಲಿ ಒಂದೆರಡು ಪುಟಗಳ 'ಇಜಾಝುಲ್ ಮಸೀಹ್" ರೀತಿಯ ಗ್ರಂಥದ ನಮೂನೆ ಪ್ರಸ್ತುತಪಡಿಸಲಾಗಲಿಲ್ಲ. ಅಂತಹವರು ಲಾಹೋರಿನಲ್ಲಿ ಅವಕಾಶ ದೊರೆತರೆ ಬರೆಯಬಹುದಾಗಿತ್ತು. ಒಬ್ಬನ ಆಶ್ರಯಪಡೆದು ಸಹ ಏಳಲಾಗದಂತಹ ವೃದ್ಧನು ಆಶ್ರಯವಿಲ್ಲದೆ ಎದ್ದು ಬರಲು ಹೇಗೆ ಸಾಧ್ಯ? ನಿಸ್ಸಂಶಯವಾಗಿಯೂ ತಿಳಿದುಕೊಳ್ಳಿರಿ. ಪೀರ್ ಮಹರ್ ಅಲಿ ಶಾಹ್ ಕೇವಲ ಸುಳ್ಳಿನ ಆಸರೆಯಿಂದ ತಮ್ಮ ಕುಷ್ಟರೋಗದ ಮೇಲೆ ಪರದೆ ಎಳೆಯುತ್ತಿದ್ದಾರೆ ಮತ್ತು ಅವರು ಕೇವಲ ಸುಳ್ಳುಗಾರರಲ್ಲ. ಬದಲು ಅಪ್ಪಟ ಸುಳ್ಳುಗಾರರಾಗಿದ್ದಾರೆ. ಅವರ ಈ ಕೊನೆಯ ಸುಳ್ಳು ಸಹ ನನಗೆ ಮರೆಯಲು ಸಾಧ್ಯವಿಲ್ಲ. ಅವರು ಮತ್ತೊಮ್ಮೆ ಈ ಪುಸ್ತಕದಲ್ಲಿ ಆ ತಕರಾರು ಎತ್ತಿದ್ದಾರೆ. ನಾನು ನನ್ನ ವಾಗ್ದಾನ ಪ್ರಕಾರ ಲಾಹೋರಿಗೆ ಬಂದೆ. ಆದರೆ ನೀವು ಖಾದಿಯಾನಿನಿಂದ ಹೊರಗೆ ಸಹ ಬರಲಿಲ್ಲ. ಆದರೆ ಯಾವ ಜನರು ಅವರ ಜಾಹೀರಾತನ್ನು ನೋಡಿದ್ದಾರೆ. ಅವರು ಬೇಕಾದರೆ ಸಾಕ್ಷ್ಯ ನೀಡಬಹುದು. ಅವರು ಜಾಣನರಿಯಂತೆ ಎದುರಾಗದೆ ಪರಾರಿಯ ಮಾರ್ಗ ತುಳಿದಿದ್ದಾರೆ. (ಅದೆ ಪುಟ 443).

**ಈ ದೇಶದ ಪೀಠಾಧಿಪತಿಗಳು ಇವರಾಗಿದ್ದಾರೆ. ಅವರು ಸದಾಕಾಲಕ್ಕಾಗಿ ತಮ್ಮ ಮುಖದ ಮೇಲೆ ಒಂದು ಕಪ್ಪು ಕಲೆಯನ್ನು ಹಚ್ಚಿಕೊಂಡಿದ್ದಾರೆ.**

ಇಜಾಝುಲ್ ಮಸೀಹ್ ಗ್ರಂಥಧ ಪ್ರಸಾರದಿಂದ ಪೀರ್ ಮಹರ್ ಅಲಿ ಸಾಹೇಬರಿಗೆ ಮತ್ತೊಂದು ಅವಕಾಶ ನೀಡಲಾಗಿತ್ತು. ಅವರಿಂದ ಸಾಧ್ಯವಾದರೆ ಈಗಲಾದರೂ ತನ್ನ ಶೈಕ್ಷಣಿಕ ಸಾಮರ್ಥ್ಯದಿಂದ ನನ್ನ ಈ ಪ್ರತಿಭೆಯನ್ನು ಕುಗ್ಗಿಸಿ ತೋರಿಸಿರಿ. ಅದರಿಂದ ನೂರಾರು ಜನರು ನನ್ನ ಸಂಘಟನೆಯಲ್ಲಿ ಬೈಅತ್ ಮಾಡಿ ಸೇರಿಕೊಳ್ಳುತ್ತಿದ್ದಾರೆ. ಆದರೆ ಅವರು ಸಂಕೇತದಿಂದ ಸಹ ಮಾತನಾಡದ ಮೂಕನಂತಿದ್ದಾರೆ. ಅವರು ಏನಾದರೂ ಮಾಡಿ ತೋರಿಸಿದ್ದಾರೆ ಅಂದರೆ ಅದು ಯಾರು ಎರಡು ನೂರು ಗ್ರಂಥದ ಪುಟಗಳಿಂದ ಒಂದೆರಡು ವಾಕ್ಯಗಳನ್ನು ಹಿಡಿದು ಅದು ಕೃತಿಚೌರ್ಯವಾಗಿದೆ ಅಂದದ್ದು ಮತ್ತು ಕೇವಲ ಒಂದೆರಡು ಮುದ್ರಿತ ತಪ್ಪುಗಳನ್ನು ಹಿಡಿದು ವ್ಯಾಕರಣದ ತಪ್ಪು ಎಂದಿದ್ದಾರೆ. ತಮ್ಮ ಅಜ್ಞಾನತೆಯಿಂದ ಕೆಲ ಸಾರಗರ್ಭಿತ ಮತ್ತು ವ್ಯಾಕರಣಭರಿತ ವಾಕ್ಯಗಳನ್ನು ಬೇಕಂತಲೂ ಅತಥ್ಯವಾಗಿದೆ ಮತ್ತು ತಪ್ಪಾಗಿದೆ ಎಂದು ಸಾರಿರುವವರು ಇವರಾಗಿದ್ದಾರೆ. ಈ ದೇಶದ ಪೀಠಾಧಿಪತಿಗಳು ಅವರು ಅನಗತ್ಯವಾಗಿ ಮೌಲ್ವಿ ಎಂದುಕೊಂಡು ಸದಾಕಲಕ್ಕಾಗಿ ತಮ್ಮ ಮುಖದ ಮೇಲೆ ಒಂದು ಕಪ್ಪು ಕಲೆಯನ್ನು ಹಚ್ಚಿಕೊಂಡಿದ್ದಾರೆ. (ಅದೇ ಪುಟ 444).

**ಇವರು ಮೆಹರ್ ಅಲಿ ಅಲ್ಲ ಬದಲಿಗೆ ಮುಹರ್ ಅಲಿ ಆಗಿದ್ದಾರೆ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಂದಹಾಗೆ ಅವರ ಹೆಸರು ಮಹರ್ ಅಲಿ ಅಲ್ಲ, ಬದಲು ಮುಹರ್ ಅಲಿಯಾಗಿದೆ. ಏಕೆಂದರೆ ಅವರು ತಮ್ಮ ವಿವಶತೆ ಮೂಲಕ ಮತ್ತು ಮೌನವಹಿಸುವ ಮೂಲಕ "ಇಜಾಝುಲ್ ಮಸೀಹ್" ಗ್ರಂಥಧ ಮಹಾನತೆಯ ಮೇಲೆ ತಮ್ಮ ಮುಹರ್ (ಮುದ್ರೆ) ಹಾಕಿದಂತಾಗಿದೆ. (ನುಝುಲುಲ್ ಮಸೀಹ್, ರೂಹಾನಿ ಖಝಾಈನ್, ಸಂಪುಟ–18, ಪುಟ–432 ಟಿಪ್ಪಣಿ).

ಈಗ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಕೆಲ ಆ ವಿಶ್ವಾಸವರ್ಧಕ ಅಧ್ಯಾಪನೆಗಳನ್ನು ಪ್ರಸ್ತುತಪಡಿಸುತ್ತೇವೆ. ಅದರಲ್ಲಿ ಅವರು ಅಲ್ಲಾಹನು ಅವರಿಗೆ ದಯಪಾಲಿಸಿದ ವಿಶೇಷವಾದ ಖುರ್‌ಆನ್‌ನ ಜ್ಞಾನವನ್ನು ವಿವರಿಸಿದ್ದಾರೆ. ಹಾಗೂ ಯಾರಿಗೂ ಪ್ರತಿರೂಪ ತರಲು ಸಾಧ್ಯವಾಗಲಿಲ್ಲ. ಅದೇ ರೀತಿ ಅರಬಿಯ ಜ್ಞಾನವನ್ನು ಸಹ ಅಲ್ಲಾಹನು ಅವರಿಗೆ ದಯಪಾಲಿಸಿದ್ದ. ಅದು ಅವರಿಗೆ ಒಂದು ಪವಾಡ ಮತ್ತು ದೃಷ್ಟಾಂತ ರೂಪದಲ್ಲಿ ನೀಡಲಾಗಿತ್ತು. ಅದೇ ಆಧಾರದಲ್ಲಿ ಅವರು ಮೌಲ್ವಿಗಳಿಗೆ ಮತ್ತು ದರ್ಗಾ ಪೀಠಾಧಿಪತಿಗಳಿಗೆ ಪ್ರತಿವಾದಿಯಾಗಿ ಬರಲು ಆಹ್ವಾನಿಸುತ್ತಿದ್ದರು. ಏಕೆಂದರೆ ಈ ಜ್ಞಾನ ಅವರಿಗೆ ಅಲ್ಲಾಹನು ಒಂದು ಪವಾಡ ಸ್ವರೂಪವಾಗಿ ನೀಡಿದ್ದನು.

**ಈಗ ಯಾರಿಗೂ ಸಹ ಖುರ್‌ಆನ್‌ನ ಸಾಕ್ಷ್ಯಗಳನ್ನು ಎದುರಿಸುವ ಶಕ್ತಿಯಿಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಇನ್ನೊಂದು ಭವಿಷ್ಯವಾಣಿಯೂ ಸಹ ದೈವಿಕ ದೃಷ್ಟಾಂತವಾಗಿದೆ. ಅದು ಬರಾಹೀನೆ ಅಹ್ಮದಿಯಾದ ಪುಟ 238 ರಲ್ಲಿ ನಮೂದಿತವಾಗಿದೆ. ಅದು "ಅರ್ರಹ್‌ಮಾನ್ ಅಲ್ಲಮಲ್ ಖುರ್‌ಆನ್" ಎಂಬುದಾಗಿದೆ. ಈ ವಚನದಲ್ಲಿ ಅಲ್ಲಾಹನು ಖುರ್‌ಆನ್‌ನ್ನು ಕಲಿಸುವ ವಾಗ್ದಾನ ನೀಡಿದ್ದನು. ಹಾಗೆ ಈ ವಾಗ್ಧನವನ್ನು ಯಾವ ರೀತಿಯಲ್ಲಿ ಪೂರ್ತಿಕರಿಸಿದ್ದಾನೆಂದರೆ ಈಗ ಯಾರಿಗೂ ಖುರ್‌ಆನ್‌ನ ಸಾಕ್ಷ್ಯಗಳನ್ನು ಅಲ್ಲಗಳೆಯುವ ಶಕ್ತಿ ಇಲ್ಲ. ನಾನು ಸತ್ಯವಾಗಿ ಹೇಳುತ್ತೇನೆ. ಈ ದೇಶದ ಎಲ್ಲ ಮೌಲ್ವಿಗಳಲ್ಲಿ ಯಾರಾದರು ಒಬ್ಬ ಮೌಲ್ವಿ ಖುರ್‌ಆನ್‌ನ ಸಾಕ್ಷ್ಯಗಳ ವಿಷಯದಲ್ಲಿ ನನ್ನನ್ನು ಎದುರಿಸಲು ಮುಂದೆ ಬಂದರೆ, ನಾನು ಬರೆದ ಯಾವುದೆ ಸೂರದ ಒಂದು ವ್ಯಾಖ್ಯಾನ ಮತ್ತು ನನ್ನ ಯಾರಾದರು ವಿರೋಧಿ ಬರೆದದ್ದುನ್ನು ತುಲನೆ ಮಾಡಿದರೆ ಅವನು ಅತ್ಯಂತ ಅಪಮಾನಿತನಾಗುವನು ಮತ್ತು ನನ್ನನ್ನು ಎದುರಿಸಲಾರನು. ಅದೇ ಕಾರಣದಿಂದಾಗಿಯೇ ಮೌಲ್ವಿಗಳಿಗೆ ಪದೇ ಪದೇ ಪ್ರತಿವಾದಿಗಳಾಗಲು ಆಹ್ವಾನಿಸಿದರು. ಇತ್ತ ಮುಖ ಮಾಡಲಿಲ್ಲ. ಹಾಗೆ ಇದೊಂದು ಮಹೋನ್ನತವಾದ ದೃಷ್ಟಾಂತವಾಗಿದೆ. ಆದರೆ ನ್ಯಾಯವಂತರಿಗೆ ಮತ್ತು ವಿಶ್ವಾಸ ಉಳ್ಳವರಿಗೆ ಮಾತ್ರ.

(ಝುಮೀಮ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–291)

ಈ ದೇವವಾಣಿ ಮೂಲಕ ಅಲ್ಲಾಹನು ನನಗೆ ಖುರ್‌ಆನ್‌ನ ಜ್ಞಾನವನ್ನು ನೀಡಿರುವನು ಮತ್ತು ನನ್ನ ಹೆಸರು ಅವ್ವಲುಲ್ ಮೂಮಿನೀನ್ (ಸತ್ಯವಿಶ್ವಾಸಿಗಳಲ್ಲಿ ಪ್ರಥಮನು) ಎಂದು ಕರೆದಿರುವನು. ಮತ್ತು ನನಗೆ ಸಮುದ್ರ ರೀತಿಯ ಜ್ಞಾನ ಹಾಗೂ ಸಾಕ್ಷ್ಯಗಳಿಂದ ತುಂಬಿಕೊಟ್ಟಿರುವನು. ಮತ್ತು ನನಗೆ ಪದೇ ಪದೇ ದಿವ್ಯವಾಣಿಯಾಗಿದೆ. ಈ ಕಾಲಘಟ್ಟದಲ್ಲಿ ದೈವಿಕ ಜ್ಞಾನ ಹೊಂದಿದವರಾಗಲಿ, ದೈವಿಕ ಪ್ರೇಮ ಹೊಂದಿದವರಾಗಲಿ ನಿನ್ನ ಜ್ಞಾನ ಮತ್ತು ಪ್ರೇಮಕ್ಕೆ ಸರಿಸಾಟಿಯಾಗಿರುವುದಿಲ್ಲ.

(ಝುರೂರತುಲ್ ಇಮಾಮ್, ರೂಹಾನಿ ಖಝಾಈನ್, ಸಂಪುಟ–13, ಪುಟ–502)

**ನನಗೆ ಖುರ್‌ಆನ್‌ನ ಸಾಕ್ಷ್ಯಗಳ ಜ್ಞಾನ ಅರಿವಿಕೆಯಲ್ಲಿಯೂ ಎಲ್ಲರ ಮೇಲೆ ಒಂದು ವಿಜಯವನ್ನು ದಯಪಾಲಿಸಿರುವನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನನಗೆ ಆ ದೇವ ಮೇಲೆ ಆಣೆ ಅವನ ಕೈಯಲ್ಲಿ ಜೀವವಿದೆ, ಖುರ್‌ಆನ್‌ನ ಜ್ಞಾನ ಮತ್ತು ಸಾಕ್ಷ್ಯಗಳನ್ನು ಅರಿಯುವ ಪ್ರತಿಯೊಬ್ಬನ ಆತ್ಮದ ಮೇಲೆ ನನಗೆ ವಿಜಯ ನೀಡಲಾಗಿದೆ. ಹಲವು ಸಲ ವಿರೋದಿ ಮೌಲ್ವಿಗಳಿಗೆ ಖುರ್‌ಆನ್‌ನ ತಫ್ಸೀರ್ (ವ್ಯಾಖ್ಯಾನ) ಬರೆಯಲು ಆಹ್ವಾನಿಸಿರುತ್ತೇನೆ. ಆದರೆ ಅವರು ಬರಲಿಲ್ಲ. ಬಂದರೂ ಅಲ್ಲಾಹನು ಅವರಿಗೆ ಅಪಮಾನಿತರಾಗಿ ನಾಚಿಕೆ ಪಡುವಂತೆ ಮಾಡುತ್ತಿದ್ದನು. ಹಾಗೆ ಆ ರೀತಿಯ ಖುರ್‌ಆನ್‌ನ ಅರಿವು ನನಗೆ ನೀಡಲಾಗಿದೆ. ಇದು ಅಲ್ಲಾಹನ ಒಂದು ದೃಷ್ಟಾಂತವಾಗಿದೆ. (ಸಿರಾಜೆ ಮುನೀರ್, ರೂಹಾನಿ ಃಝಾಈನ್, ಸಂಪುಟ–12, ಪುಟ–41)

ನನಗೆ ವಿಜಯಿಯಾಗಿಯೇ ಪಡೆಯುವರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಧರ್ಮದ ಮತ್ತು ಖುರ್‌ಆನ್‌ನ ಜ್ಞಾನ ಸಾಕ್ಷ್ಯಗಳನ್ನು ಮತ್ತು ರಹಸ್ಯಗಳನ್ನು ಯಾವ ಅರ್ಥಗರ್ಭಿತ ಮತ್ತು ತತ್ವಭರಿತವಾಗಿ ನಾನು ಬರೆಯಬಲ್ಲೆನೋ ಅದನ್ನು ಇನ್ನೊಬ್ಬರು ಬರೆಯಲು ಸಾಧ್ಯವಿಲ್ಲ. ಒಂದು ಲೋಕವೇ ಒಟ್ಟುಗೂಡಿ ನನ್ನನ್ನು ಪರೀಕ್ಷಿಸಲು ಮುಂದಾದರೆ ನನ್ನನ್ನು ವಿಜಯಿಯಾಗಿ ಕಾಣುವರು. ಎಲ್ಲ ಜನರು ನನ್ನ ಎದುರಾಗಿ ನಿಂತರೂ ಅಲ್ಲಾಹನು ತನ್ನ ಅನುಗ್ರಹದಿಂದ ನನ್ನ ಬಲವೇ ಹೆಚ್ಚಾಗಿಸುವುದನ್ನು ನೋಡುವಿರಿ. ನಾನು ಕೂಲಂಕುಶವಾಗಿ ಹೇಳುವೆನು. ಮತ್ತು ದೃಡ ಶಬ್ಧಗಳಲ್ಲಿ ಹೇಳುವೆನು ಈ ಸಮಯ ಓ ಮುಸಲ್ಮಾನರೆ! ನಿಮ್ಮಲ್ಲಿ ಮುಹದ್ದಿಸ್ ಮುಫಸ್ಸಿರ್ ಜನರು ಸಹ ಇದ್ದಾರೆ ಮತ್ತು ಖುರ್‌ಆನ್‌ನ ಜ್ಞಾನಗಳನ್ನು ತಿಳಿದವರು ಎನ್ನುವವರೂ ಇದ್ದಾರೆ, ಸಾಹಿತ್ಯದ ತತ್ವಭರಿತದ ದಾವೆ ಮಾಡುವವರು ಇದ್ದಾರೆ, ಸಜ್ಜನರು ಎನಿಸಿಕೊಳ್ಳುವವರೂ ಇದ್ದಾರೆ ಮತ್ತು ಚಿಶ್ತಿ ಖಾದರಿ, ನಕ್ಷ್‌ಬಂಧಿ, ಸಹರ್‌ವರ್ದಿ ಎಂದು ತಮ್ಮನ್ನ ಕರೆಯಿಸಿಕೊಳ್ಳುವವರೂ ಇದ್ದಾರೆ. ಆದ್ದರಿಂದ ಏಳಿರಿ. ಮತ್ತು ಈ ಸಮಯ ನನ್ನನ್ನು ಎದುರಿಸಿ ತೋರಿಸಿರಿ. (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–407)

**ದೈವಿಕ ಅರಿವು ವಾಗ್ದತ್ತ ಮಸೀಹರೊಂದಿಗಿದೆ.**

ನಾನು ನಿಮಗೆ ದೃಢಪಡಿಸುವೆನು. ದೈವಿಕ ಅರಿವು ನನ್ನ ಜೊತೆಗಿದೆ. ಆ ಪರಮ ಜ್ಞಾನಿಯೂ ಬಯಸಿದಾಗಲೆಲ್ಲ ಖುರ್‌ಆನ್‌ನ ಸಾಕ್ಷ್ಯಗಳನ್ನು ನನಗೆ ಅನುಗ್ರಹಿಸುತ್ತಾನೆ. ವಾಸ್ತವವಾದ ತನ್ನ ಇಂಗಿತವು ಕೆಲ ವಚನಗಳ ಮೂಲಕ ಅದರ ಸಾಕ್ಷ್ಯಗಳೊಂದಿಗೆ ನನ್ನ ಮೇಲೆ ಪ್ರಕಟಗೊಳಿಸುತ್ತಾನೆ. ಒಂದು ಕಬ್ಬಿಣದ ಸಲಾಖೆಯಂತೆ ಏಕತ್ವ ಹೃದಯದೊಳಗೆ ದಾಖಲಿಸುತ್ತಾನೆ. ಈಗ ನಾನು ಆ ದೇವನ ಅನುಗ್ರಹವನ್ನು ಹೇಗೆ ತಳ್ಳಿಹಾಕಲಿ ಮತ್ತು ಮಳೆ ಸುರಿಸುವ ರೀತಿಯಲ್ಲಿ ಸುರಿಯುತ್ತಿರುವ ಅವನ ಅನುಗ್ರಹವನ್ನು ಹೇಗೆ ನಿರಾಕರಿಸಲಿ. (ಮುಬಾಹಿಸ್ ಲೂಧಿಯಾನ, ರೂ. ಖ ಸಂ 4, ಪುಟ 21).

**ಯಾವುದಾದರೂ ಮೌಲ್ವಿ ನನ್ನ ಎದುರಿನಲ್ಲಿ ಅರಬಿಯ ಅರ್ಥ ಹಾಗೂ ತತ್ವದಲ್ಲಿ ಎದುರಿಸಲು ಬಂದರೆ ಪರಾಜಿತನಾಗುವನು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ನಾನು ಮತ್ತೊಮ್ಮೆ ಸತ್ಯವಾದಿಗಳ ಅವಗಾಹನೆಗಾಗಿ ಹೇಳಬಯಸುವುದೇನೆಂದರೆ, ಅವರು ಇನ್ನು ಸಹ ತಿಳಿದುಕೊಳ್ಳದಿದ್ದರೆ ಹೊಸದಾಗಿ ಮತ್ತೊಮ್ಮೆ ದೃಢಪಡಿಸಿಕೊಳ್ಳಲಿ. ನೆನಪಿಡಿರಿ ಅಲ್ಲಾಹನ ಆರು ದೃಷ್ಟಾಂತಗಳು ನನ್ನೊಂದಿಗಿದೆ. ಮೊದನೆಯದಾಗಿ ಹೇಳುವುದೇನೆಂದರೆ ಯಾರಾದರೂ ಮೌಲ್ವಿ ಅರಬಿಯ ಸಾರವನ್ನು ತತ್ವಾಧಾರಿತವಾಗಿ ನನ್ನ ಗ್ರಂಥದಿಂದ ಎದುರಿಸಿದರೆ ಅಲ್ಲಾಹನು ನಿಮ್ಮನ್ನು ಅಪಮಾನಗೊಳಿಸುವನು. ನಾನು ಪ್ರತಿಯೊಬ್ಬ ಅಹಂಕಾರರಿಗೆ ಈ ಹಕ್ಕು ನೀಡುತ್ತೇನೆ. ನನ್ನ ಅದೇ ಅರಬಿ ಪತ್ರದ ಎದುರಾಗಿ ಬರೆದು ಪರೀಕ್ಷಿಸಿ ನೋಡಿಕೊಳ್ಳಲಿ. ಅವರು ಈ ಪತ್ರವನ್ನೇ ಎದುರಾಗಿ ಸ್ವೀಕರಿಸಿ ಒಂದು ಪತ್ರಿಕೆ ವ್ಯವಸ್ಥೆಗೊಳಿಸಿದರೆ, ಕವನ ಅಥವಾ ಬರಹ ಸಿದ್ಧಗೊಳಿಸಿದರೆ, ಮತ್ತು ಅದನ್ನು ಓರ್ವ ಅರಬಿ ಮಾತೃಭಾಷೆಯವರು ಪ್ರಮಾಣ ಮಾಡಿ ಅದನ್ನು ದೃಢೀಕರಿಸಿದರೆ ನಾನು ಸುಳ್ಳುಗಾರ.

ಎರಡನೆಯದಾಗಿ ಈ ದೃಷ್ಟಾಂತ ಸ್ವೀಕಾರ ಮಾಡುವುದಿಲ್ಲ ಎಂದರೆ ನನ್ನ ವಿರೋಧಿಗಳು ಯಾವುದೇ ಖುರ್‌ಆನ್‌ನ ಒಂದು ಸೂರದ ಪ್ರತಿಯಾಗಿ ವ್ಯಾಖ್ಯಾನ ಬರೆದು ತೋರಿಸಲಿ. ಅಂದರೆ ಸಮಕ್ಷಮ ಒಂದು ಸ್ಥಳದಲ್ಲಿ ಕುಳಿತುಕೊಂಡು ಅಂದಾಜಿನಂತೆ ಪವಿತ್ರ ಖುರ್‌ಆನ್ ತೆರೆದು ಅದರಿಂದ ಮೊದಲು ಏಳು ವಚನಗಳನ್ನು ಆಯ್ದುಕೊಂಡು ಅದರ ವ್ಯಾಖ್ಯಾನ ನಾನು ಬರೆಯುತ್ತೇನೆ. ನನ್ನ ವಿರೋಧಿಗಳು ಸಹ ಬರೆಯಲಿ, ಸತ್ಯಸಾಕ್ಷ್ಯಗಳ ವಿವರಣೆಯಲ್ಲಿ ನಾನು ವಿಜಯಿಯಾಗಲಿಲ್ಲ ಎಂದರೆ ನಾನು ಸುಳ್ಳುಗಾರ ಎಂದು ತಿಳಿಯಲಿ. (ಝುಮೀಮ ರಿಸಾಲ ಅಂಜಾಮೆ ಆಥಮ್, ರೂಹಾನಿ ಖಝಾಈನ್, ಸಂಪುಟ–11, ಪುಟ–304)

ನಾನು ಈ ಜ್ಞಾನ ಪಡೆದು ಎಲ್ಲಾ ವಿರೋಧಿಗಳಿಗೆ ಅದು ಅಬ್ದುಲ್ ಹಕ್ಕು ಅವರ ಪಂಥವಾಗಲಿ, ಬಟಾಲ್ವಿ ಅವರ ಪಂಥವಾಗಲಿ, ಒಟ್ಟಿನಲ್ಲಿ ಎಲ್ಲರಿಗೂ ಉಚ್ಚ ಸ್ವರದಲ್ಲಿ ಆಹ್ವಾನಿಸಿ ಹೇಳಿದ್ದೇನೆ. ನನಗೆ ಖುರ್‌ಆನ್‌ನ ಸತ್ಯಸಾಕ್ಷ್ಯಗಳು ಮತ್ತು ಜ್ಞಾನವನ್ನು ನೀಡಲಾಗಿದೆ. ನಿಮ್ಮಲ್ಲಿ ಯಾರಿಂದಲೂ ನನ್ನ ಎದುರಾಗಿ ಖುರಆನ್‌ನ ಸತ್ಯಸಾಕ್ಷ್ಯಗಳು ವಿವರಿಸಲು ಸಾಧ್ಯವಿಲ್ಲ. ಹಾಗೆ ಈ ಘೋಷಣೆ ಆದ ನಂತರ ಯಾರೂ ಸಹ ನನ್ನ ಎದುರಿಗೆ ಬರಲಿಲ್ಲ. ಹೀಗೆ ಅಜ್ಞಾನತೆ ಅದು ಎಲ್ಲ ನೀಚತನದ ಬೇರಾಗಿದೆ. ಅದರ ಮೇಲೆ ಅವರು ಮುದ್ರೆ ಹಾಕಿದರು. (ಅದೇ ಪುಟ 311 ಟಿಪ್ಪಣಿ.)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಪ್ರತಿಯೊಂದು ತಪ್ಪಿಗೆ ಒಂದು ರೂಪಾಯಿ ಬಹುಮಾನ ಪಡೆಯಲು ವಿಧಿಸಿದ ಶರತ್ತೇನೆಂದರೆ– * ಮೆಹೆರ್ ಅಲಿ ನನ್ನ ಪ್ರತಿಯಾಗಿ ವ್ಯಾಖ್ಯಾನ ಬರೆಯಬೇಕು * ವ್ಯಾಖ್ಯಾನ ಅರಬಿಯಲ್ಲಿ ಬರೆಯಬೇಕು. ಕೊಟ್ಟ ಅವಧಿಯೊಳಗೆ ಬರೆಯಬೇಕು. ಒಂದು ದೀರ್ಘ ಅವಧಿಯ ನಂತರ ಮಹರ್ ಅಲಿ ಅವರು "ಸೈಫ್ ಚಿಶ್ತಿಯಾಯಿ" ಹೆಸರಿನ ಒಂದು ಪುಸ್ತಕ ಉರ್ದುವಿನಲ್ಲಿ ಬರೆದು ಹಝ್ರತ್ ಮಸೀಹ್ ಮೌಊದ್(ಅ) ಅವರಿಗೆ ಕಳುಹಿಸಿದ್ದರು. ಅದು ಸೂರ: ಫಾತಿಹದ ವ್ಯಾಖ್ಯಾನ ಆಗಿರಲಿಲ್ಲ. ಬದಲು ಕೇವಲ ನಿಷ್ಪ್ರಯೋಜಕ ಟೀಕೆ ಟಿಪ್ಪಣಿ ಆಧಾರಿತ ಒಂದು ಅರ್ಥಹೀನ ಪುಸ್ತಕವಾಗಿತ್ತು. ಅದರ ವಿವರ ನಾವು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ನೀಡುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಘೋಷಣೆ ಮಾತ್ರ ಮುಂದಿಡುವುದಿಲ್ಲ. ಏಕೆಂದರೆ ಬರೀ ಘೋಷಣೆಯೂ ಪರಿಣಾಮ ಬೀರುವುದಿಲ್ಲ. ಬದಲು ಅಂತಹ ಸಂದರ್ಭಗಳಲ್ಲಿ ಎರಡರಲ್ಲಿ ಒಂದು ಮಾರ್ಗ ಆಯ್ದುಕೊಳ್ಳುತ್ತದೆ ಅಥವಾ ಘೋಷಣೆಯ ಜೊತೆಯಲ್ಲಿಯೇ ಅದಕ್ಕೆ ಸಾಕ್ಷ್ಯಗಳನ್ನು ವಿವರಿಸಿ ಅದರ ಪರಿಹಾರ ಪ್ರಸ್ತುತಪಡಿಸುತ್ತದೆ. ಆ ಎರಡು ವಿಧಾನಗಳಿಂದ ಮಾನವನ ಮಿದುಳು ಸಮಾಧಾನಗೊಳ್ಳುತ್ತದೆ, ಎರಡೂ ವಿಧಾನಗಳು ತಮ್ಮ ತಮ್ಮ ರೀತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿವೆ. ಕೆಲ ಸಂದರ್ಭಗಳಲ್ಲಿ ಘೋಷಣೆ ಮಾಡಿ ಪುರಾವೆಗಳನ್ನು ಒದಗಿಸುವುದು ಹಿತಕರವಾಗಿರುತ್ತದೆ ಮತ್ತು ಕೆಲ ಸಂದರ್ಭಗಳಲ್ಲಿ ಘಟನೆಗಳನ್ನು ವಿವರಿಸಿ ನಂತರ ಅದರ ಸಹಜ ಪರಿಣಾಮ ವ್ಯಕ್ತಪಡಿಸುವುದು ಹಿತಕರವಾಗಿರುತ್ತದೆ. ಇಲ್ಲಿ ಎರಡನೆಯ ವಿಧಾನ ಅಳವಡಿಸಿಕೊಳ್ಳಲಾಗಿದೆ. ಮೊದಲಿನ ವಚನಗಳ ಬೌದ್ಧಿಕ ಪರಿಣಾಮ ಪ್ರಸ್ತುತಪಡಿಸಿದೆ.

ಮೊದಲ ವಚನಗಳಲ್ಲಿ ಎರಡು ಘಟನೆಗಳನ್ನು ವಿವರಿಸಲಾಗಿದೆ. ಒಂದು ಇವೆಲ್ಲ ಪ್ರಪಂಚ ಒಂದೇ ಸಂಬಂಧವಾಗಿ ಘೋಷಿಸಲ್ಪಟ್ಟಿದೆ. ಮತ್ತು ಒಂದು ವಸ್ತು ಇನ್ನೊಂದು ವಸ್ತುವಿನ ಮೇಲೆ ನಿರ್ಭರಗೊಂಡಿದೆ. ಮನುಷ್ಯನ ಜನ್ಮ ಅಸಲಾಗಿದೆ. ಅವರ ಪ್ರಥಮ ಆಹಾರ ಪ್ರಾಣಿಗಳಾಗಿವೆ. ಪ್ರಾಣಿಗಳು ಗಿಡ ಮರಗಳಿಂದ ಆಹಾರ ಪಡೆಯುತ್ತವೆ. ಮುಂದೆ ಆ ಗಿಡ ಮರಗಳು ಆಕಾಶದ ನೀರಿನಿಂದ ಅಂದರೆ ಮಳೆಯಿಂದ ಬೆಳವಣಿಗೆ ಪಡೆಯುತ್ತವೆ ಮತ್ತು ಆ ನೀರು ಮನುಷ್ಯನಿಗೆ ಕುಡಿಯುವ ಕೆಲಸಕ್ಕೆ ಬರುತ್ತದೆ ಮತ್ತೆ ಅದೇ ನೀರಿನಿಂದ ಸಸ್ಯಗಳು ಉತ್ಪನ್ನವಾಗುತ್ತವೆ. ಅದು ಮನುಷ್ಯನ ಆಹಾರಕ್ಕೆ ಉಪಯೊಗವಾಗುತ್ತವೆ. ಇವೆಲ್ಲ ವಸ್ತುಗಳು, ಹಗಲಿರುಳು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಪ್ರಭಾವಗಳಿಂದ ಬೆಳವಣಿಗೆ ಹೊಂದುತ್ತವೆ. ಇನ್ನೊಂದೆಡೆ ಅದರ ಇರುವಿಕೆಯ ಕಾರಣ ಸಮುದ್ರವಾಗಿದೆ. ಅದರಲ್ಲಿ ನೀರಿನ ಸಂಗ್ರಹವಿರುತ್ತದೆ. ಅದೇ ನೀರು ತಿಳಿಗೊಂಡು ಮತ್ತೆ ಮನುಷ್ಯರಿಗೆ ದೊರೆಯುತ್ತದೆ. ಸಮುದ್ರವನ್ನು ಅದೇ ದೆಸೆಯಲ್ಲಿ ಇರಿಸಲು ಪರ್ವತಗಳಿರುತ್ತವೆ. ಅದು ನೀರು ತಡೆಹಿಡಿದಿರುತ್ತದೆ. ಅಲ್ಲಿಂದ ನದಿಗಳ ಮೂಲಕ ನೀರು ಹರಿದುಬರುತ್ತದೆ, ಅದು ವಿಶೇಷವಾದ ರಸ್ತೆಗಳಿಂದ ಹರಿದು ಬಂದು ಸಮುದ್ರಕ್ಕೆ ಸೇರುತ್ತದೆ. ಭೂಮಿಯಲ್ಲೆಲ್ಲ ಹರಡುವುದಿಲ್ಲ, ಇಲ್ಲದಿದ್ದರೆ ಭೂಮಿಯು ಮನುಷ್ಯರಿಗೆ ವಾಸಿಸಲು ಯೋಗ್ಯವಾಗುತ್ತಿರಲಿಲ್ಲ. ಇವೆಲ್ಲ ಕಾರಣಗಳಿಂದ ಒಂದು ಸ್ಪಷ್ಟವಾದ ಪರಿಣಾಮ ದೊರೆಯುವುದೇನೆಂದರೆ ಲೋಕದ ಪ್ರತಿಯೊಂದು ವಸ್ತು ಇನ್ನೊಂದು ವಸ್ತುವಿನ ಮೇಲೆ ನಿರ್ಭರಗೊಂಡಿದೆ. ಲೋಕವು ವೈವಿಧ್ಯ ವಸ್ತುಗಳ ಸಂಕಲನವಲ್ಲ, ಬದಲು ಅದರ ವೈವಿಧ್ಯಗಳು ಸಹ ಒಂದು ಸರಪಳಿಯಲ್ಲಿ ಸಿಲುಕಿಕೊಂಡ ಮಣಿಯಂತಾಗಿದೆ. ಒಂದು ಮಣಿಯೂ ಸಹ ಪ್ರತ್ಯೇಕಗೊಳಿಸಿದರೆ ಆ ಸರಪಳಿ ಸರಪಳಿಯಾಗಿರುವುದಿಲ್ಲ, ಅದೇ ರೀತಿ ಪ್ರಪಂಚದಿಂದ ಒಂದು ವಸ್ತುವನ್ನು ತೆಗೆದು ಹಾಕಿದರೆ ಪ್ರಪಂಚವೇ ನಾಶ ಹೊಂದುತ್ತದೆ. ಸಮುದ್ರ ಬತ್ತಿ ಹೋಗುವಂತೆ ಮಾಡಿದರೆ ನೀರು ಮುಗಿಯುವುದು, ನದಿಗಳನ್ನು ಬತ್ತುವಂತೆ ಮಾಡಿದರೆ ಸಮುದ್ರ ಬತ್ತಿ ಹೋಗುವುದು, ನೀರು ಹರಿಯುವ ಇಳಿಜಾರನ್ನು ದೂರ ಮಾಡಿದರೆ ಪ್ರಪಂಚದಲ್ಲೆಲ್ಲ ನೀರು ಹರಡುವುದು ಮತ್ತು ಭೂಮಿಯು ವಾಸಿಸಲು ಯೊಗ್ಯವಾಗಿರುವುದಿಲ್ಲ. ಪರ್ವತಗಳನ್ನು ಅಳಿಸಿಹಾಕಿದರೆ ಭೂಕಂಪಗಳು ಉಂಟಾಗುವುವು ಮತ್ತು ಮನುಷ್ಯನು ನಾಶಗೊಳ್ಳುವನು. ನದಿಗಳಿಗಾಗಿ ನೀರಿನ ಸಂಗ್ರಹವಿಲ್ಲದಿದ್ದರೆ, ಅದು ಏಕಕಾಲಕ್ಕೆ ಸಮುದ್ರ ಸೇರುವಂತಾದರೆ, ಲೋಕವು ಒಂದೆಡೆ ಪ್ರಕೋಪಗಳಿಗೆ ತುತ್ತಾಗುವುದು, ಇನ್ನೊಂದೆಡೆ ವರ್ಷವೆಲ್ಲ ನೀರು ದೊರೆಯುವಂತಾಗುವುದಿಲ್ಲ, ಚಂದ್ರ, ನಕ್ಷತ್ರಗಳನ್ನು ಅಳಿಸಿ ಹಾಕಿದರೆ ಅದರ ಕಾರಣದಿಂದ ಪ್ರಪಂಚದ ಮೇಲೆ ಉಂಟಾಗುವ ಪ್ರಭಾವ ದೂರವಾಗುವುದು. ಅದರಿಂದ ಭೂಮಿ ತನ್ನ ಸ್ಥಿತಿಯಲ್ಲಿ ಇರಲಾರದು. ಸೂರ್ಯನನ್ನು ಬೇರ್ಪಡಿಸಿದರೆ ಈ ಮೋಡಗಳ ಸಾಲುಗಳು ಉಂಟಾಗುವುದಿಲ್ಲ, ಜನರು ನೀರಿಗೆ ತತ್ತರಿಸಿ ಹೋಗುವರು ಮತ್ತು ಸಸ್ಯಗಳ ಬೆಳವಣಿಗೆ ನಿಲ್ಲುವುದು, ಮನುಷ್ಯನ ಆರೋಗ್ಯ ಹದಗೆಡುವುದು ಅದರಿಂದ ಪ್ರಾಣಿಗಳ ಆಹಾರವು ಸಹ ದೊರೆಯದತಾಗುವುದು. ಒಟ್ಟಿನಲ್ಲಿ ಇವೆಲ್ಲ ಪ್ರಪಂಚ ಸೇರಿ ಮನುಷ್ಯನ ಸೇವೆಗೈಯುತ್ತಿದೆ ಮತ್ತು ಅದರ ಪ್ರತಿಯೊಂದು ಭಾಗ ಇನ್ನೊಂದು ಭಾಗದ ಇರುವಿಕೆಗೆ ಕಾರಣವಾಗಿದೆ. ಪರಿಸ್ಥಿತಿ ಹೀಗಿರುವಾಗ ಎರಡು ದೇವರುಗಳ ವಿಶ್ವಾಸ ಹೇಗೆ ಸರಿಯಾಗಲು ಸಾಧ್ಯ? ಈ ಪ್ರಪಂಚವನ್ನು ಹಲವು ದೇವರುಗಳು ಸೇರಿ ಸೃಷ್ಟಿಸಿದೆ ಎಂದಾದರೆ, ಯಾವ ಭಾಗವು ಇನ್ನೊಂದು ಭಾಗಕ್ಕೆ ಸೇರುವಂತಾಗುವುದಿಲ್ಲ. ಅವು ಸ್ವತಂತ್ರವಾಗಿರುತ್ತವೆ. ಇಡೀ ಪ್ರಪಂಚ ಒಂದೇ ಸರಪಳಿಯಲ್ಲಿ ಸಿಲುಕಿಕೊಂಡ ಮಣಿಯಂತಾಗಿರುವಾಗ ಅವರ ಸೃಷ್ಟಿಕರ್ತನು ಏಕಮಾತ್ರವಿರುವನು ಎಂದು ನಂಬಬೇಕಾಗುತ್ತದೆ. ಇಲ್ಲವಾದ್ದಲ್ಲಿ ದೇವನಲ್ಲಿ ಇಡೀ ಪ್ರಪಂಚ ಸೃಷ್ಟಿಸಲು ಶಕ್ತಿಯಿರಲಿಲ್ಲ ಎನ್ನಬೇಕಾಗುತ್ತದೆ. ಆದುದರಿಂದಲೇ ಹಲವು ದೇವರುಗಳು ಸೇರಿ ಆ ಕಾರ್ಯವನ್ನು ಹಂಚಿಕೊಂಡರು, ಮೊದಲೇ ಯೋಚಿಸಿಕೊಂಡ ಯೋಜನೆ ಅನುಸಾರ ತಮ್ಮ ತಮ್ಮ ಭಾಗ ಪೂರ್ಣಗೊಳಿಸಿಕೊಂಡರು. ಅದರ ಈ ವಿಶ್ವಾಸ ಬಹುದೇವಾರಾಧಕರು ಸಹ ಒಪ್ಪುವುದಿಲ್ಲ. ಮತ್ತದು ಬುದ್ಧಿಗೆ ಎಟುಕುವ ಮಾತು ಅಲ್ಲ. ಏಕೆಂದರೆ ದುರ್ಬಲ ಅಸ್ತಿತ್ವ ಹೊಂದಿದವರು ದೇವರಾಗಲು ಸಾಧ್ಯವಿಲ್ಲ. ಆದುದರಿಂದ ಈ ಸಾಕ್ಷ್ಯದ ನೆಲೆಯಲ್ಲಿ ಒಂದೇ ಪರಿಣಾಮ ಕಾಣಬಹುದು. ಅದೇನೆಂದರೆ **"ಇಲಾಹುಕುಂ ಇಲಾಹು ವಾಹಿದ"** ನಿಮ್ಮ ದೇವನು ಏಕಮಾತ್ರ.

ಮೊದಲ ವಚನಗಳಲ್ಲಿ ತಿಳಿಸಲಾದ ವಿಷಯವೆಂದರೆ ಯಾರನ್ನು ನೀವು ದೇವರೆಂದು ನಂಬಿದ್ದೀರಿ ಅವರೆಲ್ಲರೂ ತೀರಿಹೋಗಿದ್ದಾರೆ. ಅವರೆಲ್ಲರೂ ತೀರಿಹೋದ ಮೇಲೆ ಉಳಿಯುವುದು ಒಂದೇ ದೇವರು ಅವನಿಗೆ ಮರಣವೆಂಬುದು ಇಲ್ಲ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–151, ಮುದ್ರಣ 2010 ಖಾದಿಯಾನ್)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 14 April 2022, Issue No. 15

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

### Vechta ನಗರದಲ್ಲಿ ಮಸ್ಜಿದ್ ಬೈತುಲ್ ಖಾದರ್ ಉದ್ಘಾಟನೆ.

* ಕಾರ್ಯಕ್ರಮದನ್ವಯ ನಾಲ್ಕೂವರೆ ಗಂಟೆಗೆ ಹುಝೂರ್ ಅನ್ವರ್ ಹೋಟೆಲಿನಿಂದ ಹೊರಗೆ ಆಗಮಿಸಿದರು ಮತ್ತು ಇಲ್ಲಿಂದ Veihta ನಗರಕ್ಕೆ ಹೊರಟರು Benlohn ಯಿಂದ vechta ದ ದೂರ 201 ಕಿ.ಮೀ ನಷ್ಟಿದೆ. ಸುಮಾರು ಒದು ಗಂಟೆ 50 ನಿಮಿಷದ ಪ್ರಯಾಣದ ನಂತರ 6 ಗಂಟೆ 20 ನಿಮಿಷಕ್ಕೆ vechta ಗೆ ತಲುಪಿದರು. ಅಲ್ಲಿ ಸ್ಥಳೀಯ ಸ್ತ್ರೀ ಪುರುಷ ಮತ್ತು ಬಾಲಕ ಬಾಲಕಿಯರು ತಮ್ಮ ಪ್ರೀತಿಯ ಇಮಾಮರಿಗೆ ಶುಭಾಗಮನ ಕೋರಿದರು. ಬಾಲಕ ಬಾಲಕಿಯರು ಉಚ್ಚ ಸ್ವರದಲ್ಲಿ ಪ್ರಾರ್ಥನಾ ಗೀತೆಗಳನ್ನು ಮತ್ತು ಸ್ವಾಗತ ಗೀತೆಗಳನ್ನು ಹೇಳುತ್ತಿದ್ದರು. ನೆರೆದಿದ್ದ ಸದಸ್ಯರೆಲ್ಲರೂ ಉಚ್ಚ ಸ್ವರದಲ್ಲಿ ಘೋಷಣೆಗಳನ್ನು ಕೂಗುತ್ತಿದರು. ಮಹಿಳೆಯರು ಸಹ ದರ್ಶನದ ಭಾಗ್ಯ ಪಡೆದರು.

ಹುಝೂರೆ ಅನ್ವರ್(ಅಬಿಅ) ವಾಹನದಿಂದ ಕೆಳಗಿಳಿಯುತ್ತಲೇ ಸ್ಥಳೀಯ ಅಮಿರ್ ಮುಕರ್ರಮ್ ಮುಬಶ್ಶಿರ್ ಅಹ್ಮದ್ ಸಾಜಿದ್ ಸಾಹಿಬ್, ಜಮಾಅತಿನ ಅಧ್ಯಕ್ಷರು ನಸೀರ್ ಅಹ್ಮದ್ ಟತ್ ಸಾಹಿಬ್ ಮತ್ತು ಸ್ಥಳೀಯ ಮುಬಲ್ಲಿಗ್ ಮುಕರ್ರಮ್ ಉಸ್ಮಾನ್ ನಮೀದ್ ಸಾಹಿಬ್, ಹಸ್ತಲಾಘವ ಮಾಡುತ್ತಾ ಸ್ವಾಗತ ಕೋರುವ ಭಾಗ್ಯ ಪಡೆದರು. ಹುಝೂರ್ ಅನ್ವರ್ ತಮ್ಮ ಕೈಯನ್ನು ಬೀಸುತ್ತಾ ಎಲ್ಲರಿಗೂ ಅಸ್ಸಲಾಮು ಅಲೈಕುಂ ಎಂದು ಹೇಳಿದರು. ಈ ಸಂದರ್ಭದಲ್ಲಿ Vechta ನಗರದ ಉಪ ಮೇಯರ್ Mr. Claus Dalinghaus ಮತ್ತು ರಾಜ್ಯ ಅಸೆಂಬ್ಲಿಯ ಸದಸ್ಯರಾದ Mr. Stephan siemer ಸಹ ಹುಝೂರ್ ಅನ್ವರ್ ಅವರಿಗೆ ಹಸ್ತಲಾಘವ ಮಾಡಿ ಸ್ವಾಗತಿಸುವ ಭಾಗ್ಯ ಪಡೆದರು.

* ಅನಂತರ ಹುಝೂರ್ ಮಸೀದಿಯ ಹೊರಾಂಗಣದ ಗೋಡೆಯುಲ್ಲಿ ಸ್ಥಾಪಿಸಲಾಗಿದ್ದ ಹಲಗೆಯು ಪರದೆಯುನ್ನು ಅನಾವರಣಗೊಳಿಸಿದರು ಮತ್ತು ದುಆ ಮಾಡಿಸಿದರು.

* ಆನಂತರ ಹುಝೂರ್ ಅನ್ವರ್ ಮಸೀದಿಯ ಒಳಗೆ ತೆರಳಿ ಝುಹರ್ ಅಸರ್ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ಅದರೊಂದಿಗೆ ಈ ಮಸೀದಿಯ ಉದ್ಘಾಟನಾ ಸಮಾರಂಭ ಕಾರ್ಯರೂಪಕ್ಕೆ ಬಂದಿತು.

* ಅನಂತರ ಹುಝೂರ್ ಅನ್ವರ್ ಮಸೀದಿಯು ಹೊರಾಂಗಣದಲ್ಲಿ ಚೇರಿಯ ಸಸ್ಯವನ್ನು ನೆಟ್ಟರು ಮತ್ತು vechta ನಗರದ ಉಪ ಮೇಯರ್ Mr. Claus Dalinghaus ಅವರು ನಾಷ್ಪಾತೆಯ ಸಸ್ಯ ನೆಟ್ಟರು.

* ಮಸೀದಿಯು ಉದ್ಘಾಟನಾ ಸಮಾರಂಭಕ್ಕಾಗಿ ಸ್ತ್ರೀ, ಪುರುಷರಿಗೆ ಪ್ರತ್ಯೇಕ ಮಾರ್ಕಿಸ್ ಹಾಕಲಾಗಿತ್ತು. ಹುಝೂರ್ ಪುರುಷರ ಮಾರ್ಕಿಗೆ ತೆರಳಿದರು. ಅಲ್ಲಿ "ಮಸ್ಜಿದ್ ಬೈತುಲ್ ಖಾದರ್ ಉದ್ಘಾಟನಾ ಸಮಾರಂಭ ಪವಿತ್ರ ಖುರ್‌ಆನ್‌ನ ಪಠಣದಿಂದ ಪ್ರಾರಂಭವಾಯಿತು. ಅದನ್ನು ಮಲಿಕ್ ನಮೀದ್ ಸಾಹಿಬ್ ಮತ್ತು ಅದರ ಜರ್ಮನ್ ಅನುವಾದ ಮುಕರ್ರಮ್ ರಮೀಝ್ ಅಹ್ಮದ್ ಸಾಹಿಬ್ ಪ್ರಸ್ತುತಪಡಿಸಿದರು.

### ಅಮೀರ್ ಸಾಇಬ್ ಜರ್ಮನಿ ಅವರ ಭಾಷಣ

ಅನಂತರ ಮುಕರ್ರಮ್ ಅಮಿರ್ ಸಾಹಿಬ್ ಜರ್ಮನಿ ತಮ್ಮ ಪರಿಚಯ ಭಾಷಣದಲ್ಲಿ Vechta ನಗರದ ಪರಿಚಯ ನೀಡುತ್ತಾ ಹೇಳಿದರು.

ಈ ನಗರ Niederiachsen ರಾಜ್ಯದ ಪಶ್ಚಿಮದಲ್ಲಿ 32 ಸಾವಿರ ಜನಸಂಖ್ಯೆ ಒಳಗೊಂಡಿದೆ. ಇದು vechta ಜಿಲ್ಲೆಯ ಅತ್ಯಂತ ದೊಡ್ಡ ನಗರವಾಗಿದೆ. ಈ ನಗರದ ಇತಿಹಾಸ 11 ಶತಮಾನಗಳಷ್ಟು ಹಳೆಯದ್ದಾಗಿದೆ. ಉತ್ತರ ಜರ್ಮನಿಯ ದಾಖಲಾಗುವ ಮಾರ್ಗಗಳಲ್ಲಿ ಒಂದು ಮಾರ್ಗದಲ್ಲಿ ಕೋಟೆ ನಿರ್ಮಿಸಲಾಯಿತು. ಈ ಕೋಟೆಯ ಅಕ್ಕ ಪಕ್ಕ ಮತ್ತೆ ನಿಧಾನವಾಗಿ ಜನರು ಬಂದು ವಾಸಿಸತೊಡಗಿದರು.

16ನೇ ಶತಮಾನದಲ್ಲಿ ಕೆಲ ಆಕ್ರಮಣಗಳು ಮತ್ತು ಮೂವತ್ತು ವರ್ಷಗಳ ಯುದ್ಧವಲ್ಲದೇ ಒಂದು ಸಲ ಒಂದು ವಿಶಾಲ ಭಾಗದಲ್ಲಿ ಬೆಂಕಿ ತಗುಲಿ ಈ ನಗರದ ಒಂದು ವಿಶಾಲವಾದ ಭಾಗವು ವಿನಾಶಗೊಂಡಿತು. ಅದಾಗ್ಯೂ vVechta ನಗರದ ನಿವಾಸಿಗಳು ಅದನ್ನು ಪುನರ್‌ನಿರ್ಮಾಣ ಮಾಡಿದರು.

ಈ ನಗರ ಕುದುರೆ ಸವಾರಿಗೆ ಪ್ರಸಿದ್ಧವಾಗಿದೆ. ಒಂದು ಲೋಕಮೇಳದ ಕಾರಣದಿಂದಾಗಿಯೂ ಪ್ರಸಿದ್ಧವಾಗಿದೆ. ಅದು 1924 ರಿಂದ ಪ್ರತಿವರ್ಷ ಸೆಕೆಗಾಲದಲ್ಲಿ ನಡೆದುಕೊಂಡು ಬಂದಿದೆ. ಈ ನಗರದಲ್ಲಿ ಅಹ್ಮದಿಯಾ ಜಮಾಅತ್ 1986 ರಂದು ಸ್ಥಾಪನೆಯಾಯಿತು. ಮುಕರ್ರಮ್ ಆಯೀಬ್ ಅಹ್ಮದ್ ಮುನೀರ್ ಸಾಹಿಬ್ ಸಂಘಟನಾ ಮುಬಲ್ಲಿಗರು ಇಲ್ಲಿ ಬಂದಿದ್ದರು. ಹೀಗೆ ಇಲ್ಲಿ ಜಮಾಅತ್ ಸ್ಥಾಪನೆಯಾಯಿತು. ಅದು ಪ್ರಾರಂಭದಲ್ಲಿ 17 ಸದಸ್ಯರನ್ನು ಒಳಗೊಂಡಿತ್ತು. ಈ ಜಮಾಅತ್ ತುಂಬಾ ಸಕ್ರಿಯವಾಗಿದೆ. ಅಲ್ಲಾಹನ ಅನುಗ್ರಹದಿಂದ ಈಗ ಒಂದು ಬಲಿಷ್ಠ ಹಾಗೂ ಸಕ್ರಿಯ ಜಮಾಅತ್ ಆಗಿ ಮೂಡಿ ಬಂದಿದೆ. ಸೃಷ್ಟಿ ಸೇವೆ ಮತ್ತು ಸಸಿ ನೆಡುವ ಕಾರ್ಯದಲ್ಲಿ ಈ ಜಮಾಅತ್ ಬಹಳಷ್ಟು ಕಾರ್ಯ ಮಾಡಿದೆ. ಈ ಜಮಾಅತ್ ಪ್ರಚಾರ ಕಾರ್ಯಕ್ರಮಗಳ ನೆಲೆಯಲ್ಲಿ ಪ್ರಚಾರ ಸಭೆಗಳನ್ನು ಆಯೋಜಿಸುವುದರಲ್ಲಿ ಮತ್ತು Book stall (ಪುಸ್ತಕ ಮಳಿಗೆ) ಪ್ರದರ್ಶನದಲ್ಲಿ ಒಳ್ಳೆಯ ಸಾಧನೆ ಸೇರಿದೆ.

ಮಸೀದಿಯ ಭೂಭಾಗವು 2010 ರಲ್ಲಿ ಖರೀದಿಸಲಾಗಿತ್ತು. ಈ ಭಾಗದ ವಿಸ್ತೀರ್ಣ 1998 ಚದುರ ಮೀಟರ್ ಇದೆ. ಈ ಫ್ಲಾಟ್ 55 ಸಾವಿರ ಯೂರೋದಲ್ಲಿ ಖರೀದಿಸಲಾಗಿತ್ತು. 11 ಅಕ್ಟೋಬರ್ 2011 ರಂದು ಹುಝೂರ್ ಅನ್ವರ್ ಈ ಮಸೀದಿಗೆ ಅಡಿಗಲ್ಲು ಹಾಕಿದರು. ಅಕ್ಟೋಬರ್ 2013 ರಲ್ಲಿ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಮಸೀದಿಯಲ್ಲಿ ಎರಡು ಸಭಾಂಗಣಗಳಿವೆ. 253 ಚಮೀ ನಷ್ಟು covered ಕ್ಷೇತ್ರವಿದೆ. ಮಸೀದಿಯ ಗೋಪುರದ ಎತ್ತರ 9 ಮೀಟರ್ ಇದೆ. ಗುಂಬಜಿನ ವಿಸ್ತೀರ್ಣ 6 ಮೀಟರ್ ಇದೆ. ಇಲ್ಲಿ 12 ವಾಹನಗಳು ಪಾರ್ಕ್ ಮಾಡುವಷ್ಟು ಜಾಗವಿದೆ. ಇಂದು 9 ಜೂನ್ ಮಂಗಳವಾರ ಈ ಮಸೀದಿಯ ಉದ್ಘಾಟನೆಯಾಗುತ್ತದೆ.

### ಮುಸ್ಲಿಮೇತರ ಜರ್ಮನ್‌ನ ಪರಿಚಯ ಭಾಷಣ

ಅಮೀರ್ ಸಾಹಿಬ್ ಜರ್ಮನಿಯರ ಪ್ರಸ್ತಾವಿತ ಭಾಷಣದ ನಂತರ ಉಪಮೇಯರ್ Claus Dalinghaus ತಮ್ಮ ಪರಿಚಯ ಭಾಷಣ ಪ್ರಸ್ತುತಪಡಿಸಿದರು.

ಗೌರವಾನ್ವಿತರಾದ ಖಲೀಫತುಲ್ ಮಸೀಹ್! ಈ ಕಾರ್ಯಕ್ರಮಕ್ಕೆ ನನ್ನನ್ನು ಆಹ್ವಾನಿಸಿದಕ್ಕೆ ನಿಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ನಮ್ಮ ನಗರದ ಸುಂದರತೆಯ ಬಗ್ಗೆ ವಿವರಣೆ ನೀಡಿದ ಬಗ್ಗೆಯೂ ಕೃತಜ್ಞನಾಗಿದ್ದೇನೆ. ಮಸೀದಿಯ ಉದ್ಘಾಟನೆ ನಿಮಗೂ, ನನಗೂ ಅತ್ಯಂತ ವೈಶಿಷ್ಟ್ಯಪೂರ್ಣ ವಿಷಯುವಾಗಿದೆ. ಈ ಸಂದರ್ಭದಲ್ಲಿ ಕಾರ್ಯಗಾರಿ ಸಮಿತಿಗೆ ಶುಭಾಶಯಗಳನ್ನು ಹೇಳುವೆನು.

ಅಹ್ಮದಿಯಾ ಮುಸ್ಲಿಂ ಜಮಾಅತ್ vechta ಗೆ ಈ ಮಸೀದಿ ವಿಶೇಷ ಮಹತ್ವ ಹೊಂದಿದೆ. ಇದು ಕೇವಲ ಭೇಟಿಯಾಗುವ ಸ್ಥಳವಲ್ಲಿ ಬದಲು ಇಸ್ಲಾಂ ಧರ್ಮವು ಇಲ್ಲಿಯ ಇತರ ಧರ್ಮದಂತೆಯೇ ಈ ನಗರದ ಒಂದು ಅಂಗವಾಗಿದೆ.

**(ಮುಂದುವರಿಯುವುದು)**

**ತಿದ್ದುಪಡಿ ಪ್ರಕಟಣೆ**

ಬದರ್ ಸಂಚಿಕೆ-14 ದಿನಾಂಕ 07 ಏಪ್ರಿಲ್ 2022ರ ಸಂಚಿಕೆಯಲ್ಲಿ ಪುಟ ಸಂಖ್ಯೆ 3ರಲ್ಲಿ ಪ್ರಕಟವಾದ ಜುಮುಆ ಖುತುಬದ ದಿನಾಂಕವು ಕಣ್ತಪ್ಪಿನಿಂದ 28/01/2022 ಪ್ರಕಟವಾಗಿದ್ದು ಅದು 04/03/2022 ಎಂದು ಓದಿಕೊಳ್ಳಬೇಕಾಗಿ ವಿನಂತಿ. **(ಸಂಪಾದಕ)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.